
ಗೌರಿ ಲಂಕೇಶರ


ಲಂಕೇಶ್

ಮಾರ್ಚ್ 7, 2007 ◆ ರಂಜನೆ ◆ ಬೋಧನೆ ◆ ಪ್ರಬೋಧನೆ ಬೆಲೆ ರೂ. 10/-



ಸೋನಿಯಾಗೆ ಶರಣಾದ ಗೌಡ?






ಮುಂಗಾರು ಮಳೆ ಬಿತ್ತು ಮನಿಯಾ ಬದಲಾಯಿತು

ರಾಧಿಕಾ
ನೆ
ಡ್

ಸಿಎಂ ಎಸ್ಕೇಪ್!



ಲಂಕೇಶ್



ಟಾಟಾ ಕೋರಸ್ ಕೊಂಡಿತು, ಭಾರತದ ಖಜಾನೆಗೆ ಕನ್ನ ಕೊರೆಯಿತು!

ಭಾರತದ ಹೆಮ್ಮೆಗೆ ಮತ್ತೊಂದು ಕೋಡು. ಜಾಗತೀಕರಣದ ಕಾಲಘಟ್ಟದಲ್ಲಿ ಭಾರತವನ್ನು ವಿದೇಶಿ ಬಂಡವಾಳ ಸಂಪೂರ್ಣ ಆಕ್ರಮಿಸಿಕೊಂಡುಬಿಡುತ್ತದೆ ಎಂಬ ಆತಂಕ ಇರುವ ಹೊತ್ತಿನಲ್ಲೇ ಭಾರತದ ಉದ್ಯಮಿಗಳು ಯೂರೋಪಿನ ಕಂಪನಿಗಳನ್ನೇಕೆ ಕೊಂಡುಕೊಳ್ಳುತ್ತಿದ್ದಾರೆ. ಮೊನ್ನೆ ಭಾರತ ಮೂಲದ ಲಕ್ಷ್ಮಿ ಮಿತ್ತಲ್ ಯೂರೋಪಿನ ಆರ್ಸೆಲಾರ್ ಎಂಬ ಕಂಪನಿಯನ್ನು ಕೊಂಡು ಕೊಂಡರೆ, ನಿನ್ನೆ ಟಾಟಾ ಕಂಪನಿ ಬ್ರಿಟನ್ನಿನ ಕೋರಸ್ ಎಂಬ ದೈತ್ಯ ಸ್ಟೀಲ್ ಕಂಪನಿಯನ್ನು ಕೊಂಡುಕೊಂಡಿದೆ. ನಾಳೆ ವಿಜಯ್ ಮಲ್ಯ ಸಹ ಮತ್ತೊಂದು ವಿದೇಶಿ ಕಂಪನಿಯನ್ನು ಕೊಂಡುಕೊಳ್ಳುತ್ತಾರೆ ಇರಲಿ.

ಮೊನ್ನೆ ಟಾಟಾದವರು ಕೋರಸ್ ಕಂಪನಿಯನ್ನು ಕೊಂಡು ಕೊಂಡ ನಂತರ ವಿಶ್ವದಲ್ಲೇ ಟಾಟಾ ಸ್ಟೀಲ್ ಕಂಪನಿಯ ಸ್ಥಾನ ಐದನೆಯದಕ್ಕೆ ಏರಿದೆ. ಎಂಥ ಹೆಮ್ಮೆ ಭಾರತೀಯರಿಗೆ? ಆದರೆ ವಿಷಯವೇನೆಂದರೆ ಇಂಥ ದೈತ್ಯ ಕಂಪನಿಯನ್ನು ಕೊಳ್ಳಲು ಟಾಟಾದವರು 53,000 ಕೋಟಿಯನ್ನು ತೆರಬೇಕಿದೆ. ಇಷ್ಟು ಹಣ ಎಲ್ಲಿಂದ ತರುತ್ತಾರೆ? ಟಾಟಾದವರು ಎಷ್ಟೇ ಶ್ರೀಮಂತರಾಗಿದ್ದರೂ ತನ್ನ ಹಳೆ ಕಂಪನಿಯ ಲಾಭದಿಂದ ಅಷ್ಟು ಹಣ ತೆಗೆಯಲು ಬರುವುದೇ ಇಲ್ಲ. ಹಾಗೇನಾದರೂ ಆದಲ್ಲಿ ಟಾಟಾ ಸಾಮ್ರಾಜ್ಯ ಕುಸಿಯುತ್ತದೆ. ಹಾಗಿದ್ದಲ್ಲಿ ಅಷ್ಟೊಂದು ಹಣ ಎಲ್ಲಿಂದ ಉದುರುತ್ತೆ? ನಮ್ಮ ನಿಮ್ಮ ಜೇಬಿಂದ ಉದುರುತ್ತೆ!!

ಏಕೆಂದರೆ ಟಾಟಾ ಕೋರಸ್ ಅನ್ನು ಕೊಂಡ ಮರುಕ್ಷಣವೇ ಭಾರತದ ಹಣಕಾಸು ಮಂತ್ರಿ ಚಿದಂಬರಂ ಅವರು ಒಂದು ಘೋಷಣೆ ಮಾಡಿದರು. ಟಾಟಾದ ಈ ಡೀಲ್ ಯಶಸ್ವಿ ಆಗಲು ಭಾರತ ಸರ್ಕಾರ ಎಲ್ಲಾ ಸಹಾಯ ಮಾಡುವುದೆಂದು. ಆದರಲ್ಲಿ ಅತಿ ಮುಖ್ಯವಾದದ್ದು ಹಣಕಾಸು ನೀಡುವ ಸಹಕಾರವೇ. ಭಾರತ ಸರ್ಕಾರಕ್ಕೆ ಟಾಟಾದವರಿಗೆ ಮತ್ತು ಅವರಂಥವರಿಗೆ ನೀಡಲು ಅಷ್ಟೊಂದು ಹಣ ಎಲ್ಲಿಂದ ಬಂತು? ಅದೂ ಬಿಪಿಎಲ್ ಕಾರ್ಡುದಾರರಿಗೆ ರೇಷನ್ ನೀಡಲೇ ಹಣವಿಲ್ಲವೆಂದು ಪರಿತಪಿಸುತ್ತಿರುವಾಗ?

ಆದೇ ಉದಾರೀಕರಣದ ಮಾಯಾಜಾಲ! ನಮ್ಮ ದೇಶದ ಬಡವರ ಕನಿಷ್ಠ ಜೀವನ ಖಾತರಿ ಮಾಡಲು ಸರ್ಕಾರದ ಬಳಿ ಹಣವಿಲ್ಲದೇ ಹೋದರೂ ಟಾಟಾದಂತಹ ಉದ್ಯಮಿಗಳಿಗೆ ಅತ್ಯಂತ ಸುಲಭ ದರದಲ್ಲಿ ಹಣಕಾಸು ಬಂಡವಾಳ ನೀಡುವುದಕ್ಕೆ ಕೊಪ್ಪರಿಗೆ ಹಣವಿರುತ್ತದೆ. ಭಾರತಕ್ಕೆ ಅತಿ ಹೆಚ್ಚು ವಿದೇಶಿ ಬಂಡವಾಳ ಬರಬೇಕೆಂದರೆ ಭಾರತದಲ್ಲಿ ಅತಿ ಕಡಿಮೆ ದರದಲ್ಲಿ ಹೆಚ್ಚೆಚ್ಚು ಬಂಡವಾಳ ದೊರೆಯುವಂತೆ ಮಾಡುವುದು ಅತಿ ಮುಖ್ಯವೆಂದು ವಿಶ್ವಬ್ಯಾಂಕ್ ತಾಕೀತು ಮಾಡಿದೆ. ಆ ಆದೇಶವನ್ನು ಚಾಚೂತಪ್ಪದೆ ಪಾಲಿಸುತ್ತಿರುವ ನಮ್ಮ ಸರ್ಕಾರ ದೇಶೀಯ ಮತ್ತು ವಿದೇಶೀಯ ಹೂಡಿಕೆದಾರರಿಗೆ ಸುಲಭದ ದರದಲ್ಲಿ ಬಂಡವಾಳ ಸಾಲವನ್ನು ಒದಗಿಸಲು ದೊಡ್ಡ ಮಟ್ಟದಲ್ಲಿ ಹಣ ಸಂಗ್ರಹ ಮಾಡುತ್ತಿದೆ. ಹೇಗೆ?

ಇತ್ತೀಚೆಗೆ ಸರ್ಕಾರ ಭವಿಷ್ಯ ನಿಧಿ ಮತ್ತು ಪಿಂಚಣಿಯ ಬಗ್ಗೆ ಹೊಸ ನೀತಿಯನ್ನು ಪ್ರಕಟಿಸಿದೆ. ಅದರ ಪ್ರಕಾರ ಎಲ್ಲಾ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಶ್ರಮದ ಉಳಿತಾಯದ ಹಣವಾದ ಭವಿಷ್ಯ ನಿಧಿಗೆ ಕಾರ್ಮಿಕರ ಉಳಿತಾಯಕ್ಕೆ ಸರಿ ಸಮನಾದ ಮೊತ್ತವನ್ನು ಸರ್ಕಾರ ಮತ್ತು ಕಂಪನಿಯ ಯಜಮಾನ ಕೊಡಬೇಕಾಗುತ್ತಿತ್ತು. ಅದೇರೀತಿ ಪಿಂಚಣಿಗೂ ಸಹ. ಆದರೆ ಈಗ ಸರ್ಕಾರ ಹೊಸ ನೀತಿಯೊಂದನ್ನು ಜಾರಿಗೆ ತಂದು ಇನ್ನು ಮುಂದೆ ತಾನು ಪಿಂಚಣಿಯನ್ನಾಗಲಿ, ಭವಿಷ್ಯ ನಿಧಿಗೆ ತನ್ನ ಪಾಲನ್ನಾಗಲಿ ಕೊಡುವುದಿಲ್ಲವೆಂದು ಪ್ರಕಟಿಸಿದೆ. ಅದರ ಬದಲಿಗೆ ಆ ಇಡೀ ಮೊತ್ತವನ್ನು ಮಾರುಕಟ್ಟೆಯಲ್ಲಿ ಹೂಡಿ ಅದರಿಂದ ಬರುವ ಲಾಭದ ಪಾಲನ್ನೇ ನೀಡುವುದಾಗಿ ಘೋಷಿಸಿದೆ. ಅಂದರೆ ಇಡೀ ಭವಿಷ್ಯ ನಿಧಿಯನ್ನು ಇಡುಗಂಟಾಗಿ ಬಂಡವಾಳ ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಟಾಟಾದಂತಹ ಕಂಪನಿಗೆ ದೊರಕುವಂತೆ ಮಾಡುತ್ತದೆ. ಅದು ಗೆದ್ದರೆ ನಾವೂ ಗೆದ್ದಂತೆ. ಅದು ಬಿದ್ದರೆ ನಾವೂ ಬಿದ್ದಂತೆ! ಈಗ ಟಾಟಾಗೆ ಸರ್ಕಾರ ಖಾತರಿ ನೀಡಿರುವ ಹಣಕಾಸು ಸಹಾಯವೂ ಈ ಮೂಲದ್ದೇ. ಟಾಟಾ ಕೋರಸ್ ಕೊಂಡಿದೆ, ಭಾರತಿಯರ ಜೇಬಿಗೆ ಕನ್ನ ಕೊರೆದಿದೆ!

ಚಾರ್ವಾಕ

- ಶಿವಸುಂದರ್-

ಕಂಬಾಲಪಲ್ಲಿಯ ಗಾಯದ ಮೇಲೆ ಖೈರ್ಲಾಂಜಿಯ ಬರೆ

ಕಂಬಾಲಪಲ್ಲಿಯ ಗಾಯ ಇನ್ನೂ ಆರೇ ಇಲ್ಲ. ಕಂಬಾಲಪಲ್ಲಿಯಲ್ಲಿ ಸಜೀವ ದಹನಕ್ಕೊಳಗಾದ ದಲಿತರ ಗುಡಿಸಲಿಂದ ಬರುತ್ತಿದ್ದ ಸುಟ್ಟ ವಾಸನೆ ಆರುವ ಮುನ್ನವೇ ಕರ್ನಾಟಕದ ಉಚ್ಚ ನ್ಯಾಯಾಲಯ ಅದರಲ್ಲಿ ಆರೋಪಿತರಾದ ಎಲ್ಲರನ್ನೂ ಬಿಡುಗಡೆ ಮಾಡಿ ಕಂಬಾಲಪಲ್ಲಿ ಘಟನೆಯನ್ನೇ ನಿಗೂಢ ಮಾಡಿ ಬಿಟ್ಟಿತು. ಯಾರೂ ದಹನ ಮಾಡಿಲ್ಲ ಎಂದರೆ ದಲಿತರೇ ತಮ್ಮ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಕೊಂಡರೇ? ನ್ಯಾಯಾದೇಶ ವಿರುದ್ಧವಾಗಿ ಬರಲು ಕಾರಣ ಸಾಕ್ಷಿಗಳು ಪ್ರತಿಕೂಲವಾದದ್ದಂತೆ. ಎಂತೆಂಥ ನಿರಪರಾಧಿಗಳನ್ನೆಲ್ಲಾ ಮಂಪರು ಪರೀಕ್ಷೆಗೆ ಗುರಿ ಮಾಡಿ ಸತ್ಯವನ್ನು ಹೊರತೆಗೆಯುವ ಪ್ರಯತ್ನವನ್ನು ಸರ್ಕಾರ ನಡೆಸುತ್ತಿರುವಾಗ ಈ ಸಾಕ್ಷಿಗಳನ್ನೇಕೆ ಮಂಪರು ಪರೀಕ್ಷೆಗೆ ಗುರಿ ಮಾಡಿ ಸತ್ಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನಡೆಸಬಾರದಾಗಿತ್ತು?



ಯಾಕೆಂದರೆ ಕಾಶ್ಮೀರಿ ಉಗ್ರಗಾಮಿಗಳನ್ನು ಮಟ್ಟ ಹಾಕಬೇಕಿರುವುದು ಈ ದೇಶದ ಆಳುವ ವರ್ಗದ ಅಗತ್ಯ. ದಲಿತರ ಬದುಕಿಗೆ ರಕ್ಷಣೆ ಕೊಡುವುದು ಈ ಸರ್ಕಾರದ ಅನಿವಾರ್ಯ ಕರ್ತವ್ಯವೇನಲ್ಲ, ಇರಲಿ.

ಈಗ ಈ ಗಾಯ ಆರುವ ಮುನ್ನವೇ ಮತ್ತೊಮ್ಮೆ ಈ ದೇಶದ ನ್ಯಾಯಾಲಯಗಳು ಗಾಯದ ಮೇಲೆ ಬರೆ ಹಾಕುವಂತೆ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ಅತ್ಯಂತ ಬೀಭತ್ಸವಾಗಿ ದಲಿತ ಮಹಿಳೆಯೊಬ್ಬರ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಮಾಡಿದ್ದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದ 45 ಜನರಲ್ಲಿ 35 ಜನರನ್ನು ಬಿಡುಗಡೆಗೊಳಿಸಿದೆ. ಅದರಲ್ಲಿ ಒಬ್ಬರು ಈ ಪ್ರಕರಣದ ಬಗ್ಗೆ ದೂರು ಕೊಟ್ಟರೂ ಕೇಸು ದಾಖಲು ಮಾಡದ ಪೋಲಿಸ್ ಇನ್ಸ್‌ಪೆಕ್ಟರ್! ಸಿಬಿಐ ನೀಡಿರುವ ಅಫಿಡವಿಟ್ಟಿನಲ್ಲಿ ಇವರೆಲ್ಲರನ್ನೂ ಬಿಡುಗಡೆಗೊಳಿಸಬೇಕೆಂದು ಕೋರಿದೆ. ಮಿಕ್ಕೆಲ್ಲಾ ಪ್ರಕರಣಗಳಲ್ಲಿ ಆಳುವ ವರ್ಗಗಳ, ಈ ದೇಶದ ಶ್ರೀಮಂತರ, ಮೇಲ್ಜಾತಿ ಭೂಮಾಲೀಕರ ಆಸಕ್ತಿಗಳನ್ನು ಕಾಪಾಡಲು ಸಂವಿಧಾನದ 9ನೇ ಪರಿಚ್ಛೇದವನ್ನೇ ಬದಲಾಯಿಸಲು ಸಿದ್ಧವಾಗುವ ಸುಪ್ರೀಮ್‌ಕೋರ್ಟು ದಲಿತರ ಮೇಲಿನ ಅತ್ಯಾಚಾರದ ಪ್ರಶ್ನೆ ಬಂದಾಗ ಕಾನೂನನ್ನು ಇಷ್ಟು ಸುಲಭವಾಗಿ ಮೇಲ್ಜಾತಿಗಳಿಗೆ ಒತ್ತೆ ಇಡುವುದೇಕೆ? ದಲಿತರ ಬದುಕು ಮತ್ತು ಸಾವು ಈ ದೇಶಕ್ಕೆ, ಸಮಾಜಕ್ಕೆ, ಕೋರ್ಟಿಗೆ ಅಷ್ಟೊಂದು ಚೀಪ್ ಆಗಿದೆಯೆಂದೇ ಇದರರ್ಥವಲ್ಲವೇ?

ವಾರದ ದಿಗ್ಭ್ರಾಂತಿ

"ಕಳೆದ ಮೂರು ವರ್ಷಗಳಲ್ಲಿ 1301 ರೈತರು ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರಲ್ಲಿ ಹಾಸನ ಜಿಲ್ಲೆ ಮೊದಲ ಸ್ಥಾನದಲ್ಲಿದೆ ಮತ್ತು ಅದರಲ್ಲಿ 779 ಪ್ರಕರಣಗಳು ಪರಿಹಾರಕ್ಕೆ ಅಯೋಗ್ಯವೆಂದು ತಿರಸ್ಕರಿಸಲಾಗಿದೆ.."

- ಸದನದಲ್ಲಿ ಮಂತ್ರಿಗಳು

ತಡವಾಗಿ ಬಂದ ತಿಳಿವಳಿಕೆ



"ನಕ್ಸಲಿಸಂನಿಂದ ತೆಲಂಗಾಣ ಹಿಂದುಳಿದಿಲ್ಲ, ತೆಲಂಗಾಣ ಹಿಂದುಳಿದಿದ್ದರಿಂದ ನಕ್ಸಲಿಸಂ ಬಂದಿದೆ."

- ವಿಜಯಶಾಂತಿ, ನಟಿ-ರಾಜಕಾರಣಿ

ವಾರದ ಆಘಾತ

"ಹಿಂದೂ ಧರ್ಮದಿಂದ ಬೇರೆ ಮತಗಳಿಗೆ ಮತಾಂತರಗೊಂಡ ದಲಿತರಿಗೆ ಮೀಸಲಾತಿ ಸವಲತ್ತು ಕೊಡುವ ಅಗತ್ಯವಿಲ್ಲ. ಏಕೆಂದರೆ ಮೀಸಲಾತಿ ಇರುವುದು ಅಸ್ಪೃಶ್ಯರಿಗೆ ಮತ್ತು ಬೇರೆ ಧರ್ಮಗಳಲ್ಲಿ ಜಾತೀಯತೆ ಇಲ್ಲ."

- ಫಕೀರ್ ಭಾಯ್ ವಘೇಲ, ರಾಷ್ಟ್ರೀಯ ಎಸ್.ಸಿ.ಎಸ್.ಟಿ. ಅಯೋಗದ ಅಧ್ಯಕ್ಷ

ವಾರದ ಸುಳ್ಳು

"ಕಾಶ್ಮೀರದಲ್ಲಿ ಭದ್ರತಾ ಪಡೆಗಳು 1989 ರಿಂದ ಕೇವಲ 89 ಜನರನ್ನು ಮಾತ್ರ ಕೊಂದಿವೆ."

- ಮುಫ್ತಿ ಮುಹಮದ್ ಸಯೀದ್

ಬಂಡಲ್‌ಬಾಜ್

"ನಿಮ್ಮ ತತ್ವಕ್ಕೆ ಬದ್ಧರಾಗಿ ದೇವೇಗೌಡರ ಜೊತೆಗೇ ಇದ್ದಿದ್ದರೆ ಹೀಗಾಗುತ್ತಿತ್ತೆ?"

- ಯಡಿಯೂರಪ್ಪ, ಸಿದ್ದರಾಮಯ್ಯನವರನ್ನು ಉದ್ದೇಶಿಸಿ

ವಾರದ ಪ್ರಹಸನ

"ಕಾವೇರಿ ತೀರ್ಪು ಕರ್ನಾಟಕಕ್ಕೆ ವಿರುದ್ಧವಾಗಿ ಬರಲು ಕಾರಣವೇನೆಂದರೆ ನ್ಯಾಯಾಧಿಕರಣ ಇದ್ದ ಜಾಗದ ವಾಸ್ತು ಸರಿ ಇರಲಿಲ್ಲ, ದಕ್ಷಿಣಾಭಿಮುಖವಾಗಿ ಕೂತಿದ್ದ ನ್ಯಾಯಾಧೀಶರ ಸೀಟಿಂಗ್ ವ್ಯವಸ್ಥೆಯ ವಾಸ್ತುವಿನಲ್ಲಿ ಸಮಸ್ಯೆ ಇತ್ತು!!"


- ಪತ್ರಿಕಾ ವರದಿ

ವಾರದ ಅವಿವೇಕ

"ಭಾರತದಲ್ಲಿ ತಂಬಾಕು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲು ವಿದೇಶಿ ಬಂಡವಾಳಕ್ಕೆ, ವಿದೇಶಿ ಸಿಗರೇಟ್ ಕಂಪನಿಗಳಿಗೆ ಅವಕಾಶ ಕೊಡಿ."

- ಜವರೇಗೌಡ, ತಂಬಾಕು ಬೆಳೆಗಾರರ ಒಕ್ಕೂಟದ ಪ್ರತಿನಿಧಿ

ವಾರದ ವಿವೇಕ



"ತನ್ನ ಸ್ವಾತಂತ್ರ್ಯದ ಭದ್ರತೆಯ ಬಗ್ಗೆ ಕಾಳಜಿಯುಳ್ಳವನು ಅದೇ ರೀತಿ ತನ್ನ ಶತ್ರುವಿನ ಸ್ವಾತಂತ್ರ್ಯವೂ ದಮನಕ್ಕೊಳಗಾಗದಂತೆ ಕಾಯ್ದುಕೊಳ್ಳಬೇಕು. ಆ ಕರ್ತವ್ಯವನ್ನು ಅವನು ಉಲ್ಲಂಘಿಸಿದರೆ ಅದೇ ಪರಿಸ್ಥಿತಿ ಅವನಿಗೂ ಬರಬಹುದು."

- ಟಾಮ್ ಪೈನ್, ಅಮೆರಿಕದ ಪ್ರಸಿದ್ಧ ಕ್ರಾಂತಿಕಾರಿ


No Comments

"ದುರದೃಷ್ಟವಶಾತ್ ನಾವು ವರದಿಯಲ್ಲಿ ದೋಷಗಳನ್ನು ಮೊದಲೇ ಗುರುತಿಸಲಾಗಲಿಲ್ಲ"

-ಮಾಶೆಲಕರ್, ಭಾರತೀಯ ಪೇಟೆಂಟ್ ಕಾನೂನನ್ನು ಬಹುರಾಷ್ಟ್ರೀಯ ಕಂಪನಿಗ[ಳ] ಪರವಾಗಿ ರೂಪಿಸಲು ಯತ್ನಿಸಿ ಸಿಕ್ಕಿಬಿದ್ದ ವಿಜ್ಞಾ[ನಿ]

"ಎಚ್.ಎ.ಎಲ್ ಕಂಪನಿ ನಿಮಗೆ ಸುಳ್ಳು ಹೇಳಿ[...] ದಿನಗೂಲಿ ನೌಕರರ ನೇಮಕಾತಿ ಪಟ್ಟಿ ತೋರಿಸಿ ಅದ[...] ಖಾಯಂ ಪಟ್ಟಿ ಎಂದು ನಿಮ್ಮನ್ನು ನಂಬಿಸಿದ್ದಾರೆ."

-ಎಚ್.ಎ.ಎಲ್. ಕಂಪನಿಯಲ್ಲಿ ಕನ್ನಡಿಗ[...] ಉದ್ಯೋಗ ಸಿಗುತ್ತಿಲ್ಲ ಎಂದು ದೂರು[...] 'ಮುಖ್ಯಮಂತ್ರಿ' ಚಂದ್ರು ಸರಕಾರ[...] ಹೇಳಿ[...]



"ಮುಖ್ಯಮಂತ್ರಿಗಳ[...] ಸರ್ಕಾರವನ್ನು ರಕ್ಷಿಸಿಕೊಳ್ಳಲು[...] ಎಂ.ಪಿ.ಪ್ರಕಾಶರಂತಹ ಒಳ್ಳೆ[...] ವಕೀಲರನ್ನು ಇಟ್ಟುಕೊಂಡಿದ್ದಾರೆ. ಆದರೆ [...] ಆ ವಕೀಲರು ತೆಗೆದುಕೊಳ್ಳುತ್ತಿರುವ ಕೇಸುಗಳೆಲ್ಲಾ ಕೆಟ್ಟ ಕೇಸುಗಳೇ. ಹೀಗಾಗಿ ಪ್ರಕಾಶರೇ, ಮುಂದೆ ಯಾ[...] ನಿಮಗೆ ಕೇಸನ್ನೇ ಕೊಡದೆ ಹೋಗಬಹುದು."

- ಮಲ್ಲಿಕಾರ್ಜುನ ಖ[ರ್ಗೆ]

"ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನಡೆಯುತ್ತಿರು[...] ಭ್ರಷ್ಟಾಚಾರದಿಂದ ಸರ್ಕಾರಕ್ಕೆ ಪ್ರತಿ ವರ್ಷ 250 ಕೋ[ಟಿ] ನಷ್ಟವಾಗುತ್ತಿದೆ."

- ಪತ್ರಿ ಬಸವನಗೌಡ, ಉಪಲೋಕಾಯು[ಕ್ತ]

ನಂಬಿದ್ರೆ ನಂಬಿ ಬಿಟ್ರೆ ಬಿಡಿ:




"ಈ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿದರೆ ಇರಾಕ್ ಯುದ್ಧ ವೈದ್ಯಕೀಯ ವೆಚ್ಚದ ಇಳಿತ, ಶಿಕ್ಷಣದ ವೆಚ್ಚದ ಇಳಿತ ಇನ್ನಿತರ ಎಲ್ಲದರ ಬಗ್ಗೆಯೂ ಹೊಸ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು."

- ಅಮೆರಿಕದ ಅಧ್ಯಕ್ಷ ಸ್ಥಾನ[ಕ್ಕೆ] ಸ್ಪರ್ಧಿಸುತ್ತಿರುವ ಡೆಮಾಕ್ರಟಿಕ್ ಪಕ್ಷ[ದ] ಅಭ್ಯರ್ಥಿ ಒಬಾಮ[...]

ಉಲ್ಟಾ-ಪಲ್ಟಾ

"ಮಾರ್ಚ್ 31ರೊಳಗೆ ರೈತರ ಸಾಲ ಮ[ನ್ನಾ] ಮಾಡಿ ರೈತರ ಆತ್ಮಹತ್ಯೆ ತಡೆಯಲಾಗುವುದು."

- ಜೆ. ಟಿ. ದೇವೇಗೌ[ಡ]



"ಸಾಲಮನ್ನಾ ಮಾಡುವುದರಿಂದ ರೈತರ ಆತ್ಮಹತ್ಯೆಗಳನ್ನು ತಡೆಯಲಾಗುವುದಿಲ್ಲ."

- ಉದಾ[ಸಿ]


ವಾರದ ಸತ್ಯ

"ಜಗತ್ತಿನ ಯುವ ಜನತೆಯಲ್ಲಿ ಶೇ.35ರ[...] ಜನ ನಿರುದ್ಯೋಗಿಗಳಾಗಿದ್ದಾರೆ ಅಥವಾ [...] ಉದ್ಯೋಗಿಗಳಾಗಿದ್ದು ದಿನಕ್ಕೆ ಕೇವಲ ಎರಡ[ು] ಡಾಲರ್‌ಗಿಂತ ಕಡಿಮೆ ಆದಾಯ ಪಡೆಯು[ವ] ದುಸ್ಥಿತಿಯಲ್ಲಿದ್ದಾರೆ."

-2006ರ ಐ.ಎಲ್.ಒ ವರ[ದಿ]

ವಾರದ ವಿಕೃತಿ

"ಪುರುಷ ಮದುವೆಗೆ ಮೊದಲು ಸ್ವತಂತ್ರ, ಮದುವೆಯ ನಂತರ ಸ್ವತಂತ್ರಳಾಗುತ್ತಾಳೆ. ಮದುವೆಗೆ ಮೊದಲು ಮುದುಗಿ ತಲೆಯಾಡಿಸುತ್ತಾಳೆ. ಆಮೇಲ ನಾಲಿಗೆಯಾಡಿಸುತ್ತಾಳೆ. ಪುರುಷ ಮದುವೆಗೆ ಮೊದಲು ನಾಲಿಗೆಯಾಡಿಸುತ್ತಾನೆ ಮತ್ತು ಮದುವೆಯ ನಂತರ ತಲೆಯಾಡಿಸುತ್ತಾನೆ. ಮದುವೆಯಾಗದಿರುವುದು ಒಂದು ದುಃಖವಾದರೆ ಆಗುವುದು ಸಾವಿರ ದುಃಖ. ಸುಖ[ೀ] ಜೀವನ ಬೇಕಾದರೆ ಎಲ್ಲವನ್ನೂ ಮಾಡು. ಆದ[ರೆ] ಮದುವೆ ಮಾತ್ರ ಆಗಬೇಡ."



-'ಕ್ರಾಂತಿಕಾರಿ' ಜೈನಮುನಿ ತರುಣಸಾಗ[ರ]

ಸುಶಿಕ್ಷಿತರ ಪುಂಡಾಟ, ಸಾಮಾನ್ಯರ ಪೇಚಾಟ

ಖಾಕಿ ಬಟ್ಟೆ ಹೇಗೆ ಪೊಲೀಸರಿಗೆ ದರ್ಪ ...ದುತ್ತದೆಯೋ ಹಾಗೆಯೇ ಕರಿಕೋಟು ನಮ್ಮ ...ೀಲರಿಗೂ ದರ್ಪ ನೀಡುತ್ತಿರುವಂತಿದೆ. ಮೊನ್ನೆ ...ಸಹಾಯಕ ಮಹಿಳೆಯೊಬ್ಬಳ ಮೇಲೆ ಹಾಸನದ ...ಲವು ವಕೀಲರು ನಡೆಸಿರುವ ಅಮಾನುಷ ...ಲ್ಲೆಯ ಹಿನ್ನೆಲೆಯಲ್ಲಿ, ಮತ್ತು ಅಂತಹದ್ದೇ ...ಕರಣಗಳು ಈ ಹಿಂದೆ ನಡೆದಿರುವುದನ್ನು ...ನುನದಲ್ಲಿಟ್ಟುಕೊಂಡು ಈ ಮಾತನ್ನು ...ೇಳುತ್ತಿದ್ದೇನೆ.

ಅನ್ಯಾಯದ ವಿರುದ್ಧ ಅಸಹಾಯಕರ ಪರ ...ನೂನು ಬದ್ಧವಾಗಿ ವಕೀಲರು ಹೋರಾಡುತ್ತಾರೆ, ...ಮ್ಮ ಕಕ್ಷಿದಾರರ ಹಿತಾಸಕ್ತಿಗಳನ್ನು ಕಾಪಾಡುತ್ತಾರೆ ...ಎಂದು ನಾವು ಆಶಿಸುತ್ತೇವೆ. ಆದರೆ ತನ್ನನ್ನೇ ...ೀಡಿಸುತ್ತಿದ್ದ, ಹಿಂಸಿಸುತ್ತಿದ್ದ ವಕೀಲನ ಬಗ್ಗೆ ...ಾನೆಗೂ ಆಕ್ರೋಶಗೊಂಡ ಮಹಿಳೆಯೋರ್ವಳು ...ನ್ನ ಕಾಲಲ್ಲಿದ್ದ ಚಪ್ಪಲಿಯನ್ನು ಕೈಗೆ ...ಗೆದುಕೊಂಡಳು ಎಂದು ಆಕೆಯ ಮೇಲೆ ...ಕೀಲರು ಮೃಗಗಳಂತೆ ಹಲ್ಲೆ ಮಾಡುತ್ತಾರೆಂದರೆ, ...ವಳ ಸೀರೆಗೆ ಕೈಹಾಕುತ್ತಾರೆಂದರೆ, ಆಕೆಯನ್ನು ...ವಸ್ತ್ರಗೊಳಿಸುತ್ತಾರೆಂದರೆ ವಕೀಲರ ಬಗ್ಗೆ ...ನಸಾಮಾನ್ಯರಲ್ಲಿ ಗೌರವ ಉಳಿಯುತ್ತದೆಯೇ?

ವಕೀಲರ ಇಂತಹ ಆಟಾಟೋಪಗಳಿಂದಾಗಿಯೇ ...ವತ್ತು ನಮ್ಮ ಸಮಾಜದಲ್ಲಿ "ಅವರಿಗೆ ...ದಿಂಚು ಕೊಟ್ಟರೆ ಒಂದು ಮೈಲಿಯನ್ನೇ ...ಂಗುತ್ತಾರೆ" ಎಂಬ ಮನೋಭಾವ ...ಟ್ಟಿಕೊಂಡಿದೆ. ಇದಕ್ಕೆ ತಕ್ಕಂತೆ ವಕೀಲರ ...ಲಯದಲ್ಲೂ ಒಂದು ಜೋಕ್ ಚಾಲ್ತಿಯಲ್ಲಿದೆ. ...ದೇನೆಂದರೆ "ಒಬ್ಬ ಆರೋಪಿ ತಪ್ಪು ...ಾಡಿದ್ದರಷ್ಟೇ ಸಾಲದು, ಆತ ಹೇರಳವಾಗಿ ...ಪತ್ತನ್ನು ಹೊಂದಿರಬೇಕು. ಅದರಲ್ಲೂ ಆತ ...ಲೆ ಆರೋಪ ಎದುರಿಸುತ್ತಿದ್ದರೆ ವಕೀಲರೇ ...ಮುಂದು ನಾಮುಂದು ಎಂದು ಆರೋಪಿಯ ...ುಂದೆ ಜಮೆ ಆಗುತ್ತಾರೆ" ಎಂಬುದು.

ನಮ್ಮ ಸಮಾಜ ಆರೋಗ್ಯಕರವಾಗಿ ...ಳಿಯಬೇಕಿದ್ದರೆ, ಇಲ್ಲಿ ನಿಷ್ಠಾವಂತ ಪತ್ರಕರ್ತರು, ...ಕೀಲರು, ಅಧ್ಯಾಪಕರೂ ಬೇಕಾಗಿದ್ದಾರೆ. ...ದರಲ್ಲೂ ಕರಿಕೋಟು ತೊಟ್ಟು ಕಾನೂನನ್ನು ...ತ್ತಿಹಿಡಿಯಬೇಕಾದ, ಜನರಿಗೆ ನ್ಯಾಯವನ್ನು ...ದಗಿಸಬೇಕಾದ ವಕೀಲರ ಪಾತ್ರ ಮಹತ್ವದ್ದು. ...ಂತಹ ಪರಿಸ್ಥಿತಿಯಲ್ಲಿ ವಕೀಲರೇ ಗೂಂಡಾಗಳಂತೆ ...ರ್ತಿಸುವುದು, ತಮ್ಮ ಸಂಘದ ಚುನಾವಣೆಗಳಿಗೆ ...ಕ್ಷಾಂತರ ರೂಪಾಯಿ ಸುರಿಸುವುದು, ಅಮಾಯಕ ...ಹಿಳೆಯರ ಮೇಲೆ ಹಲ್ಲೆ ಮಾಡುವುದು... ...ದೆಲ್ಲ ಅವರು ತೊಡುವ ಕರಿ ಕೋಟಿಗೇ ...ವಮಾನ ಮಾಡಿದಂತೆ.

ಹಾಸನದ ಪ್ರಕರಣದ ನಂತರವಾದರೂ ...ಕೀಲರು ಎಚ್ಚೆತ್ತುಕೊಂಡು ತಮ್ಮ ಮೇಲಿನ ಜವಾಬ್ದಾರಿಯನ್ನು ಅರಿತುಕೊಳ್ಳಲಿ ಎಂಬ ಆಶಯದಿಂದ ಇದನ್ನೆಲ್ಲ ಹೇಳಬೇಕಾಯಿತು.

*****

ಕಳೆದ ಇಪ್ಪತ್ತು ದಿನಗಳಿಂದ ಕಾವೇರಿ ತೀರ್ಪಿನ ವಿರುದ್ಧ ಎಲ್ಲೆಡೆ ಪ್ರತಿಭಟನೆಗಳು ನಡೆದಿವೆ. ಇವುಗಳಲ್ಲಿ ಹಲವು ಘನಗಾಂಭೀರ್ಯದಿಂದ ನಡೆದರೆ, ಇನ್ನೂ ಹಲವು ಕಡೆಗಳಲ್ಲಿ ಕತ್ತೆ, ಎಮ್ಮೆ ಇತ್ಯಾದಿಗಳು ಭಾಗವಹಿಸಿ ನಗೆ ಹುಟ್ಟಿಸಿವೆ. ಅದರಲ್ಲೂ ಕೆಲವು ಬರೀ ಮಾಧ್ಯಮಗಳಿಗೋಸ್ಕರವೇ ನಡೆದ 'ಉಗ್ರ' ಪ್ರತಿಭಟನೆಗಳಾಗಿವೆ.

ಆದರೆ ಇವೆಲ್ಲವುಗಳಲ್ಲಿ ನನಗೆ ಮುಖ್ಯವಾಗಿ ಕಂಡುಬಂದದ್ದು ಕಾವೇರಿ ಕುರಿತು ಕರ್ನಾಟಕಕ್ಕೆ ಆಗಿರುವ ಅನ್ಯಾಯದ ವಿರುದ್ಧ ಜನಸಾಮಾನ್ಯರಲ್ಲಿ ತಾವೂ ಪ್ರತಿಭಟಿಸಬೇಕೆಂಬ ಆಶೆ ವ್ಯಕ್ತವಾಗಿರುವುದು. ಎಂದೂ ಬೀದಿಗಿಳಿದು ಹೋರಾಡದ, ಭಿತ್ತಿಪತ್ರ ಹಿಡಿಯದ, ಘೋಷಣೆಗಳನ್ನು ಕೂಗದ ಜನರಲ್ಲೂ ಇವತ್ತು ಕಾವೇರಿ ಚಳವಳಿಯೊಂದಿಗೆ ತಮ್ಮ ಧ್ವನಿಗೂಡಿಸಬೇಕೆಂಬ ಹಂಬಲ......

ಹೀಗೆ ಹಂಬಲಪಟ್ಟವರಲ್ಲಿ ಮಡಿಕೇರಿಯಲ್ಲಿ ಉಪನ್ಯಾಸಕರಾಗಿರುವ ಟಿ. ರಂಗಪ್ಪನವರೂ ಒಬ್ಬರು.



ಕಳೆದ ವಾರ "ಯಾರೋ ಕೊಡಗಿನ ಲೆಕ್ಚರರ್ ಫೋನ್ ಮಾಡಿದ್ದಾರೆ, ಕಾವೇರಿ ಕುರಿತು ನಿಮ್ಮೊಂದಿಗೆ ಮಾತನಾಡಬೇಕಂತೆ" ಅಂತ ನಮ್ಮ ಮ್ಯಾನೇಜರ್ ರಾಜು ಹೇಳಿದಾಗ ಕನೆಕ್ಟ್ ಮಾಡಿ ಅಂದೆ. ರಂಗಪ್ಪನವರು ಕಾವೇರಿ ಚಳವಳಿಯಲ್ಲಿ ತಮಗಾದ ಅನುಭವವನ್ನು ವಿವರಿಸಿದರು. ಅದು ಹೀಗಿದೆ:

"ಕಾವೇರಿ ಟ್ರಿಬ್ಯೂನಲ್‌ನ ಅಂತಿಮ ತೀರ್ಪು ಹೊರಬಿದ್ದಾಗ ನನಗೂ ಅದರ ವಿರುದ್ಧ ಪ್ರತಿಭಟಿಸಬೇಕು ಅನ್ನಿಸಿತು. ಎಲ್ಲಿ, ಯಾರೊಂದಿಗೆ, ಹೇಗೆ ಪ್ರತಿಭಟಿಸಬೇಕು ಎಂದು ಚಿಂತಿಸುತ್ತಿರುವಾಗಲೇ ಮೈಸೂರಿನ ಒಂದು ಸಂಘಟನೆಯವರಿಂದ ಕರೆ ಬಂತು. ಆ ಸಂಘಟನೆ ಬಗ್ಗೆ ನಾನು ಕೇಳಿರಲಿಲ್ಲವಾದರೂ, ಅವರು ಒಂದು ಪ್ರತಿಭಟನಾ ಕವಿಗೋಷ್ಠಿ ಏರ್ಪಡಿಸಿರುವುದಾಗಿಯೂ, ನಾನು ಅದರಲ್ಲಿ

ಕಂಡಹಾಗೆ



ಭಾಗವಹಿಸಬೇಕೆಂದೂ ಕೇಳಿದರು. ಹೇಗಾದರೂ ಪ್ರತಿಭಟಿಸಬೇಕೆಂದಿದ್ದ ನಾನು ಸಂತೋಷದಿಂದ ಒಪ್ಪಿಕೊಂಡು, ಒಂದು ಕವನವನ್ನು ರಚಿಸಿ ಮೈಸೂರಿಗೆ ಹೋದೆ. ಪ್ರತಿಭಟನಾ ಕವಿಗೋಷ್ಠಿ ನಡೆಯಲಿದ್ದ ಸ್ಥಳಕ್ಕೆ ಸರಿಯಾದ ಸಮಯಕ್ಕೆ ನಾನು ಮತ್ತು ಇತರರು ಹಾಜರಾದರೂ ಅವರು ಕಾರ್ಯಕ್ರಮವನ್ನೇ ಪ್ರಾರಂಭಿಸಲಿಲ್ಲ. ಅದೆಷ್ಟೋ ಸಮಯದ ನಂತರ ಪತ್ರಿಕಾ ಫೋಟೋಗ್ರಾಫರ್‌ಗಳು ಮತ್ತು ಟೀವಿ ಚಾನೆಲ್‌ಗಳ ಕ್ಯಾಮರಾಮೆನ್‌ಗಳು ಹಾಜರಾದ ನಂತರವೇ ಅವರು ತಮ್ಮ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅದೂ ಹೇಗೆ ಅಂತೀರೀ? ಮಾಧ್ಯಮಗಳ ಕ್ಯಾಮರಾಗಳ ಮುಂದೆ ತಮ್ಮ ಹೆಂಡತಿ, ಮಕ್ಕಳು, ಮಿತ್ರರನ್ನು ಸೇರಿಸಿಕೊಂಡು ಘೋಷಣೆಗಳನ್ನು ಕೂಗುವ ಮೂಲಕ. ಕ್ಯಾಮರಾಗಳು ಮಾಯವಾಗುತ್ತಿದ್ದಂತೆ ಕಾರ್ಯಕ್ರಮವೂ ಮುಗಿದೇಹೋಯಿತು. ಮೈಸೂರಿನಲ್ಲಿ 'ಲಂಕೇಶ್' ಕೊಂಡು ಬಸ್ ಹತ್ತಿ ತುಂಬಾ ಬೇಸರದಿಂದಲೇ ಮಡಿಕೇರಿಗೆ ಹಿಂದಿರುಗಿದೆ. ಮೈಸೂರಿನಲ್ಲಿ ಆದದ್ದರ ಬಗ್ಗೆ ಯಾರೊಂದಿಗೆ ಹಂಚಿಕೊಳ್ಳಲಿ ಎಂದು ಯೋಚಿಸುತ್ತಾ ನಿಮ್ಮ ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದೆ, ನಿಮಗೆ ಫೋನ್ ಮಾಡಿದರೆ ಹೇಗೆ ಅನ್ನಿಸಿತು. ನೋಡಿದರೆ ನೀವೇ ಸಿಕ್ಕಿಬಿಟ್ಟಿರಿ" ಎಂದರು ರಂಗಪ್ಪನವರು.

"ಹೌದು, ಇವತ್ತು ಹಲವಾರು ಪ್ರತಿಭಟನೆಗಳು ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವುದಕ್ಕೋಸ್ಕರ ನಡೆಯುತ್ತಿದೆ. ನಮ್ಮ ಚಿತ್ರರಂಗದವರೂ ಟೀವಿಯಲ್ಲಿ, ಫೋಟೋಗಳಲ್ಲಿ ಕಾಣಿಸಿಕೊಳ್ಳಲು ಜಗ್ಗಾಡಿದರೆಂದರೆ ಇನ್ನು ಸಾಮಾನ್ಯ ಜನರ ವಿಷಯ ಬಿಡಿ" ಅಂದೆ ನಾನು.

ಆಗ ರಂಗಪ್ಪನವರು "ನಿಮ್ಮ ಸಮಯದಲ್ಲಿ ಇನ್ನೆರಡು ನಿಮಿಷಗಳನ್ನು ನಾನು ತೆಗೆದುಕೊಳ್ಳಬಹುದೇ?" ಅಂತ ಕೇಳಿದರು. "ಪರವಾಗಿಲ್ಲ ಹೇಳಿ" ಅಂತ ಅಂದಿದ್ದಕ್ಕೆ "ನಾನು ಕಾವೇರಿ ಬಗ್ಗೆ ಬರೆದ ಕವನವನ್ನು ಮೈಸೂರಿನ ಪ್ರತಿಭಟನಾ ಕವಿಗೋಷ್ಠಿಯಲ್ಲಿ ಓದಲಾಗಲಿಲ್ಲ, ಅದನ್ನು ನಿಮಗಾದರೂ ಓದುತ್ತೇನೆ" ಎಂದು ಹೇಳಿ ಫೋನ್‌ನಲ್ಲೇ ನನಗೆ ಓದಿ ಹೇಳಿದರು.

ರಂಗಪ್ಪನವರೇನು ನಾನು ಅವರ ಅನುಭವದ ಬಗ್ಗೆ ಬರೆಯಬೇಕೆಂಬ ಆಶೆಯಿಂದ ಫೋನ್ ಮಾಡಿರಲಿಲ್ಲ, ಆದರೆ ಈ ಹೋರಾಟದಲ್ಲಿ ತನ್ನ ಧ್ವನಿಯೂ ಇದೆ ಎಂಬ ಆಶಯವನ್ನು ವ್ಯಕ್ತಪಡಿಸುವುದಕ್ಕಾಗಿ, ಅದನ್ನು ಯಾರೊಂದಿಗಾದರೂ ಹಂಚಿಕೊಳ್ಳಬೇಕೆಂಬ ಹಂಬಲದಿಂದ ಫೋನ್ ಮಾಡಿದ್ದರು. ಆದ್ದರಿಂದ ಪದ್ಯವನ್ನು ಓದಿದ ಮೇಲೆ ಸಂತೋಷದಿಂದ ಥ್ಯಾಂಕ್ಸ್ ಹೇಳಿ ಫೋನ್ ಇಟ್ಟರು. ರಂಗಪ್ಪನವರ ಆಶಯವೇ ನನಗೆ ಎಲ್ಲರ ಪ್ರತಿಭಟನೆಗಳಲ್ಲಿ ಕಂಡುಬರುತ್ತಿರುವುದು.

.....ಅಂದಹಾಗೆ ಸಮಯದ ಅಭಾವದಿಂದಾಗಿ ನಾನು ಇಲ್ಲಿಯತನಕ ತೀರ್ಪಿನ ವಿರುದ್ಧದ ಯಾವುದೇ ಪ್ರತಿಭಟನೆಯಲ್ಲಿ ಭಾಗವಹಿಸಲಾಗಿಲ್ಲ, ಮೈಸೂರಿನಿಂದ ಒಡನಾಡಿ ಸಂಸ್ಥೆಯ ಮಕ್ಕಳು ಸೈಕಲ್ ಜಾಥಾದಲ್ಲಿ ಬೆಂಗಳೂರಿಗೆ ಬರುತ್ತಿದ್ದಾರೆ. ನಾಳೆ, ಸೋಮವಾರ, ಬೆಳಗ್ಗೆ ಬೆಂಗಳೂರಿನಲ್ಲಿ ಅವರ ಪ್ರತಿಭಟನೆ ನಡೆಯಲಿದೆ.

ಕಾವೇರಿ ಟ್ರಿಬ್ಯೂನಲ್‌ನ ತೀರ್ಪಿನ ವಿರುದ್ಧ ಆ ಮಕ್ಕಳ ಪ್ರತಿಭಟನೆಯಲ್ಲಿ ಭಾಗವಹಿಸಿ ನನ್ನ ಧ್ವನಿಯನ್ನೂ ಸೇರಿಸಬೇಕೆಂಬ ಆಶೆ ನನ್ನಲ್ಲಿದೆ. ನಿಮ್ಮೆಲ್ಲರಲ್ಲೂ ಇರುವಂತೆಯೇ....

-ಗೌರಿ ಲಂಕೇಶ್

ಸುವರ್ಣ ಕರ್ನಾಟಕದ ಆಡಳಿತ ಅಂದ್ರೆ ಇದೆಯ ಕಣ್ರೋ

ಬಯಲು ಸೀಮೆಯ ಕಟ್ಟೆ ಪುರಾಣ

ಕಾವೇರಿ ಚಳವಳಿಯು ಕೇವಲ ಮಂಡ್ಯ ಜಿಲ್ಲೆಗೆ ಸೀಮಿತವಾಗುವಂತೆ ಕಾಣಿಸಿದ್ದರಿಂದ ಕಾಳಮಾವ,

"ಯಾಕೋ ಕಾವೇರಿ ಗಲಾಟ ತಣ್ಣಗಾಗಂಗೆ ಕಾಣ್ತದಲ್ಲಾ?" ಎಂದ.

"ಏ ಅದೆಲ್ಲಿ ತಣ್ಣಗಾದತು ಮಾವ? ಅಂಬುರೀಸ ಚಳವಳಿಗೆ ಬಂದ ಮ್ಯಾಲೆ ಇನ್ನು ಜೋರಾಗ್ಯದಂತೆ" ಎಂದಳು ಜುಮ್ಮಿ.

"ಇದಾನ ಸಭೆವಳಗಡೆ ಮೈಕನೆ ಕಿತ್ತತ್ತಗೆ ಯಸ್ತು ಗಲಾಟ ಮಾಡಿಕಂಡಿದ್ದರಂತೆ" ಎಂದ ಸೀರ.

"ಅಂಗರೆ ಇದಾನ ಸಭೆಲೂ ಗಲಾಟಯಾಗಿದ್ದತೆ?"

"ಊ ಒಂದೇ ಒಂದಿನ ಸಭೆ ನ್ನಡಿಯಕ್ಕೂ ಅವುಕಾಸ ಕೊಡದಂಗೆ ಜಗಳ ಆಡಿದರಂತೆ."

"ಅಲ್ಯಾರ ಮ್ಯಾಲೆ ಜಗಳ ಆಡಿದ್ರೂ?"

"ಇನ್ಯಾರ ಮ್ಯಾಲೆ ಮಾಡ್ಯರೂ ಆಡಳತ ಮಾಡೋರ ಮ್ಯಾಲೆ ಮಾಡ್ಯವುರೆ" ಎಂದ ಸೀರ.

"ಏ ಇದಾನ ಸಭೆಲಿ ಗಲಾಟಯಾಗಿರದೆ ಬ್ಯಾರೆ ಮಾತಿಗೆ ಕಣೋ ಸೀರಣ್ಣ" ಎಂದ ಉಗ್ರಿ.

"ಬ್ಯಾರೆ ಮಾತು ಇನ್ಯಾವುದಿದ್ದತ್ಲ?"

"ಇದಾನ ಸಭೆಲಿ ಸಭಾಪತಿ ಅಂತ ವಬ್ಬವುನೆ ಗೊತ್ತೆ?"

"ಗೊತ್ತು ಕಣ್ಣೇಳ್ಳ ಕ್ಯಾರ್ ಪೇಟೆ ಕಿಷ್ಣಲವೆ ಈಗಿರೋನು?"

"ಅವುನು ಇದಾನ ಸಭೆಗೆ. ಇದಾನ ಪರಿಷತ್ತು ಅಂತ ಒಂದದೆ. ಅದರ ಸಭಾಪತಿಗೆ ಉಸಾರಿಲ್ಲವೊ ಅಥವಾ ಅವುನವುದಿ ಮುಗಿತೋ ಏನೋ, ಈ ದ್ಯಾವೇಗೌಡ ಆ ತಿಪ್ಪಣ್ಣ ಅನ್ನೋನ್ನ ಹೋಗಿ ನೀನೆ ಕೂತಗಂಡು ಸಭೆ ನ್ನಡಸು ಅಂದವುನೆ. ಅಷ್ಟೇಳದೆ ತಡ ಅವುನು ಬಂದು ಸಭಾಪತಿ ಜಾಗದಲ್ಲಿ ಕೂರತಿದ್ದಂಗೆ ಹತಿಗಂಡದೆ ಅತ್ತಗೆ" ಎಂದ ಉಗ್ರಿ.

"ತಿಪ್ಪಣ್ಣ ಅಂದ್ರೆ ಇವುನಲವೆ? ಹಿಂದೆ ಜೆಡಿಎಸ್ಸ್ ಅಧ್ಯಕ್ಷನ ಮಾಡಿದ್ರಲ್ಲ ಅವುನು?" ಎಂದ ಸೀರ.

"ಊ ಕಣೊ, ಗೌಡೇಳಿದ್ನ ಶಾನುಭಾಗ ಮಾಡದಂಗೆ ಆ ದ್ಯಾವೇಗೌಡ ಹೇಳಿದ್ದ ಉಸುರೆತ್ತದಂಗೆ ಮಾಡ್ತನೆ. ಅದ್ಕೆ ಅವುನ್ನ ಇದಾನ ಪರಿಷತ್ತಿಗೆ ಅಧ್ಯಕ್ಷನ್ನ ಮಾಡಿ ಬುಟ್ರು."

"ಅಂಗರವುನ್ನ ಮಾಡಂಗಿಲ್ಲವೇನ್ನ?"

"ಮಾಡಬವುದು. ಅದಕ್ಕಿಂತ ಯಲಕ್ಸನ್ ಮಾಡಿ ವಳ್ಳೆ ವ್ಯಕ್ತಿ ಆರಿಸಿ ಅಂತ ಏಟುಬಡಕಂಡ್ರೂ ಕೇಳದಂಗೆ ಅವುನೆ ಇರ್ಲಿ, ಅವುನೇಳಿದಂಗೆ ಕೇಳಿ ಅಂದ್ರೆ ಯಾರು ಕೇಳ್ಳರೂ?"

"ಯಲಕ್ಸನ್ನಾದ್ರೆ ತಿಪ್ಪಣ್ಣ ಗೆಲ್ಲತಿರಲಿಲ್ಲವೇನೊ?"

"ಅವುನು ಗೆಲ್ಲೊ ಅಂಥೋನಲ್ಲ, ಏನಿದ್ರು ನೇಮಕ ಮಾಡಿ ಕಳಸೋ ಅಂಥೋನು. ಇದಾನ ಪರಿಷತ್ತಿನಿಂದ ವರಗಿರೋರು ಹೇಳಿದಂಗೆ ಕೇಳೊ ಅಂತ ಮನ್ಸ. ಅದ್ಕೆ ಅವುನ್ನ ಕೂರಕ್ಕೆ ಬುಡ್ತಿಲ್ಲ ಹೋಗತ್ತಗೆ" ಎಂದ ಉಗ್ರಿ ರೋಸಿದವನಂತೆ.

"ಕೂರಕೆ ಬುಡದಂತ ಕೆಟ್ಟ ಮನುಸ್ನೆ ಅವುನು?"

"ಏನಪ್ಪ, ಅವುನು ಒಂಥರಾ ಇವುನಂತೆ. ಈ ದ್ಯಾವೇಗೌಡ ಮನಿಗೆ ಕರದು, ಆ ಬಳ್ಳಾರಿ ಗಣಿ ಸುದ್ದಿಯ ತಗದ್ರೆ ಮಾತಾ ಡಕ್ಕೆ ಅವುಕಾಸ ಕೊಡಬ್ಯಾಡ ಅಂತ ಹೇಳಿದ್ರೆ, ಅಂಗೂ ಮಾಡಕ್ಕೆ ತಯಾರಂತೆ."

"ಮತ್ತದಕೆ ಅಪ್ಪ ಮಕ್ಕಳು ಅವುನೆ ಇರ್ಲಿ ಅಂತ ಹಟ ಹಿಡಿದಿರದು."

"ದ್ಯಾವೇಗೌಡ ವಬ್ಬ ಮನುಸುನ್ನ ಕರದು ಒಂದು ಜವಾಬ್ದಾರಿ ಕೊಟ್ರು ಅಂದ್ರೆ ಆಗ್ಲೆ ಗೊತ್ತಾಯ್ತದೆ. ಇದರಲ್ಲೇನೊ ಅದೆ ಅಂತವ."

"ಡವುಟೆಯಿಲ್ಲ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಕಾವೇರಿ ಚಳವಳಿ ಕೈಬುಟ್ಟೇನ್ನ?"

"ಎಷ್ಟು ದಿನ ಅಂತ ಮಾಡನಕ್ಕ. ಅದ್ಕೆ ಮಂಡ್ಯ ಕಡೆ ಜನಗಳಿಗೆ ಅದಬುಟ್ಟುಕೊಟ್ಟು ಸುಮ್ಮನಾದೆ ಅತ್ತಗೆ."

"ಇನ್ನೇನು ಭಯವಿಲ್ಲ ತಗೊ. ಅಂಬುರೀಸ ಕೈಗೆ ತಗಂಡವುನೆ, ಜೋರಾಯ್ತದೆ" ಎಂದಳು ಜುಮ್ಮಿ.

"ಜೋರಾಯ್ತದೆ ಅಂದ್ರೆ ಆಗ್ಲೆ ಕೆಲವುರು ಅಡ್ಡಗಾಲಾಕ್ತ ಅವುರೆ ಕಣಕ್ಕ. ಅದ್ಕೆ ಅಂಬುರೀಸನಿಗೆ ಬೇಜಾರಾಗ್ಯದೆ."

"ಅಡ್ಡಗಾಲಾಕೋರು ಯಾರು ತೋರ್ಲ? ಮಕ್ಕುಗಿತಿನಿ."

"ಮಾದೇಗೌಡನಂಥೋರೆ ಅಂದ್ರು ಮುಕ್ಕುಗಿತಿಯಾ?"

"ಮತ್ತೆ ಅವುನಂಗೆ ಯಾರು ರಾಜೀನಾಮೆ ಕೊಟ್ಟವುರೆ ತೋರ್ಲ ಅಂಥೋನು ಗಲಾಟ ಮಾಡಕ್ಕೆ ಬಂದ್ರೆ ಇವುರು ಸೇರಿಕಬೇಕಪ್ಪ ವಳಿಕೆ."

"ಸೇರಿಕಳೋರೊ ಏನೊ. ಅಂಬುರೀಸ ಮದ್ದೆ ಈರೋ ಈಗಾಗ್ಲೆ ರಿಜೈನ್ ಮಾಡಿ ತಿರಗ ಈರೋ ಆಗ್ಯವುನೆ. ಅಂಥೋನು ಚಳವಳಿಗೆ ಬಂದ್ರೆ, ಈ ಮಾದೇಗೌಡನಂತ ಮುದುಕನ್ನ, ಆ ಪುಟ್ಟಣ್ಣಯ್ಯನ್ನ, ನಂಜುಂಡ, ಪುಟ್ಟಾಜ, ಚೌಡಯ್ಯನ ಯಾರು ಮೂಸ್ತರೆ. ಅದ್ಕೆ ಅವುರ್ಯಲ್ಲ ಅಂಬುರೀಸ ಬಂದು ಮುಂದೆ ನಿಂತಗಳದು ಬ್ಯಾಡ ಅಂತ ಕುಂತವುರೆ."

"ಆಹಹ ಏನು ಲೀಡ್ರಯ್ಯ ಇವುರು. ಇಂತ ವಟ್ಟೆಕಿಚ್ಚ ವಟ್ಟೆಲಿಟ್ಟಗಂಡಿದ್ರೆಯಾವ ಚಳವಳಿ ಉದ್ದಾರಾದವೂ ಅಂತಿನಿ?" ಎಂದ ಉಗ್ರಿ.


"ನಿಜ ಕಣೊ ಉಗ್ರಿ. ಆ ಗೋಕಾಕ್ ಚಳವಳಿಯ ಹಿಂಗೆ ಆಗಿ ಆ ಪಾಟೀಲ ಪುಟ್ಟಪ್ಪ ಅತ್ಲಗ್ಯಳದ. ಈ ಚಿದಾನಂದಮೂರ್ತಿ ಇತ್ಲಗ್ಯಳದ. ಇನ್ನು ಚಂದ್ರಶೇಖರ ಪಾಟೀಲ ಇನ್ನೊಂತರ ಅಂದ. ಹಿಂಗಾಗಿ ಕಡಿಗೆ ರಾಜ್‌ಕುಮಾರ್ ಅಭಿಮಾನಿಗಳ ಕೈಗೆ ಚಳವಳಿ ಸಿಕ್ಕಿದ ಮ್ಯಾಲೆ ತಣ್ಣಗಾಯ್ತು. ಈಗ್ಲು ಅಂಗೆ ಆಯ್ತದೆ ನೋಡು" ಎಂದ ವಾಟಿಸ್ಸೆ.

"ಊ ಕಣೊ, ಆ ಕಾಂಗ್ರೆಸ್‌ನೋರ ಕಂದ್ರೆ ಜೆಡಿಎಸ್‌ಗಾಗದಿಲ್ಲ. ಇವುರಿಬ್ರು ಕಂಡ್ರು ರೈತ ಸಂಘದೋರಿಗಾಗದಿಲ್ಲ. ಇನ್ನು ಏನಾರ ಮಾಡಿ ಈ ಚಳವಳಿಯ ಸಾಬರ ಕಡಿಕೆ ತಿರುಗ್ಸಿ ಗಲಾಟ ಮಾಡ್ಸನ ಅಂತ ಬಿಜೆಪಿಗಳು ಕಾಯ್ತ ಕುಂತವುರೆ."

"ನಿಜ ಕಣೊ ಉಗ್ರಿ. ಮದ್ದೂರಲ್ಲಿ ಅದೂ ನ್ನಡದೊಯ್ತು" ಎಂದು ವಾಟಿಸ್ಸೆ ಹೇಳುತ್ತಿರುವಾಗ ಲೋಟ ಗರಿದ ಕಾಳಮಾವ,

"ಎಲ್ಲಿಗೆ ಬಂದು ನಿಂತಗತ್ತಯ್ಯಾ ಕಾವೇರಿ ನೀರಿನ ಗಲಾಟ ವಿಸಿಯಾ, ಹಾಂ. ನಮಿಗನ್ಯಾಯ ಆಗ್ಯದೆ ಅಂತ ಕೂಗೇಳಕ್ಕೂ ಈಟೊಂದು ಗಾಳಿಗಂಟ್ಯೆ" ಎಂದ.

"ಇನ್ನು ನೋಡಿವಿರು ದ್ವಡಪ್ಪ. ಬೆಂಗಳೂರಿನ ಪದ್ಮನಾಭನಗರದ ರಾಜಕಾರಣ ಇದರ್ವಳಿಕೆ ಇನ್ನು ಬಂದಿಲ್ಲ. ಬಂದಮ್ಯಾಲೆ ನೋಡಿವಿರು."



"ಅಲ್ಯಾವ ರಾಜಕಾರಣ ಇದ್ದತ್ಲ?"

"ಅಲ್ಲಿ ನೀರಾವರಿ ತಜ್ಞ ದೇವೇಗೌಡ್ರವುರೆ. ಅವುರು ಇನ್ನು ಬಾಯಿಬುಟ್ಟಿಲ್ಲ ಅಂದ್ರೆ ಭಾರಿ ರಾಜಕಾರಣ ಅದೆ ಅಂತ ಈಗಾಗ್ಲೆ ಜನಗಳಿಗೆ ಡವುಟು ಬಂದದೆ."

"ಏನು ಡವುಟು ಬಂದದ್ದ?" ಎಂದಳು ಜುಮ್ಮಿ.

"ನೋಡಕ್ಕ, ಆಗ ಯಸ್ಸೆಂ ಕೃಷ್ಣ ಬೆಂಗಳೂರಿನಿಂದ ಪಾದಯಾತ್ರೆ ಮಾಡಿಕಂಡು ಮಂಡ್ಯಾಕ್ಕೆ ಬಂದ. ಆಗ ನಂಬರ್ ವನ್ ಮುಖ್ಯಮಂತ್ರಿ ಪಾಪ್ಯುಲಾರಿಟಿ ಮ್ಯಾಕ್ಕೋಯ್ತು. ಕತ್ತೆತ್ತಿ ನೋಡಿದ ದ್ಯಾವೇಗೌಡ ಏನು ಮಾಡಿದಾ ಗೊತ್ತ?"

"ಗೊತ್ತಿಲ್ಲ ನೀನೆ ಹೇಳು?"

"ತಲಕಾವೇರಿತಕ್ಕೋಗಿ ಪೂಜೆ ಮಾಡಿದ, ಸಭೆ ಮಾಡಿದ. ಅಂತ ವ್ಯಕ್ತಿ ಈಗೇನು ಮಾಡ್ತ ಅವುನೆ ಗೊತ್ತೆ?"

"ಏನು ಮಾಡ್ತ ಅವುನ್ನ?"

"ಹರೇವಿದ್ದಾಗ ಪಾದರ ಮಾಡಿ ಮುಚ್ಚೆಸ್ಲಿ ಪೂಜೆ ಮಾಡಿದ ಅನ್ನಂಗೆ ವಶಿಸರೀಪುರಕೋಗಿ ಪೂಜೆ ಮಾಡಿಕಂಡು ಬಂದೋನು ಇನ್ನೂ ಅದ್ನೆ ಮಾಡ್ತಯಿರ ಬಪ್ದು."

"ಅದಕಿಂತ ಚಳುವಳಿಗೆ ಬಂದಿದ್ರೆ?" ಎಂದ ಸೀರ.

"ಅದೆ ಚಿಗಪ್ಪ ಯಲ್ಲ ಕೇಳ್ತಯಿರೊ ಕ್ವಸ್ಚೆ, ಮಧ್ಯಂತರ ತೀರ್ಪು ಬಂದಾಗ ಹಾರಾಡಿದ ದ್ಯಾವೇಗೌಡ ಈಗೆಲ್ಲಿ ಗೋದ ಅಂತ ಕೇಳ್ತರೆ. ನೀನಾರ ಉತ್ತರ ಕೊಡು ದ್ವಡಪ್ಪ"

"ನಾನ್ಯಾಕುತ್ರ ಕೊಡ್ಲಿ ಅವುನೆ ಕೊಡ್ತನೆ ತಗಳ್ಳ."

"ಇಲ್ಲಿ ಕೊಡದಿಲ್ಲ, ಡೆಲ್ಲಿಗೋಗಿ ಕೊಡ್ತಿನಿ ಅಂದವುನೆ."

"ಪ್ರಧಾನಿಯಾಗಿದ್ದೋನಲವೆ, ಅಲ್ಲೆ ಕೊಡ್ಲಿಬುಡು."

"ನಾನೋಗಿ ನಿನ್ನ ಕೇಳ್ತಿನಿ ನೋಡು, ಇಲ್ಲೇ ಕೊಡಕ್ಯಾಗದೋನು ಅಲ್ಲಿನ್ನೇನು ಕೊಡ್ತನೆ. ನಮಿಗೆ ಐದಾರು ಟಿ.ಎಂ.ಸಿ ನೀರು ಕಡಮೆ ಆಗಿದ್ರೆ ದ್ಯಾವೇಗೌಡ ಬಾಯಿಬುಡದದಂಗಿದ್ರು ತಡಕತ್ತಿತ್ತು. ಆದ್ರೆ ನಮಿಗೆ ಅನ್ಯಾಯಾಗಿರದು ನೂರಾರು ಟಿಎಂಸಿ ದ್ವಡಪ್ಪ ನೂರಾರು ಟಿಎಂಸಿ ನೀರು."

"ತಿಯಂಸಿ ಅಂದ್ರೇನ್ನ?"

"ದಿಸೀಸ್ ದಿ ಪ್ರಾಬ್ಲಮ್. ನಮ್ಮ ಇಡೀ ಜಿಲ್ಲೆಗೆ ಈಗ ಟಿಎಂಸಿ ನೀರು ಅಂದ್ರೆಷ್ಟು ಅಂತ ಹೇಳಿಕಂಡು ಬರಬೇಕು."

"ಗೊತ್ತಿದ್ರೇಳು, ಇಲ್ದಿದ್ರೆ ತಿಗ ಮುಚಗಂಡೋಗ್ಲ ತಲಿಯಲ್ಲ ಮಾತಾಡಬ್ಯಾಡ."

"ಸಾರಿ ದ್ವಡಪ್ಪ, ಈಗ ಒಂದು ಚದರದ ಮನೆ ಅಂತಿ ಅದೆಷ್ಟಗಲದೆ ಅಂತ ಗೊತ್ತು ನಿನಗೆ. ಅದೇ ರೀತಿ ಒಂದು ಸವರಡಿ ಉದ್ದ ಒಂದು ಸವರಡಿ ಎತ್ತರದ ಕಟ್ಟಡದಲ್ಲಿ ಅಥವಾ ಬಕೀಟಲ್ಲಿ ತುಂಬಿರೋ ನೀರಿಗೆ ಒಂದು ಟಿಎಂಸಿ ಅಂತರೆ. ಆತರ 270 ಟಿಎಂಸಿ ನೀರು ಕನ್ನಂಬಾಡಿ ಕಟ್ಟದೋನಿಗೆ, 419 ಟಿಎಂಸಿ ನೀರು ನೀರುಗಂಟಿಗೆ ಅಂದ್ರೆ ತಮುಳುನಾಡಿಗೆ ಅಂದ್ರೆ ಯಾವು ನ್ಯಾಯ ದ್ವಡಪ್ಪ?"

"ಇದ್ಯಾವನಾರ ನ್ಯಾಯ ಅಂದನ್ನ?"

"ಆದ್ರು ದ್ಯಾವೇಗೌಡ್ರು ಬಾಯಿಬುಡಲಿಲ್ಲ ನೋಡು."

"ಅವುನು ಬಾಯಿಬುಟ್ರೆ ಸರಿಯಾಗಂಗಿದ್ರೆ ಬುಡೋನು ಕಂಡ್ಯ. ಹಾದಿಬೀದಿಲೋಗೊ ದಾಸಯ್ಯನಂಥೋರು ಮಾತಾಡಂಗೆ ದ್ಯಾವೇಗೌಡ ಮಾತಾಡಕ್ಯಾದತೇ? ಎಲ್ಲೇಟಾಕಿದ್ರೆ ಏನು ಬಾಯಿಬುಡತದೆ ಅಂತ ಅವುನಿಗೆ ಚೆನ್ನಾಗಿ ಗೊತ್ತದೆ."

"ರಿಯಲಿ ದ್ವಡಪ್ಪ, ಅವುನಿಗೆ ಆಡಳಿತ ಯಂಗೆ ಮಾಡಬೇಕು ಅಂತ, ಗೊತ್ತದೆ. ಇಲ್ದೆಯಿದ್ರೆ ಆ ಕ್ಯಾರ್‌ಪೇಟೆ ಕಿಸ್ನ ಆ ಮನೆಲಿ ತಿಪ್ಪಣ್ಣ ಮೇಲಮನೆಲಿ, ಅಚ್ಯುತರಾವು ಅನ್ನೋ ಪೇದೆ ಪೊಲೀಸ್ ಮುಖ್ಯಸ್ಥ ಮಹಿಪಿ ಅನ್ನೋ ಮುಸಂಡಿ ಸರ್ಕಾರದ ಮುಖ್ಯ ಕಾರ್ಯದರ್ಶಿ, ಎಂ.ಪಿ. ಪ್ರಕಾಶ್ ಮಗನ ಬೆಂಗಾವಲಿಗೆ.... ರಿಯಲಿ ಸುವರ್ಣ ಯುಗ ಅಂದ್ರೆ ಇದೆ. ಯಾಕೆ ಅಂದ್ರೆ ಈಗ ಸುವರ್ಣ ಕರ್ನಾಟಕದ ವರ್ಷಾಚರಣೆ ನ್ನಡಿತಾ ಅದೆ, ಅಲವೇನೊ ಉಗ್ರಿ?"

"ಅಂಗಲ್ಲ ಕಣೊ, ಕನ್ನಡಿಗರ ಪಾಲಿಗೆ ರಣಗಾಯದ ವರ್ಷ ಇದು."

-ಬಿ. ಚಂದ್ರೇಗೌಡ

ಬ್ಯಾರಿ ಸಮ್ಮೇಳನಕ್ಕೊಬ್ಬ ಕಟುಕ

ನಿಜಕ್ಕೂ ಇದೊಂದು ವಿಪರ್ಯಾಸಕರ ಸಂದರ್ಭ.

ಇದೇ ಫೆಬ್ರವರಿ 27 ರಂದು ಚಿಕ್ಕಮಗಳೂರಿನಲ್ಲಿ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಈ ನೆಲದ ಮಕ್ಕಳಾದ ಬ್ಯಾರಿಗಳು ಕೃಷಿ, ಮೀನುಗಾರಿಕೆ, ವ್ಯಾಪಾರ ಮಾಡಿಕೊಂಡು ಬದುಕುತ್ತಿರುವ ಜನ. ಕನ್ನಡ ಸಾಹಿತ್ಯದಲ್ಲೂ ಮಹತ್ವದ ಬ್ಯಾರಿ ಬರಹಗಾರರಿದ್ದಾರೆ. ಚಿಕ್ಕಮಗಳೂರು ಸಮ್ಮೇಳನದ ವಿಪರ್ಯಾಸ ಏನೆಂದರೆ ಹಿಂದೂ ಕೋಮುವಾದಿಗಳ ನಾಯಕ ಸಿ.ಟಿ. ರವಿಯನ್ನು ಈ ಸಮ್ಮೇಳನಕ್ಕೆ ಕರೆಸುತ್ತಿರುವುದು. ರವಿ ಚಿಕ್ಕಮಗಳೂರು ಶಾಸಕನೆಂಬ ಕಾರಣಕ್ಕೆ ಈ ಆಹ್ವಾನ ನೀಡಲಾಗಿದೆಯಂತೆ.

ಮುಸ್ಲಿಮರ ವಿರುದ್ಧ ನಿರಂತರ ಅಪಪ್ರಚಾರ, ದೌರ್ಜನ್ಯಗಳಿಗೆ ಪ್ರಚೋದನೆ ನೀಡುತ್ತಾ ಬಂದಿರುವ ಶಾಸಕ ಸಿ.ಟಿ. ರವಿಗೆ ಅತ್ತ ಸಾಹಿತ್ಯವೂ ಗೊತ್ತಿಲ್ಲ; ಇತ್ತ ಸೌಹಾರ್ದತೆ, ಸಾಮರಸ್ಯಗಳ ಪರಂಪರೆಯೂ ಈತನದ್ದಲ್ಲ. ಈಗಂತೂ ಮಲೆನಾಡಿನಲ್ಲಿ ಹರಡುತ್ತಿರುವ ಕೋಮುದ್ವೇಷದ ಅಶಾಂತಿಗೆ ಈ ಭಜರಂಗಿ ಪಡೆಯ ನಾಯಕನೇ ಮುಂದಾಳು. ಸೂಫಿ ಶ್ರದ್ಧಾ ಕೇಂದ್ರವಾದ ಬಾಬಾಬುಡನ್‌ಗಿರಿಯಲ್ಲೂ ಗಲಭೆ ಎಬ್ಬಿಸಿದ ಕೀರ್ತಿ ರವಿಗೇ ಸಲ್ಲಬೇಕು. ಇಷ್ಟೇ ಅಲ್ಲದೆ ಕರಾವಳಿಯುದ್ದಕ್ಕೂ ಸಂಘ ಪರಿವಾರ ಮುಸ್ಲಿಮರ ವಿರುದ್ಧ ನಡೆಸುತ್ತಿರುವ ನಿತ್ಯ ದೌರ್ಜನ್ಯಗಳಿಗೆ ಇದೇ ಸಿ.ಟಿ. ರವಿ ಪ್ರತಿನಿಧಿಸುತ್ತಿರುವ ಬಿಜೆಪಿ ಪಾರ್ಟಿಯದ್ದೇ ತಾನೆ ಕುಮ್ಮಕ್ಕು. ಬಹುಸಂಖ್ಯಾತ ಬ್ಯಾರಿಗಳು ನೆಲೆಸಿರುವುದೂ ಇಲ್ಲಿಯೇ.

ಇಷ್ಟೆಲ್ಲಾ ಅನರ್ಹತೆ, ಅಯೋಗ್ಯತೆಗಳಿರುವ ರವಿಯನ್ನು ಬ್ಯಾರಿ ಸಮುದಾಯದ ಸಾಹಿತ್ಯ ಸಮ್ಮೇಳನಕ್ಕೆ ಕರೆಸುತ್ತಿರುವ ಔಚಿತ್ಯವನ್ನು ನಾಯಕರು ವಿವರಿಸಬೇಕಿದೆ. ಕೇಂದ್ರ ಬ್ಯಾರಿ ಮಂಡಳಿಯವರು ಚಿಕ್ಕಮಗಳೂರಿನ ಬ್ಯಾರಿ ಸಂಘಟನೆಯ ಕೆ. ಮಹಮ್ಮದ್ದೇ ಇದಕ್ಕೆ ಕಾರಣ ಎನ್ನುವುದು. ಮಹಮ್ಮದ್ ಮತ್ತೊಬ್ಬರ ಮೇಲೆ ದೂರುವುದೂ ಎರಡೂ ಅಸಂಬದ್ಧ; ಫ್ಯಾಸಿಸ್ಟ್ ಸಿ.ಟಿ. ರವಿ ಕೇವಲ ಪುಸ್ತಕ ಮಳಿಗೆ ಉದ್ಘಾಟಿಸುತ್ತಾರೆ ಅಷ್ಟೇ ಬೇರೇನಿಲ್ಲ ಎಂದೂ ಕೆಲವರು ಸಮಜಾಯಿಷಿ ಕೊಡುತ್ತಿರುವುದೂ ಆಶ್ಚರ್ಯ.

ಬ್ಯಾರಿಗಳಿರಲಿ, ಮುಸ್ಲಿಮರಾಗಲಿ, ದಲಿತ, ಹಿಂದುಳಿದ ವರ್ಗಗಳಾಗಲಿ ಎಲ್ಲರೂ ನೆನಪಿಡಬೇಕಾದ್ದೆಂದರೆ ಈ ಹಿಂದೂ ಮತಾಂಧರು ಜನತೆಯ ಖಾಯಂ ಶತ್ರುಗಳೇ ವಿನಃ ಎಂದೂ ಮಿತ್ರರಾಗುವವರಲ್ಲ. ಇಂಥವರ ವಿರುದ್ಧ ಒಟ್ಟಾಗಿ ಹೋರಾಟಕ್ಕಿಳಿಯಬೇಕಾದ ಸಮಯದಲ್ಲಿ ಬ್ಯಾರಿ ಸಮ್ಮೇಳನಕ್ಕೆ ಫ್ಯಾಸಿಸ್ಟ್ ಸಿ.ಟಿ. ರವಿಗೆ ಆಹ್ವಾನ ನೀಡುವ ಮೂಲಕ ಬ್ಯಾರಿ ಸಮುದಾಯ ರಾಜ್ಯದ ಜಾತ್ಯತೀತ ಆಶಯವುಳ್ಳವರೆಲ್ಲರಿಗೂ ಅಪಚಾರ ಮಾಡಿದೆ ಎನ್ನದೇ ವಿಧಿಯಿಲ್ಲ.

ಶೂದ್ರ

ಸಭೆಯಲ್ಲಿ ಭಾಷಣ ನಗೆಯಿಂದ ಶುರು ಮಾಡುವುದು ಅಪಾಯ. ಮೊನ್ನೆ ಶೂದ್ರ ಶ್ರೀನಿವಾಸ್ ಈ ನಗೆಯ ಕ್ರಾಸ್‌ಫೈರ್‌ನಲ್ಲಿ ಸಿಕ್ಕಿಹಾಕಿಕೊಂಡ. 'ಶೂದ್ರ' ಮಾಸ ಪತ್ರಿಕೆಯ ಹದಿನೈದನೆ ಹುಟ್ಟುಹಬ್ಬ; ನನ್ನದು ಆರಂಭದ ಸಭೆಯ ಅಧ್ಯಕ್ಷತೆ. ಪ್ರೊ. ಜಿ.ಎಸ್. ಶಿವರುದ್ರಪ್ಪನವರು ಗಂಭೀರವಾಗಿ ನಮ್ಮ 'ಶೂದ್ರ'ನ ಹುಟ್ಟು ಮತ್ತು ಬೆಳವಣಿಗೆ, ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಗಳ ಹುಟ್ಟು ಮತ್ತು ಬೆಳವಣಿಗೆ ಬಗ್ಗೆ ತಿಳಿಸಿದ್ದರು. ಆದರೆ ಎಲ್ಲೋ ಪೂರ್ತಿ ಹೇಳಿದಂತೆ ನನಗೆ ಕಾಣಲಿಲ್ಲ, ನಾನು ಕಾಲು ಶತಮಾನದಿಂದ ಬಲ್ಲ ನನ್ನ ಪ್ರೀತಿಯ ಹೆಮ್ಮೆಯ, ವೈಚಾರಿಕತೆಯ, ಹಾಸ್ಯಾಸ್ಪದ, ಬೆಚ್ಚನೆಯ ಶೂದ್ರ. ಹುಚ್ಚ ಮತ್ತು ಜಾಣ. ಕ್ಲಿಷ್ಟ ಕ್ಲಿಷ್ಟಯಾಗಿರುವ ತಾಯಿಯಂತಹ ವ್ಯಕ್ತಿ. ತಮಾಷೆ ಮಾಡುತ್ತಾ ಹೋದೆ. ಈತನ ಅಶಿಸ್ತು.... ಶೂದ್ರ ಬರಲಿಲ್ಲ ಎಂದು ಈತನಿಗಾಗಿ ಕಾತರಿಸುತ್ತಿದ್ದರೆ ಅನಿರೀಕ್ಷಿತವಾಗಿ ಈತನ ಪತ್ರಿಕೆ ಬಂದುಬಿಡುತ್ತದೆ; ಈ ಆಸಾಮಿ ಬರಲಿಲ್ಲ ಎಂದು ಗೊಣಗಿದ ದಿನವೇ ಬಂದುಬಿಟ್ಟು ಬೆಚ್ಚಿಬೀಳಿಸುತ್ತಾನೆ. ಬೆಚ್ಚುವುದು ಯಾಕೆಂದರೆ, ಏನಾದರೊಂದು ವರಾತ ತಂದಿರುತ್ತಾನೆ. ಇವತ್ತು ಮೆರವಣಿಗೆಗೆ ಬರಬೇಕು, ಧರಣಿ ಇದೆ, ಒಂದು ಲೇಖನ ಬೇಕಿತ್ತು, ಈ ಸಭೆಗೆ ನೀವೇ ಅಧ್ಯಕ್ಷರಾಗಬೇಕು.... ತಿಂಗಳುಗಳ ಹಿಂದೆ "ಸಾರ್, ಅತ್ಯಾಚಾರ, ವ್ಯಭಿಚಾರ ಹೆಚ್ಚಿದೆ... ಪ್ರತಿಭಟಿಸಿ ಮೆರವಣಿಗೆ ಮಾಡಬೇಕು ಬನ್ನಿ" ಅಂದ.

"ಅತ್ಯಾಚಾರ... ಪ್ರತಿಭಟನೆ.... ಪರವಾಗಿಯೋ ವಿರೋಧವಾಗಿಯೋ?" ಅಂದೆ, ನಗುತ್ತ.

"ವಿರೋಧವಾಗಿ" ಅಂದ ಗಂಭೀರವಾಗಿ.


"ಅತ್ಯಾಚಾರದ ವಿರೋಧವಾದ ಪ್ರತಿಭಟನೆ ಒಳ್ಳೆಯದು, ತುಂಬ ಒಳ್ಳೆಯದು. ಆದರೆ ಈ ಜನ ಇದರ ಪರವಾಗಿರೋ ಥರ ತೆಪ್ಪಗಿದ್ದಾರಲ್ಲಯ್ಯ?"

"ಇಲ್ಲ ಸಾರ್, ವಿರೋಧವಾಗಿದ್ದಾರೆ. ನಾಳೆ ಮೆರವಣಿಗೆಗೆ ತುಂಬ ಜನ ಬರ್ತಿದ್ದಾರೆ."

"ಅಕಸ್ಮಾತ್ ಯಾರೂ ಬರದೆ ನಾನೂ ನೀನೂ ಇಬ್ಬರೇ ಪ್ರತಿಭಟಿಸುವಂತಾದರೆ ನೋಡೋರಿಗೆ ಒಂಥರಾ ಆಗುತ್ತೆ, ನಾನು ಬರೊಲ್ಲ" ಅಂದೆ.

ಪ್ರತಿಭಟನಾ ಮೆರವಣಿಗೆ ಮಾಡೇ ಮಾಡಿದ. ಹದಿನೈದು ಜನರು ಘೇರಾಯಿಸಿದ್ದರಂತೆ....


-ಹೀಗೆ! ಕ್ಷಮಿಸಿ, ಈ ಪುಟ್ಟ ಟಿಪ್ಪಣಿ ಶೂದ್ರನ ವಿಶ್ವಾಸ ಕೇಳುವುದಕ್ಕಾಗಿ-ಈತ ನನಗೆ ತುಂಬಾ ಬೇಕಾದವನು. ತುಂಬ ಕಷ್ಟಪಟ್ಟು ಹದಿನೈದು ವರ್ಷ ಪತ್ರಿಕೆ ನಡೆಸಿದವನು. ಮೊದಮೊದಲು ವ್ಯಾಕರಣದ ಕಟ್ಟಾ ವಿರೋಧಿಯಂತಿದ್ದರೂ ಈಚೆಗೆ ಸ್ಪಷ್ಟವಾಗಿ, ವೈಚಾರಿಕವಾಗಿ, (ಕೆಲವು ಸಲ) ತಪ್ಪಾಗಿ ಚಿಂತಿಸುವವನು, ನಮ್ಮೆಲ್ಲರಂತೆಯೇ. ಈತನಿಗೆ ಅಭಿನಂದನೆ.



ಅಕ್ಟೋಬರ್ 23, 1988

ಬಾಯ್‌ಫ್ರೆಂಡ್

ಶೂದ್ರ ಸೆಮಿನಾರ್‌ಗೆ ಶಂಕರ ಮೊಕಾಶಿ ಬಂದಿದ್ದರು. ಈತ ನನ್ನ ಹಳೆಯ ಮಿತ್ರ. ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲೊಂದನ್ನು (ಗಂಗವ್ವ ಗಂಗಾಮಾಯಿ), ಉತ್ತಮ ಕವನಗಳಲ್ಲೊಂದನ್ನು ಬರೆದಿರುವ ಮೊಕಾಶಿ ತಿಕ್ಕಲುಗಳಲ್ಲಿ ತಿಕ್ಕಲ. ತಮಾಷೆಯ, ಅಕ್ಕರೆಯ ಮನುಷ್ಯ ಕೂಡ. ಮೊಕಾಶಿ ತಮ್ಮ ಅಧ್ಯಕ್ಷ ಭಾಷಣ ಶುರುಮಾಡಿದರು. "ಒಂದು ರೀತಿಯಲ್ಲಿ ನಾನು ದೇವರನ್ನು ನಂಬೋಲ್ಲ, ಇನ್ನೊಂದು ರೀತಿಯಲ್ಲಿ ನಂಬುತ್ತೇನೆ!" ಹೀಗೆಂದೊಡನೆ ನಮಗೆಲ್ಲ ಪ್ಯಾಸೇಜ್ ಟು ಇಂಡಿಯಾದ ಗಾಡ್ ಬೋಲೆ ನೆನಪಾದ. ಒಂದು ರೀತೀಲಿ ಎಲ್ಲ ನಿಜ, ಇನ್ನೊಂದು ರೀತಿಯಲ್ಲಿ ಎಲ್ಲ ಮಾಯ. ಒಂದು ರೀತಿಯಲ್ಲಿ ನಾನು ಮದ್ಯಪಾನಿ, ಇನ್ನೊಂದು ರೀತಿಯಲ್ಲಿ ನಿಂಬೂಪಾನಿ. ನಗುತ್ತ ಅನೇಕರು ಎದ್ದರು. ಮೊಕಾಶಿ ಬಿಡಲಿಲ್ಲ, ಈ ದೇಶವನ್ನು ಬ್ರಾಹ್ಮಣರೇ ಆಳುವುದಾಗಿ ಭವಿಷ್ಯ ನುಡಿದರು. "ರಾಜೀವ್ ಹೋದರೆ ಕೆ.ಸಿ.ಪಂತ್ ಬರ್ತಾರೆ..."




ವಿಚಿತ್ರ ಗೊತ್ತ? ಎಷ್ಟೋ ಸಲ ಖಾಸಗಿಯಾಗಿ ಈ ಮೊಕಾಶಿ ಇಂಥ 'ವಿಚಾರ' ಹೇಳಿ ನನ್ನೊಂದಿಗೆ ಜಗಳವಾಡಿದ್ದರೂ ನನಗೆ ಈತನ ಮೇಲೆ ಸಿಟ್ಟಿಲ್ಲ. ಮುಗ್ಧ ಮೊಕಾಶಿ. ತುರ್ತು ಪರಿಸ್ಥಿತಿ ಆದ ಮೇಲೆ ಇಂದಿರಾಗಾಂಧಿ ಚುನಾವಣೆಯಲ್ಲಿ ಸೋತು ಅಜ್ಞಾತವಾಸದಲ್ಲಿದ್ದಾಗ "ಈಗ ಎಲ್ಲ ಇಂದಿರಾ?" ಎಂದು ನಾನು ಕೆಣಕಿದಾಗ ಮೊಕಾಶಿ ಹೇಳಿದ್ದರು, "Poor girl, ಮತ್ತೆ ಬಂದೇ ಬರ್ತಾಳೆ, ಪ್ರಧಾನಿ ಆಗೇ ಆಗ್ತಾಳೆ ನೋಡ್ತಿರಿ!" ಬಂದೇ ಬಂದಳು ಮಹಾರಾಯಿತಿ.

ಮೊಕಾಶಿಯವರನ್ನು ಪೂರ್ಣ ಹುಚ್ಚ ಅನ್ನುವ ಧೈರ್ಯ ಯಾವ ಹುಚ್ಚನಿಗಿದೆ?

ಕತೆ

ಎಷ್ಟು ಖುಷಿ, ಹಡೆದ ತಾಯಿಯ ಖುಷಿ. ಸೀರಿಯಸ್ ಅಲ್ಲ, ಸಹಜ ಹೆರಿಗೆ...

ಮೊನ್ನೆ ಒಂದು ಕತೆ ಬರೆದೆ, ದೀಪಾವಳಿ ಸಂಚಿಕೆಗಾಗಿ. ಈ ಕತೆ ಆರು ತಿಂಗಳಿಂದ ನನ್ನ ಮನಸ್ಸಿನಲ್ಲಿತ್ತು, ಬರೆಯಲೇ ಬೇಕಿತ್ತು, ಬರೆಯಲು ಹೋದರೆ ಆಗಿರಲಿಲ್ಲ, ತಂತ್ರ ಸರಿಹೋಗಿರಲಿಲ್ಲ, ಯಾವ ದೃಷ್ಟಿಯಿಂದ ನೋಡಿದರೆ ಸರಿ ಹೋಗುತ್ತೆ ಎಂದು ಸ್ಪಷ್ಟವಾಗಿರಲಿಲ್ಲ, ಕಾಡಿನ ಮಧ್ಯದ



ಊರಲ್ಲಿ ನಡೆದ ಕತೆ, ಅಂದರೆ ನಮ್ಮೆಲ್ಲರ ಆಳದಲ್ಲಿ, ಮನುಷ್ಯನ ಅಂತರ್ಯದ ಕಾಡು.

ಒಮ್ಮೆ ನನಗೊಂದು ಅನುಭವವಾಗಿತ್ತು. ಬಂದವರು, ಹೋದವರು, ಕಂಡವರೆಲ್ಲ ಪ್ರೀತಿ ಗೌರವ ತೋರುತ್ತಿದ್ದಾರೆ. ಮಾತಿಗೆ ಮೀರುವುದಿಲ್ಲ, ಸಾಧಾರಣವಾಗಿ ವಿರೋಧಿಸುವುದಿಲ್ಲ. ಇದರಿಂದಾಗಿ ಯಾರು ಪ್ರಾಮಾಣಿಕವಾಗಿ ಒಪ್ಪುತ್ತಾರೆ, ಪ್ರೀತಿಸುತ್ತಾರೆ ಎಂಬುದೇ ಬಗೆಹರಿಯುತ್ತಿರಲಿಲ್ಲ, ಅಲ್ಲದೆ... ಇಷ್ಟೆಲ್ಲ ಪ್ರೀತಿ ಪಡೆದ ನನಗೆ ಒಮ್ಮೊಮ್ಮೆ ಅವಮಾನದ ಕನಸು ಬೀಳುತ್ತಿದ್ದವು-ಕ್ಯೂನಿಂದ ತಳ್ಳಲ್ಪಟ್ಟಂತೆ, ವಿನಾಕಾರಣ ಬೈಸಿಕೊಂಡಂತೆ, ಸಿದ್ಧತೆಯೂ ಇಲ್ಲದ ನಾಟಕದಲ್ಲಿ ನಟಿಸಲು ಹೋದಂತೆ....

ಈ ಕನಸುಗಳೊಂದಿಗೆ ಊರೂರು ಸುತ್ತುತ್ತಿದ್ದಾಗ ಗೆಳೆಯನೊಬ್ಬ ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಲವು ವಿಚಾರ ವಿವರಿಸಿದ.

ಎಲ್ಲ ಸೇರಿ ಕತೆಯಾಯಿತು.

ಎರಡು ದಿನ ನೋವನ್ನುಂಡು ಆದ ಹೆರಿಗೆ.

ಬಿಜೆಪಿ ಚೆಡ್ಡಿ, ಕಾಂಗ್ರೆಸ್ ಟೋಪಿ, ಜೆಡಿಎಸ್?



ಅಬ್ದುಲ್ ರಜಾಕ್, ದೇವದುರ್ಗ
ಗಂಡಹೆಂಡತಿ ಸಂಬಂಧ ಏಳು ಜನ್ಮಗಳ ಅನುಬಂಧ, ಪ್ರೇಮಿಗಳ ಸಂಬಂಧ?
* ಹಲವೊಮ್ಮೆ ಲೈಲಾ-ಮಜನೂ ದುರಂತ!

ಡಿ.ಎಲ್. ಚಂದ್ರಿಕ, ಹರಪನಹಳ್ಳಿ
ಕಲ್ಲರಳಿ ಹೂವಾಗುವಾಗ, ಹೂವಂತ ಜನರ ಮನಸ್ಸು ಕಲ್ಲಾಗುವುದೇಕೆ?
* ಕಲ್ಲು ಕರಗುವ ಸಮಯ ಬರಬೇಕು.


ಶಿವು-ರಾಜ್ (ವೆಂಕಟಪೂರು), ರಾಯಚೂರು
ಚಿಡ್ಡಿಗಳು ಗಲಭೆ ಮಾಡಲು ನೇಪಾಳಕ್ಕೂ ಪಲಾಯನ ಮಾಡಿರುವುದೇಕೆ?
* ಇವರ ಹಿಂದೂ ರಾಜನಿಗೇ ಕುಂಡೆ ಮೇಲೆ ಒದ್ದು ಮೂಲೇಲಿ ಕೂರಿಸಿರುವಾಗ ಇವರು ಯಾವ ಲೆಕ್ಕ?!

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಗಿರೀಶ್ ಕಾರ್ನಾಡ್ ತಮಿಳ್ ಕಾರ್ನಾಡ್ ಅಲ್ಲವೆ?
* ಹಾಗೆ ಕರೆಯುತ್ತಿರುವವರು ಖಂಡಿತವಾಗಿಯೂ ಕನ್ನಡಿಗರಲ್ಲ!

ಕೆ. ಶ್ರೀನಿವಾಸ್, ಮಂಡ್ಯ
ಕಾವೇರಿ ಹೋರಾಟದಲ್ಲಿ ಬೋಧನೆ, ಪ್ರಚೋದನೆಗಿಂತಾ ರಂಜನೆಯೇ ಜಾಸ್ತಿ ಇತ್ತಲ್ಲಾ?
* ಅದು ಹೋರಾಟ ಆಗದೇ ಬರೀ ಹಾರಾಟ ಆಗಿದೆ ಅದಕ್ಕೆ.

ಅ. ರೆಡ್ಡಿ, ಬೆಂಗಳೂರು
ಸರ್ಕಾರ ಉಚಿತವಾಗಿ ಕಾಂಡೋಮ್‌ಗಳನ್ನು ನೀಡುತ್ತಿದ್ದರೂ ದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆಯಲ್ಲಾ?
* ಇತ್ತೀಚಿನ ಸಮೀಕ್ಷೆಯ ಪ್ರಕಾರ ಅವುಗಳಿಗೂ, ಬಳಕೆದಾರರ 'ಸ್ಥಿತಿಗತಿ'ಗೂ ತುಂಬಾ ವ್ಯತ್ಯಾಸವಿದೆಯಂತೆ. ಇದೇ ಸಮಸ್ಯೆ ಆಗಿರಬಹುದಾ?

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ
ಇದುವರೆಗೆ ದೇವೇಗೌಡ್ರು ಎಷ್ಟು ಟಿಎಂಸಿ ಮೊಸಳೆ ಕಣ್ಣೀರು ಸುರಿಸಿರಬಹುದು?
* ಅವರ ಕುಟುಂಬದ ಸಾವಿರ ಎಕರೆ ಜಮೀನಿಗೆ ನೀರಾವರಿ ಮಾಡುವಷ್ಟು.



ಅಕ್ಷಯಕುಮಾರ, ಸುರಪೂರ
ರಾಜಕಾರಣಿಗಳ 'ತುಲಾಭಾರ'ಕ್ಕೂ ಮಠಾಧೀಶರ 'ಅಡ್ಡಪಲ್ಲಕ್ಕಿ' ಉತ್ಸವಕ್ಕೂ ಇರುವ ವ್ಯತ್ಯಾಸ?
* ಎರಡೂ ಹೆಣಭಾರ!

ಎಂ. ಮುಕ್ರಂಪಾಷ, ಚಾಮರಾಜನಗರ
ಕಾವೇರಿ ತೀರ್ಪು ಸರಿ ಎಂದ ನಾರಿಮನ್‌ಗೆ ಏನೆನ್ನಬೇಕು?
* ನೂರು ಕೋಟಿ ನುಂಗಿದ ಚೋರ್‌ಮನ್?!

ಎಸ್. ತಾರಾನಾಥ್, ಅಚ್ಚಪ್ಪನಕೊಪ್ಪಲು
ಹೆಂಗಸರ ಗುಂಪಿನಲ್ಲಿ ಮಾತು ಜಾಸ್ತಿ, ಗಂಡಸರ ಗುಂಪಿನಲ್ಲಿ?
* ಬೊಗಳೇ ಮಾತೇ ಆಸ್ತಿ!

ಕವಿತಾ ಮಧುಸೂದನ, ದಾವಣಗೆರೆ
ಕುಮಾರಸ್ವಾಮಿ ಎಲ್ಲದಕ್ಕೂ 'ಸೂಕ್ತ ಸಮಯ ಬರ್ಲಿ' ಅಂತಾರಲ್ಲ ಅದು ಯಾವಾಗ ಬರುತ್ತೆ?
* ಡ್ಯಾಡಿ ಅಪ್ಪಣೆ ಕೊಟ್ಟಾಗ.

ಬಹುಮಾನಿತ ಪ್ರಶ್ನೆ

ಎಂ. ನಿಸರ್ಗ, ದಾವಣಗೆರೆ
ಬಿಜೆಪಿ ಚಿಡ್ಡಿ, ಕಾಂಗ್ರೆಸ್ ಟೋಪಿ, ಜೆಡಿಎಸ್?
* ಚಿಚ್ಚಿ ಅಂತ ದೇವೇಗೌಡ ಹೇಳಾಗಿದೆ.

ಥೀ ತುಂಟಿ!



ಬಾಸ್ಗೆ ಬರಬಾರದ ತಲೆಬೇನೆ ಬಂದಿತ್ತು. ಆಫೀಸಿನ ಎಲ್ಲರಿಗೂ ಅದು ವ್ಯಾಪಿಸಿದಾಗ ಬಾಸ್‌ನ ಸಹಾಯಕ, "ಸಾರ್ ಹಿಂದೊಮ್ಮೆ ನನಗೂ ಹೀಗೆ ಆಗಿತ್ತು. ನನ್ನ ಹೆಂಡ್ತಿ ನನ್ನನ್ನ ಸೋಫಾ ಮೇಲೆ ಬಿಗಿದಪ್ಪಿ ಒಂದು ದೊಡ್ಡ ಕಿಸ್ ಕೊಟ್ಟಳು ನೋಡಿ, ಅವತ್ತಿಂದ ಇಲ್ಲಿಯವರೆಗೆ ತಲೆನೋವೇ ಇಲ್ಲಾ ಸಾರ್" ಅಂದ.

"ನಾನೂ ಮಾಡೋದೆಲ್ಲಾ ಮಾಡಿದೆ ಮಾರಾಯ, ಯಾವುದರಿಂದಲೂ ಫಲಕಾರಿ ಆಗ್ಲಿಲ್ಲ, ಅದ್ಸರಿ, ಈಗ ನಿನ್ನ ಹೆಂಡ್ತಿ ಮನೆಯಲ್ಲಿಯೇ ಇದ್ದಾರಾ?" ಎಂದ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಕಾವೇರಿ ಸಮಸ್ಯೆಗೆ ವಾಸ್ತು ದೋಷ ಕಾರಣವಂತೆ, ನೀವೇನಂತೀರಿ?

ಫೆಬ್ರವರಿ 21ರ ಸಂಚಿಕೆಯ ನಮ್ಮ ಪ್ರಶ್ನೆ: ಕಾವೇರಿ ಕಾವೇರಿದರೆ ಯಾರಿಗೆ ಲಾಭ?

ನಿಮ್ಮ ಉತ್ತರ: ಪೆಟ್ರೋಲ್, ಬಟ್ಟೆ, ಬಣ್ಣ, ಪ್ಲಾಸ್ಟಿಕ್ ಬಿಂದಿಗೆ ಮಾರಾಟಗಾರರಿಗೆ ಸಖತ್ ಲಾಭ.


ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಸ್. ತಾರಾನಾಥ್, ಅಚ್ಚಪ್ಪನ ಕೊಪ್ಪಲು

ರಿವೇಂಜ್ ಕಿಲ್ಲಿಂಗ್ಸ್ 19

ರಾ. ಸೋಮನಾಥ್


ಮಚ್ಚನಿಗೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಮೇಲೆ ಬದ್ಧ ದುಷ್ಮನಿಯಾದರೆ, ಮುಲಾಮನಿಗೆ ಗೋಪಾಲಯ್ಯನ ಸಮೀಪದ ಸಂಬಂಧಿಯೂ ಆದ ಜೇಕೆಯ ಮೇಲೆ ನಿಗಿನಿಗಿವೈರ. ಶತ್ರುವಿನ ಶತ್ರು ಮಿತ್ರ ಎಂಬಂತೆ ಇಬ್ಬರೂ ಒಟ್ಟೊಟ್ಟಾಗಿಯೇ ಓಡಾಡಿದ್ದರು. ಆದರೆ ಲ್ಯಾಂಡು ಮತ್ತು ದುಡ್ಡು ಅದೆಂಥಾ ಗೆಳೆತನವನ್ನೂ ಹೊಸಕಿ ಹಾಕುತ್ತದೆಯೆಂಬ ಕಠೋರ ಸತ್ಯವನ್ನು ಮಾತ್ರ ಇಬ್ಬರೂ ಮರೆತೇಬಿಟ್ಟರು.

ಲಗ್ಗೆರೆಯ ಮುಲಾಮ


ಮುಲಾಮ

ಅವನ ಹೆಸರು ಮುಲಾಮ! ಅದ್ಯಾವ ಗಳಿಗೆಯಲ್ಲಿ ಆ ಹೆಸರು ಆತನಿಗಂಟಿತೊ. ಹಳೇ ರೌಡಿ ಬಲರಾಮ ಇನ್ನೂ ಬದುಕಿದ್ದ ಕಾಲದಲ್ಲಿ ಈ ಮುಲಾಮನ ಹೆಸರು ಕೇಳಿಬಿಟ್ಟರೆ ಪೈಪ್‌ಲೈನ್, ಪ್ರಕಾಶನಗರ, ಶ್ರೀರಾಂಪುರ, ರಾಜಾಜಿನಗರ ಇತ್ಯಾದಿ ಏರಿಯಾಗಳು ಥರಗುಡುತ್ತಿದ್ದವು. ಆ ಕಾಲದ ರೌಡಿಗಳ ಪೈಕಿ ಏಕಾಂಗಿಯಾಗಿ ನುಗ್ಗಿ ಒಬ್ಬೊಬ್ಬರೇ ಬಡಿದಾಡುವ, ಗ್ರಹಚಾರ ಕೆಟ್ಟರೆ ಒದೆಯನ್ನೂ ತಿಂದು ಬರುವ ಜಾಯಮಾನದ ಬಲರಾಮನ ಎಲ್ಲಾ ಗುಣಗಳೂ ಮುಲಾಮನಿಗೆ ಅನುವಂಶಿಕವಾಗಿ ಬಂದಿತ್ತು.

ಆವನು ಇನ್ನೂ ಬದುಕಿರುವ ಬಲರಾಮನ ಏಕೈಕ ಶಿಷ್ಯ. ರಾಜಾಜಿನಗರದ ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡಂತೆ ಪೊಲೀಸ್ ಠಾಣೆಯ ಪಕ್ಕದ ಪ್ರದೇಶವೇ ಆಗಿನ ಜೂಗನಹಳ್ಳಿ ಎಂಬುದು ಅದೆಷ್ಟು ಜನಕ್ಕೆ ನೆನಪಿದೆಯೊ? ಈ ಜೂಗನಹಳ್ಳಿಯ ಗೌಡರ ಜಮೀನೆಲ್ಲ ರಾಜಾಜಿನಗರ ಬಡಾವಣೆಯ ನಿರ್ಮಾಣಕ್ಕೆಂದು ಆವತ್ತು ಸಿಐಟಿಬಿ ಕಿತ್ತುಕೊಂಡಾಗ ಗೌಡರ ಹೊಲಗಳಲ್ಲಿ ಕೂಲಿ ಮಾಡಿಕೊಂಡಿದ್ದ ಈ ಜೂಗನಹಳ್ಳಿಯ ಇಡೀ ದಲಿತರ ಕಾಲೋನಿಯೇ ಬೀದಿಗೆ ಬಿದ್ದಿತ್ತು. ಕೆಲವರು ಆಟೋ ಡ್ರೈವರುಗಳಾದರು. ಇನ್ನೂ ಕೆಲವರು ಮನೆ ಬ್ರೋಕರುಗಳಾಗಿ ಕುಡಿತಕ್ಕೆ ಬಿದ್ದರೆ ದಲಿತರ ಹೆಣ್ಣುಮಕ್ಕಳೆಲ್ಲ ಸಾರಾಸಗಟಾಗಿ ಮನೆ ಕೆಲಸಕ್ಕಿಳಿದರು. ಅಂಥವರ ಮಧ್ಯೆ ಮುಲಾಮನ ತಂದೆ ನಾರಾಯಣಪ್ಪ ಮಾತ್ರ ಬೋರ್‌ವೆಲ್ ರಿಪೇರಿ ಕೆಲಸಕ್ಕೆ ನಿಂತ. ಆತನ ಮಗನೇ ಲೋಕೇಶ್. ಅಪ್ಪನ ಜೊತೆ ಬೋರ್‌ವೆಲ್ ರಿಪೇರಿಗೆ ಬರುತ್ತಲೇ ಪಕ್ಕದ ಬಸವೇಶ್ವರ ಸ್ಕೂಲಿನಲ್ಲಿ ನಾಲ್ಕನೇ ಕ್ಲಾಸಿಗೆ ಹೋಗುತ್ತಿದ್ದ, ದಲಿತರ ಹುಡುಗ ಲೋಕೇಶನಿಗೆ ಓದು ಹತ್ತಲೇ ಇಲ್ಲ. ಕ್ಲಾಸಿಗೆ ಚಕ್ಕರ್ ಹಾಕಿ ಪೋಲಿ ಬಿದ್ದವನು ಕ್ರಮೇಣ ಇದೇ ಜೂಗನಹಳ್ಳಿಯ ಹಳೇ ರೌಡಿ ಅಣ್ಣೆಬಾಬು ಎಂಬಾತನಿಗೆ ಶಿಷ್ಯನಾದ.


ಸೊಸೈಟಿ ಭೈರ

ಆಗಿನ್ನೂ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಗೆ ಜನ ಬರುತ್ತಿರಲಿಲ್ಲ, ಊರೂ ಬೆಳೆದಿರಲಿಲ್ಲ, ಸಂಜೆಯಾದರೆ ಸಾಕು ಬಣಗುಡುತ್ತಿದ್ದ ಇಎಸ್‌ಐ ಕಾಂಪೌಂಡು ಆ ಹೊತ್ತಿಗೆ ಪ್ರೇಮಿಗಳ ಮೆಚ್ಚಿನ ತಾಣ. ಹಾಗೇ ಇಎಸ್‌ಐ ಕಾಂಪೌಂಡ್ ಹೊಕ್ಕು, ಕತ್ತಲ ಸಂದಿ ಸೇರಿಕೊಳ್ಳುತ್ತಿದ್ದ ಪ್ರೇಮಿಗಳನ್ನು ಹೆದರಿಸಿ ದುಡ್ಡು ಕೀಳುವುದು ಅಣ್ಣೆಬಾಬುವಿನ ಚಾಳಿಯಾಗಿತ್ತು, ಆ ಹೊತ್ತಿಗಾಗಲೇ ಲೋಕೇಶನಿಗೆ ಮುಲಾಮು ಎಂಬ ಅಡ್ಡಹೆಸರು ಬಂದಿತ್ತು, ಸಂಜೆಯಾದರೆ ಇಎಸ್‌ಐ ಕಾಂಪೌಂಡಿನಲ್ಲಿ ಕುಡಿಯುತ್ತಾ ಕೂರುತ್ತಿದ್ದ ಅಣ್ಣೆಬಾಬುವಿಗೆ ಬಾಟಲಿ, ಸಿಗರೇಟು, ತಿಂಡಿ ತಂದು ಕೊಡುವುದೇ ಆತನ ನಿತ್ಯಕಾಯಕ.


ಅದ್ಯಾವುದೋ ಕಿತಾಪತಿಯಲ್ಲಿ ಅಣ್ಣೆಬಾಬು ಮುಲಾಮನನ್ನು ಹಿಡಿದು ಸಮಾ ಬಾರಿಸಿಬಿಟ್ಟ. ಆ ಕಾರಣಕ್ಕೇ ಕೆಲದಿನ ಊರುಬಿಟ್ಟ ಮುಲಾಮ ಅಣ್ಣೆಬಾಬು ವಿರುದ್ಧ ಜಿದ್ದಿಗೆ ಬಿದ್ದು ತನ್ನದೇ ಹುಡುಗರ ಹಿಂಡೊಂದನ್ನು ಕಟ್ಟಿಕೊಂಡ. ಅದೊಂದು ಸಂಜೆ ಕುಡಿದು ಚಿತ್ತಾಗಿದ್ದ ಅಣ್ಣೆಬಾಬುವಿನ ಮೇಲೆ ಬಿದ್ದು ಆತನ ಮುಖಾಮೂತಿ ಚುಚ್ಚು ಹಾಕಿದ. ಅದೇ ಕೇಸಿನಲ್ಲಿ ಪೊಲೀಸರು ಆತನನ್ನು ಹಿಡಿದು ಜೈಲಿಗೆ ಹಾಕಿದರು. ಜೈಲಿನಲ್ಲಿ ಆತನಿಗೆ ಪರಿಚಿತನಾದವನೇ ಆ ಕಾಲದ ದೈತ್ಯ ಬಲರಾಮ!

ಜೈಲಿನಲ್ಲಿ ಬಲರಾಮನ ಆಪ್ತ ಸೇವಕನಂತಿದ್ದ ಮುಲಾಮನಿಗೆ ಜೈಲೇ ಭೂಗತ ಬದುಕಿನ ವಿಶ್ವವಿದ್ಯಾಲಯವಾಯಿತು. ಬಲರಾಮನ ಎಲ್ಲಾ ಚಾಲುಗಳನ್ನೂ ಕರಗತ ಮಾಡಿಕೊಂಡವನು ಆತನ ಜೊತೆಗೇ ಜೈಲಿಂದ ಹೊರಬಿದ್ದ. ಹೊಡೆದಾಟ, ಬಡಿದಾಟ, ಜಿದ್ದಾಜಿದ್ದಿಯೇ ಆತನ ದಿನಚರಿಯಾಗಿ ಹೋಗಿತ್ತು, ಇದಾಗಿ ಕೆಲದಿನಕ್ಕೇ ಇನ್ನಾವುದೋ ಕೇಸಿನಲ್ಲಿ ಜೈಲು ಸೇರಿದ್ದ ಬಲರಾಮನನ್ನು ಬ್ಲಾಕ್ ಡೈವ್ ರಾಜ, ಜಬ್ಬಾರ್ ಮುಂತಾದವರು ಸೇರಿಕೊಂಡು ಜೈಲೊಳಗೇ ಇರಿದು ಕೊಂದುಬಿಟ್ಟರು. ಅದನ್ನು ಮಾಡಿಸಿದ್ದೇ ನಾನು ಅಂತ ಬಹಿರಂಗವಾಗಿ ಹೇಳಿಕೊಂಡವನು ಕೊರಂಗು. ಆಗಾತ ಜೇಕೆಯ ಬಲಗೈ ಬಂಟ. ಜೇಕೆಗೂ ಬಲರಾಮನಿಗೂ ಇದ್ದ ಪರಂಪರಾಗತ ಬದ್ಧವೈರವೇ ತನ್ನ ಧಣಿ ಬಲರಾಮನ ಹತ್ಯೆಗೆ ಕಾರಣವೆಂಬ ನಿರ್ಧಾರಕ್ಕೆ ಬಂದು ಬಿಟ್ಟಿದ್ದ ಮುಲಾಮ.

ಬಲರಾಮನ ಹತ್ಯೆಯ ನಂತರ ಅನೇಕ ವರ್ಷಗಳ ಕಾಲ ಮುಲಾಮನ ಸದ್ದೇ ಇರಲಿಲ್ಲ, Of course ಆತ ಲೇಟಿಟ್ ಮಂಜನ ಜೊತೆ ಕಾಣಿಸಿಕೊಳ್ಳುವ ತನಕ–

ಅದಕ್ಕೆ ಕಾರಣನಾದವನು ಲಗ್ಗೆರೆಯ ಲ್ಯಾಂಡ್ ಡೀಲರ್ ಮಂಡ್ಯ ಕೃಷ್ಣ!


ಈಗ್ಗೆ ಕೆಲ ವರ್ಷಗಳ ಹಿಂದೆ ಮಂಡ್ಯದಿಂದ ಬಂದು ಲಗ್ಗೆರೆಯಲ್ಲಿ ಎಸ್ಟೇಟ್ ಆಫೀಸು ತೆರೆದುಕೊಂಡು ಕುಂತ ಕೃಷ್ಣ ಕ್ರಮೇಣ ಲಿಟಿಗೇಷನ್ ಪ್ರಾಪರ್ಟಿಗಳಿಗೆ ಕೈಹಾಕತೊಡಗಿದ. ಜಬರ್ದಸ್ತಿ ಮಾಡುವ ಅವಶ್ಯಕತೆ ಬಂದಾಗಲೆಲ್ಲ ಲೇಟಿಟ್ ಮಂಜನ ಜೊತೆಗಾರನಾಗಿದ್ದ ಶಿವಾನಂದನಿಗೆ ದೀಲು ಕೊಡುತ್ತಿದ್ದ. ಆ ಹೊತ್ತಿಗೆ ಜೇಕೆ ತಂಡದ ವಿರುದ್ಧ ತನ್ನದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡು ಜೇಕೆ ವಿರುದ್ಧವೇ ಮೀಸೆ ತಿರುವುತ್ತಿದ್ದ ಲೇಟಿಟ್ ಮಂಜನಿಗೆ ಲಗ್ಗೆರೆ, ರಾಜಗೋಪಾಲ ನಗರ, ಕುರುಬರಹಳ್ಳಿ, ಪೀಣ್ಯ ಭಾಗಗಳಿಂದ ಲ್ಯಾಂಡು ಮತ್ತು ಮನೆಗಳ ದೀಲು ಬರುತ್ತಿದ್ದುದೇ ಮಂಡ್ಯ ಕೃಷ್ಣನಿಂದ.


ಲಗ್ಗೆರೆಯ ರೌಡಿ ಮುನಿಭೈರ

ಆಗ ಜೇಕೆ ವಿರುದ್ಧ ತನ್ನದೇ ಸಿಂಡಿಕೇಟ್ ಕಟ್ಟಿಕೊಂಡಿದ್ದ ಲೇಟಿಟ್ ಮಂಜನ ಬೆನ್ನೆಲುಬಿನಂತಿದ್ದವನೇ ವಿಜಯನಗರದ ಗುಂಡಾ ಉರ್ಫ್ ಮುನಿರಾಜ ಎಂಬ ಮರಿರೌಡಿ. ಆತನ ಜೊತೆ ಕಾಂತ, ದಡಿಯಾ ಹರೀಶ ಮುಂತಾದವರೂ ಮಂಜನ ಜೊತೆ ಕೈಜೋಡಿಸಿದ್ದರು. ಅವರೇ ಮಂಜನನ್ನು ತಿಮ್ಮೇನಹಳ್ಳಿ ತಮ್ಮಯ್ಯನಿಗೂ ಹಳೇ ರೌಡಿ ಮುಲಾಮನಿಗೂ ಪರಿಚಯಿಸಿಕೊಟ್ಟಿದ್ದರು. ಹಾಗೇ ಮುಲಾಮನಿಗೂ ಲೇಟಿಟ್ ಮಂಜನಿಗೂ ದೋಸ್ತಿ ಬೆಳೆಯಿತು. ತಮ್ಮಯ್ಯನೇ ನಿಂತು ಮಚ್ಚನನ್ನು ಮುಲಾಮನಿಗೆ ಪರಿಚಯಿಸಿಕೊಟ್ಟಿದ್ದ. ಈ ರೀತಿ ಮಚ್ಚನಿಗೂ ಮುಲಾಮನಿಗೂ ಶುರುವಾದ ದೋಸ್ತಿಯೇ ಮುಂದೆ ಬದ್ಧವೈರವಾಗಿ ಬದಲಾಗುತ್ತದೆಯೆಂದೂ ಆ ಕಾರಣಕ್ಕೇ ಸುಂಕದಕಟ್ಟೆಯಲ್ಲಿ ಮಚ್ಚನ ಶಿಷ್ಯರಾದ ವಿಜಯಕುಮಾರ ಮತ್ತು ಶಂಕರ ಎಂಬಿಬ್ಬರು ಹುಡುಗರನ್ನು ಮುಲಾಮನ ಗ್ಯಾಂಗ್ ಬರ್ಬರವಾಗಿ ಕೊಂದು ಹಾಕುತ್ತದೆಯೆಂದೂ ಅದಕ್ಕೆ ಪ್ರತಿಯಾಗಿ ಮಚ್ಚನ ಹುಡುಗರು ಮುಲಾಮನ ಶಿಷ್ಯ ಪುನಿತೇಶ ಎಂಬ ಮರಿ ರೌಡಿಯನ್ನು ಅಟ್ಟಾಡಿಸಿ ಕೊಲ್ಲುತ್ತಾರೆಂದೂ, ಮುಂದೆ ಇದೇ ಕಾರಣಕ್ಕೆ ಬದ್ಧವೈರಿಗಳಾಗಿದ್ದ ಜೇಕೆ ಮತ್ತು ಮುಲಾಮ ಒಂದಾಗುತ್ತಾರೆಂದೂ, ಅದು ಅಂತಿಮವಾಗಿ ಮಚ್ಚನ ಕೊಲೆಯಲ್ಲಿ ಅಂತ್ಯಗೊಳ್ಳುತ್ತದೆಯೆಂದೂ ಯಾರಿಗೆ ತಾನೇ ಗೊತ್ತಿತ್ತು?

ಈ ಮಧ್ಯೆ ಲೇಟಿಟ್ ಮಂಜನೇ ಕೊಲೆಯಾಗಿ ಹೋದ ಮೇಲೆ ಲಗ್ಗೆರೆಯ ಮಂಡ್ಯ ಕೃಷ್ಣನಿಗೆ ಮುಲಾಮನನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲದಂತಾಯ್ತು. ದಿನಕ್ರಮೇಣ ಮುಲಾಮನ ಜೊತೆ ಓಡಾಡುತ್ತ ಓಡಾಡುತ್ತ ಮಂಡ್ಯ ಕೃಷ್ಣನೂ ರೌಡಿಯಾಗಿ ಹೋದ. ಆ ಹೊತ್ತಿಗೆ ಲಗ್ಗೆರೆ ಬೆಂಗಳೂರಿನ ನೆಲಗಳ್ಳರ ಭೂಪಟದಲ್ಲಿ ಅದೆಂಥಾ ಕುಖ್ಯಾತಿಗೇರಿತ್ತೆಂದರೆ; ಲಗ್ಗೆರೆ ಮತ್ತು ರಾಜಗೋಪಾಲ ನಗರದ ಸುತ್ತಮುತ್ತಲಲ್ಲೇ ಸರಿಸುಮಾರು ಮೂವತ್ತರಿಂದ ನಲವತ್ತು ರೌಡಿ ತಂಡಗಳು ಹುಟ್ಟಿಕೊಂಡಿದ್ದವು. ಅದಕ್ಕೆ ಕಾರಣವಾಗಿದ್ದು ಲ್ಯಾಂಡು. ಲಗ್ಗೆರೆ, ಸುಂಕದಕಟ್ಟೆ, ನಾಗರಬಾವಿ, ಕಮಲಾನಗರ, ಬ್ಯಾಡರಹಳ್ಳಿ, ಗೊಲ್ಲರಹಟ್ಟಿ, ಜ್ಞಾನಭಾರತಿ, ಕೆಂಗೇರಿ, ತಾವರೆಕೆರೆಗಳ ತನಕ ಬೇಕಾಬಿಟ್ಟಿ ಗೋಮಾಳಗಳೂ ರೆವಿನ್ಯೂ ಸೈಟುಗಳೂ ಇದ್ದವು. ಯಾವುದೋ ಕಾಲಕ್ಕೆ ಇಲ್ಲಿನ ರೈತರಿಂದ ಹೌಸಿಂಗ್ ಸೊಸೈಟಿಗಳು ಭೂಮಿ ಖರೀದಿಸಿ ಅವುಗಳನ್ನು ಸೈಟು ಮಾಡಿ ಯಾರ್ಯಾರಿಗೋ ಮಾರಿಬಿಟ್ಟಿದ್ದವು. ಈ ಮಧ್ಯೆ ಸುಪ್ರೀಮ್ ಕೋರ್ಟ್ ಕೊಟ್ಟ ವಿಚಿತ್ರ ತೀರ್ಪೊಂದರಿಂದಾಗಿ ಹೌಸಿಂಗ್ ಸೊಸೈಟಿಯವರು ರೈತರಿಂದ ಏನೆಲ್ಲಾ ಜಮೀನು ಕೊಂಡಿದ್ದವೋ ಅವೆಲ್ಲವೂ ಮತ್ತೆ ಮೂಲ ರೈತರಿಗೇ ಸಲ್ಲತಕ್ಕದ್ದೆಂಬ ತೀರ್ಪು ಹೊರಬಿತ್ತು, ಅದು ಬೆಂಗಳೂರು ಸುತ್ತಮುತ್ತ ಭಯಂಕರ ಭೂವಿವಾದದ ಸರಣಿಯನ್ನೇ ಹುಟ್ಟು ಹಾಕಿತ್ತು.


ಈಗಾಗಲೇ ಸೊಸೈಟಿಗಳಿಂದ ಸೈಟು ಖರೀದಿಸಿದವರು ಒಂದೆಡೆಯಾದರೆ ಮತ್ತೊಂದೆಡೆ ಸೊಸೈಟಿಗೆ ಜಮೀನು ಮಾರಿದ್ದ ರೈತರ ಮಕ್ಕಳು!


ಮಂಡ್ಯ ಕೃಷ್ಣ

ಈ ಲಟಾಪಟಿಯಲ್ಲಿ ದುಡ್ಡು ಮಾಡಿದ್ದು ರೌಡಿಗಳು ಮತ್ತು ಪೊಲೀಸರು. ರೌಡಿಯಾಗಲಿ ಪೊಲೀಸಾಗಲಿ ಇಲ್ಲಿ ಯಾರ ಪರ ನಿಂತರೂ ಲಕ್ಷಗಟ್ಟಲೇ ದುಡ್ಡು ಉದುರುತ್ತಿತ್ತು. ಲಗ್ಗೆರೆಯೊಂದರಲ್ಲೇ ಖೋಟಾ ದಲಿತ ನಾಯಕ ಮುನಿಭೈರ, ಸೊಸೈಟಿ ಭೈರಪ್ಪ ಲಕ್ಷ್ಮಿಕಾಂತರೆಡ್ಡಿ, ಫಕುದ್ದೀನ್, ಲಗ್ಗೆರೆಯ ಅಂದಾನಪ್ಪ, ಆತನ ಬಾಮೈದ ದಾಸರಹಳ್ಳಿ ಸಿಎಂಸಿ ಅಧ್ಯಕ್ಷ ತಿಮ್ಮನಂಜಯ್ಯ ಮುಂತಾದ ಖತರ್‌ನಾಕ್ ಲ್ಯಾಂಡ್ ಕ್ರಿಮಿಗಳು ಹುಟ್ಟಿಕೊಂಡು ಕಂಡಕಂಡ ಸೈಟುಗಳಿಗೆ ಕೈಹಾಕಿ ಕೋಟಿಗಟ್ಟಲೇ ದುಡ್ಡು ಕಿತ್ತಿದ್ದರು. ಒಂದೊಂದು ಸೈಟನ್ನೂ ಐದಾರು ಜನಕ್ಕೆ ರಿಜಿಸ್ಟರ್ ಮಾಡಿಸಿಕೊಟ್ಟಿದ್ದರು. ಇದರ ಹಿಂದೆ ರಾಜಕಾರಣಿಗಳಿದ್ದರು. ಪೊಲೀಸರಿದ್ದರು. ಈ ಹೊತ್ತಿಗಾಗಲೇ ಫೀಲ್ಡಿನಿಂದ ನಿವೃತ್ತನಾಗಿ ಹೋಗಿದ್ದ, ಸಾಕಷ್ಟು ವಯಸ್ಸೂ ಆಗಿದ್ದ ಮುಲಾಮನಿಗೆ ಲೇಟಿಟ್ ಮಂಜ ಕೊಲೆಯಾಗಿ ಹೋಗಿದ್ದೇ ಬಂಪರ್ ಲಾಟರಿ ಹೊಡೆದಂತಾಯಿತು. ಮಂಡ್ಯ ಕೃಷ್ಣ ತಂದುಕೊಡುತ್ತಿದ್ದ ಲ್ಯಾಂಡ್ ದೀಲುಗಳನ್ನೆಲ್ಲ ತನ್ನ ಹುಡುಗರನ್ನು ಬಿಟ್ಟು ಸೆಟಲ್ ಮಾಡಿಯೇ ಮುಲಾಮ ಕೋಟ್ಯಾಧೀಶನಾದ.

ಮುಲಾಮನ ಇಷ್ಟೆಲ್ಲ ಆಟಾಟೋಪಕ್ಕೆ ಕಾರಣರಾದವರೇ ಸುಂಕದಕಟ್ಟೆಯ ರಾಮ, ಲಕ್ಷ್ಮಣ ಮತ್ತು ಹನುಮಂತ ಎಂಬ ತ್ರಿವಳಿ ಸಹೋದರರು. ಬರುಬರುತ್ತ ಅಕ್ಕಪಕ್ಕದ ಹೆಗ್ಗನಹಳ್ಳಿ ಮೇನ್ ರೋಡ್, ಪೀಣ್ಯ ಶ್ರೀಗಂಧದ ಕಾವಲ್, ಪಿಳ್ಳಪ್ಪನ ಕಟ್ಟೆ ಏರಿಯಾಗಳಿಗೂ ಮುಲಾಮನ ಸಾಮ್ರಾಜ್ಯ ವಿಸ್ತರಿಸಿತು. ಅಲ್ಲಿನ ಇಸ್ಪೀಟ್ ಕ್ಲಬ್‌ಗಳಿಂದ ಮುಲಾಮನ ಹುಡುಗರಿಗೆ ರೆಗ್ಯೂಲರ್ ರೋಲ್‌ಕಾಲ್ ಶುರುವಾಯಿತು. ಆ ಪ್ರದೇಶದ ಫ್ಯಾಕ್ಟರಿಗಳ ಮಾಲೀಕರಿಂದ ಮಂತ್ಲಿ ಪಡೆದು ಅಲ್ಲಿನ ಕಾರ್ಮಿಕರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವುದಕ್ಕೂ ಮುಲಾಮನ ಗ್ಯಾಂಗ್ ಬಳಕೆಯಾಗುತ್ತಿತ್ತು. ಅಲ್ಲಿಗೆ ಬಲರಾಮನ ಹತ್ಯೆಯ ನಂತರ ಅಂಡರ್‌ವರ್ಲ್ಡ್ ಪಟ್ಟಿಯಿಂದಲೇ ಕಣ್ಮರೆಯಾಗಿ ಹೋಗಿದ್ದ ಮುಲಾಮ ಮತ್ತೆ active ಆದಂತಾಗಿತ್ತು. ಬಲರಾಮನ ಕೊಲೆಯ ನಂತರ ಆತನಿಗಿದ್ದ ಆದಾಯಗಳನ್ನೆಲ್ಲ ತನ್ನೆಡೆಗೆ ತಿರುಗಿಸಿಕೊಂಡಿದ್ದ ಮುಲಾಮ ಆರಂಭದಲ್ಲಿ ತನ್ನ ಸೆಕೆಂಡ್ ಇನ್ನಿಂಗ್ಸ್‌ನ ಒಂದಷ್ಟು ದಿನ ಲೇಟಿಟ್ ಮಂಜನೊಂದಿಗೆ 'ಫೀಲ್ಡು' ಮಾಡಿದ್ದನಾದರೂ ಬರುಬರುತ್ತ ಸಂಪೂರ್ಣವಾಗಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ಬಿಜಿಯಾಗಿಬಿಟ್ಟ. ತನ್ನ ಪೂರ್ವಾಶ್ರಮವಾಗಿದ್ದ ಜೂಗನಹಳ್ಳಿಯನ್ನೇ ತೊರೆದು ಲಗ್ಗೆರೆಯಲ್ಲೊಂದು ಬಂಗಲೆ ಕಟ್ಟಿಸಿಕೊಂಡ. ವಿಜಯನಗರದ ಕಾಂತ ಮತ್ತು ಬಾಂಬ್ ಕೃಷ್ಣಮೂರ್ತಿಯ ಜೊತೆ ಸೇರಿ ಜೆಡಿ(ಎಸ್) ಪಾರ್ಟಿ ಸೇರಿಕೊಂಡ. ದೇವೇಗೌಡರ ಜೊತೆ ನಿಂತು ಅವರೊಡನೆ ಒಂದೇ ಹಾರಕ್ಕೆ ಕೊರಳೊಡ್ಡಿದ್ದ ಫೋಟೋ ಕೂಡ ತೆಗೆಸಿಕೊಂಡ. ಕುಮಾರಸ್ವಾಮಿಗೂ ಆಪ್ತನಾದ.

ಅಲ್ಲಿಗೆ ಮುಲಾಮ ರೌಡಿಸಂ ಬಿಟ್ಟೇಬಿಟ್ಟ ಎಂದಿತ್ತು ಅಂಡರ್‌ವರ್ಲ್ಡ್. ಅಲ್ಲಿಯತನಕ ಮಚ್ಚನ ಜೊತೆಗಿನ ಆತನ ದೋಸ್ತಿ ಚೆನ್ನಾಗಿಯೇ ಇತ್ತು. ಮಚ್ಚನಿಗೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಮೇಲೆ ಬದ್ಧ ದುಷ್ಮನಿಯಾದರೆ, ಮುಲಾಮನಿಗೆ ಗೋಪಾಲಯ್ಯನ ಸಮೀಪದ ಸಂಬಂಧಿಯೂ ಆದ ಜೇಕೆಯ ಮೇಲೆ ನಿಗಿನಿಗಿವೈರ. ಶತ್ರುವಿನ ಶತ್ರು ಮಿತ್ರ ಎಂಬಂತೆ ಇಬ್ಬರೂ ಒಟ್ಟೊಟ್ಟಾಗಿಯೇ ಓಡಾಡಿದ್ದರು. ಕೆಲವೆಡೆ ಜಂಟಿಯಾಗಿಯೇ ಲ್ಯಾಂಡ್ ದೀಲುಗಳನ್ನು ಮಾಡಿದ್ದರು. ಆದರೆ ಲ್ಯಾಂಡು ಮತ್ತು ದುಡ್ಡು ಅದೆಂಥಾ ಗೆಳೆತನವನ್ನೂ ಹೊಸಕಿ ಹಾಕುತ್ತದೆಯೆಂಬ ಕಠೋರ ಸತ್ಯವನ್ನು ಮಾತ್ರ ಇಬ್ಬರೂ ಮರೆತೇಬಿಟ್ಟರು. ಕಾಮಾಕ್ಷಿಪಾಳ್ಯವನ್ನಾಕ್ರಮಿಸಿ ಸಣ್ಣಕ್ಕಿಬೈಲಿಗೆ ವಿಸ್ತರಿಸಿದ ಮಚ್ಚನ ಸಾಮ್ರಾಜ್ಯ ಕ್ರಮೇಣ ಸುಂಕದಕಟ್ಟೆಯನ್ನು ಹಾಯ್ದು ಮಾಗಡಿರಸ್ತೆಯ ಗೊಲ್ಲರಪಟ್ಟಿ ಮತ್ತು ಕಡಬಗೆರೆಗಳನ್ನೂ ವ್ಯಾಪಿಸಿಬಿಟ್ಟಿತ್ತು. ಹೇಳಿಕೇಳಿ ಅದು ಮುಲಾಮನ ಲ್ಯಾಂಡ್ ದೀಲುಗಳಿದ್ದ ಏರಿಯಾ.


ಬಲರಾಮ

ಒಂದೇ ಹುತ್ತದಲ್ಲಿ ಎರಡು ಹಾವುಗಳಿರಲು ಹೇಗೆ ತಾನೇ ಸಾಧ್ಯ?

ಕ್ರಮೇಣ ಮುಲಾಮನ ಆಪ್ತರಾದ ಗುಂಡಾ ಮತ್ತು ದಡಿಯಾ ಹರೀಶರು ಕೈಹಾಕಿದ್ದ ಆಸ್ತಿ ವಿವಾದವೊಂದಕ್ಕೆ ಮಚ್ಚನೂ ಕೈಯಿಟ್ಟ. ಇದು ಮೊದಲನೇ ಯಡವಟ್ಟಾದರೆ ಆದಕ್ಕೆ ಪ್ರತಿಯಾಗಿ ಮುಲಾಮ ಆತನಕ ಜಿದ್ದು ಸಾಧಿಸಿಕೊಂಡು ಬಂದಿದ್ದ ತನ್ನ ಹಳೇ ವೈರಿ ಜೇಕೆಯ ಜೊತೆ ಕೈಜೋಡಿಸಿಬಿಟ್ಟ. ಇದು ಎರಡನೇ ಯಡವಟ್ಟಾಗಿತ್ತು. ಆದಕ್ಕೆ ತಕ್ಕಂತೆ ಮಚ್ಚ ಮತ್ತೊಂದು ದುಸ್ಸಾಹಸಕ್ಕೆ ಕೈಯಿಟ್ಟ. ಅದೆಂದರೆ ಮುಲಾಮನ ಕಡುವೈರಿ ಕೊರಂಗು ಜೊತೆ ದೋಸ್ತಿ ಸಾಧಿಸಿದ್ದು!


ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ರೊಟ್ಟಿ ತಂತಾನೇ ಜಾರಿ ತುಪ್ಪಕ್ಕೆ ಬಿದ್ದಂತಾಗಿದ್ದೇ ಆವಾಗ!

(ಮುಂದುವರೆಯುತ್ತದೆ)

ಜೆಡಿಎಸ್‌ನ ರೌಡಿ ವಿಂಗ್!

ಮಣ್ಣಿನ ಮಕ್ಕಳ ಜೆಡಿಎಸ್ ಪಕ್ಷದ್ದು ಲಕ್ಕೋ ಲಕ್ಕು!


ಸ್ಲಂ ಮೋರ್ಛಾ, ಯುವ ಮೋರ್ಛಾ, ಮಹಿಳಾ ಘಟಕ, ನೇಕಾರರ ವಿಭಾಗ, ಎಸ್ಸಿಎಸ್ಟಿ ವಿಂಗ್, ಲೇಬರ್ ವಿಂಗ್, ಇತ್ಯಾದಿಗಳಿರುವಂತೆ ದೇವೇಗೌಡರ ಜೆಡಿಎಸ್‌ಗೆ ರೌಡಿ ವಿಂಗ್ ಕೂಡ ಹುಟ್ಟಿಕೊಂಡಿದೆ!



ಗೋಪಾಲಯ್ಯ

ಇದರ ಸ್ಥಾಪನೆಯಾಗಿದ್ದು ಕಳೆದ ಫೆಬ್ರವರಿ 18 ರಂದು ಭಾನುವಾರ ಕಾಮಾಕ್ಷಿಪಾಳ್ಯದ ಕೆರೆ ಮೈದಾನದಲ್ಲಿ. ಉದ್ಘಾಟಿಸಿದ್ದು ಸಾರಿಗೆ ಮಂತ್ರಿ ಚಲುವರಾಯಸ್ವಾಮಿಯಾದರೆ ನೆರೆದ ಹುಡಿಪುಡಿ ರೌಡಿಗಳೆಲ್ಲರಿಗೂ ಆಶೀರ್ವಚನ ಮಾಡಿದ್ದು ಮಾಗಡಿ ಶಾಸಕ ಬಾಲಕೃಷ್ಣ. ಇಂಥಾದ್ದೊಂದು ಅಭೂತಪೂರ್ವ ಸಮ್ಮೇಳನವನ್ನು ಹುಟ್ಟು ಹಾಕಿ ಡೈರೆಕ್ಷನ್ನು, ಪ್ರೊಡಕ್ಷನ್ನು ಎಲ್ಲವನ್ನು ಮಾಡಿದವನು ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಗೋಪಾಲಯ್ಯ.

ಮಚ್ಚನ ಹತ್ಯೆಯ ನಂತರ ತಲೆಗಂಟಿದ ರೌಡಿಪಟ್ಟವನ್ನು ಕಳಕೊಳ್ಳಲು ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಸಮಯ ಸಾಧಿಸಿಕೊಂಡೇ ಬಂದ. ತನ್ನನ್ನು ಡೀಕೇಶಿ ಬಂಟರು ಕೊಂದು ಹಾಕುತ್ತಾರೆಂದೇ ದೇವೇಗೌಡರನ್ನು ನಂಬಿಸಿದ್ದ. ಗೌಡರ ಡೀಕೆ ಮೇಲಿನ ವಿರೋಧದಿಂದಾಗಿ ಅದರ ಪ್ರಯೋಜನವಾಗಿದ್ದು ಮಾತ್ರ ಗೋಪಾಲಯ್ಯನಿಗೇ. ಬರುಬರುತ್ತ ಆತನ ರೌಡಿಚಾಲು ತಡ, ಗೊತ್ತಾಗಿದ್ದೇ ಕುಮಾರಣ್ಣ ಮತ್ತು ದೇವೇಗೌಡರು ಗೋಪಾಲಯ್ಯನನ್ನು ದೂರವಿಡಲಾರಂಭಿಸಿದ್ದಾರೆ. ಇಂಥಾ ಗ್ಯಾಪ್ ಅನ್ನು ತುಂಬಿಕೊಳ್ಳಲು ಗೋಪಾಲಯ್ಯ ಹಾಕಿದ ದಾಳವೇ ಭಾನುವಾರದ ಜೆಡಿಎಸ್ ಕಾರ್ಯಕರ್ತರ ಸಮಾವೇಶ.



ಪ್ರಕಾಶ್

ಅದಕ್ಕೆಂದು ಕಾಮಾಕ್ಷಿಪಾಳ್ಯದ ಕೆರೆ ಅಂಗಳವನ್ನೇ ಗೋಪಾಲಯ್ಯ ಸಿಂಗರಿಸಿದ್ದ. ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ದೇವೇಗೌಡರೇ ವೇದಿಕೆಯಲ್ಲಿರುತ್ತಾರೆಂದು ಆಹ್ವಾನ ಪತ್ರಿಕೆಯನ್ನೂ ಹಂಚಿದ್ದ. ಯಾರ ಸೌಭಾಗ್ಯವೋ ಏನೋ, ಅಲ್ಲಿ ಹಿಂಡುಗಟ್ಟಲೇ ರೌಡಿಗಳು ಜಮೆಯಾಗುತ್ತಾರೆಂಬ ವಾಸನೆ ಹಿಡಿದು ಬರುತ್ತೇನೆಂದಿದ್ದ ದೇವೇಗೌಡರು ಕೊನೇಗಳಿಗೆ ತನಕ ಕಾಯಿಸಿ 'ಚಕ್ಕರ್' ಹಾಕಿಬಿಟ್ಟರು. ಇನ್ನೇನೋ ಸಬೂಬು ಹೇಳಿ ಮುಖ್ಯಮಂತ್ರಿ ಕುಮಾರಸ್ವಾಮಿಯೂ ತಲೆ ಮರೆಸಿಕೊಂಡರು. ಕೊನೆಗೂ ವೇದಿಕೆಯನ್ನಲಂಕರಿಸಿದ್ದು ಸಾರಿಗೆ ಮಂತ್ರಿ ಚಲುವರಾಯಸ್ವಾಮಿ!

ದುರಂತವೆಂದರೆ ಸದರಿ ಜೆಡಿಎಸ್ ಸಮಾವೇಶದ ವೇದಿಕೆಯನ್ನು ಅಲಂಕರಿಸಿದ ಗೋಪಾಲಯ್ಯನ ಬಲಗೈ ಬಂಟ ದಯಾನಂದಮೂರ್ತಿ ಬಿಜೆಪಿ ಕಾರ್ಯಕರ್ತ ಪ್ರಕಾಶನ ಕೊಲೆ ಕೇಸಿನ ಪ್ರಮುಖ ಆರೋಪಿ. ವೇದಿಕೆಯಲ್ಲಿದ್ದ ಬಸವ ಮಚ್ಚನ ಕೊಲೆ ಆರೋಪಿ ಬಾಮೈದ ಧರಣಿ ಇತ್ತೀಚೆಗಷ್ಟೇ ಜೈಲಿಂದ ಹೊರಬಿದ್ದಿದ್ದ. ಮತ್ತೊಬ್ಬ ರೌಡಿ ಜೈರಾಮನೂ ವೇದಿಕೆಯಲ್ಲೇ ಠಳಾಯಿಸಿಕೊಂಡಿದ್ದ. ಇವರೆಲ್ಲರ ಶಿರೋಮಣಿಯಂತೆ ಕಂಗೊಳಿಸಿದ್ದು ಸ್ವತಃ ಗೋಪಾಲಯ್ಯ!

ಹಕೀಕತ್ತೆಂದರೆ ಈತನಕ ಕಾಮಾಕ್ಷಿಪಾಳ್ಯದಲ್ಲಿ ಜೆಡಿಎಸ್ ಬಾವುಟ ಹಾರಿಸಿ ಕಷ್ಟಕಾಲದಲ್ಲಿ ದೇವೇಗೌಡರ ಜೊತೆಗಿದ್ದ ನಿಷ್ಠಾವಂತ ಕಾರ್ಯಕರ್ತರಾದ ಮಿಲ್ಟ್ರಿ ಹನುಮಂತು, ಆರ್. ಪ್ರಕಾಶ್, ಚನ್ನನರಸಿಂಹಣ್ಣ, ಮುದ್ದಣ್ಣ, ಟಿ.ಎಂ. ರಂಗೇಗೌಡ ರಂಥವರ್‍ಯಾರೂ ಸಮಾವೇಶದಲ್ಲಿ ಅಡ್ರೆಸ್ಸಿಗಿರಲಿಲ್ಲ.

ಇದು ಜೆಡಿಎಸ್‌ನ ದುರಂತವೋ ಸೌಭಾಗ್ಯವೋ?

ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲಾರದ ಶ್ರೀರಾಮನ ಕಪಿ ಸೈನ್ಯ



ಭಾರತದ ಉದ್ದಗಲಕ್ಕೂ ದಶಲಕ್ಷ ರಾಮಮಂದಿರ ಕಟ್ಟುತ್ತವಂತಲ್ಲಾ. ಭಾರತದ ಅಸಂಖ್ಯಾತ ಹಳ್ಳಿಗಳ ಜನರಿಗಂತೂ ಮಲಗಲು ಗುಡಿಸಲುಗಳೂ ಇಲ್ಲ, ಸ್ಕೂಲುಗಳಂತೂ ಕೇಳುವುದೇ ಬೇಡ. ಒಂದು ಕೊಡ ನೀರಿಗಾಗಿ ಜನ ಮೈಲಿಗಟ್ಟಲೆ ನಡೆಯಬೇಕಿದೆ. ಎಷ್ಟೋ ಕಡೆ ಬರಗಾಲವಿದೆ. ಇವೆಲ್ಲಾ ಸಮಸ್ಯೆಗಳಿಂದ ಹೇಗೆ ಪಾರಾಗುವುದೆಂದು ತಲೆಯೊಳಗೆ ಮೆದುಳಿರುವ ನರಮನುಷ್ಯರೆಲ್ಲಾ ನರಳುತ್ತಿರುವಾಗ, ಈ ಕಪಿಸೈನ್ಯ ರಾಮಮಂದಿರ ಕಟ್ಟಿ ಭಜನೆ ಮಾಡಲು ಆಲೋಚಿಸುತ್ತಿದೆಯಂತಲ್ಲಾ. ಕೋಮು ಸೌಹಾರ್ದಿಗಳ ಪ್ರಕಾರ "ಈ ಆಲೋಚನೆ ಅವುಗಳ ಹುಟ್ಟಾಣಿಕೆಗೆ ಸಹಜವಾಗಿಯೇ ಇದೆ. ಎಷ್ಟೇ ಆಗಲಿ ಅವುಗಳು ಬದುಕಿದ್ದೇ ದೇವಸ್ಥಾನಗಳ ಪೂಜೆ, ನೈವೇದ್ಯ ಇತ್ಯಾದಿ ಬಿಟ್ಟಿ ಸವಲತ್ತುಗಳಿಂದ ಅಲ್ಲವೆ?" ಎಂದು ಕೇಳುತ್ತಾ ಚೆಡ್ಡಿಗಳ ಯಾಚಕರ ಉದ್ದನೆಯ ಪಟ್ಟಿಕೊಡುತ್ತಾರಲ್ಲ, ಥೂತ್ತೇರಿ!

* * * * * * * * * * * *

ಭಾರತದಲ್ಲಿ ಭೈರಪ್ಪನ ಸಂತತಿ ಬದುಕಿ ಬಂದ ಕತೆಯನ್ನು ಕೆದಕುವುದಾದರೆ ಅದೇ ಒಂದು ರೋಮಾಂಚಕಾರಿ ಕತೆಯಂತಾಗುತ್ತದಲ್ಲಾ. ಇಂದಿನ ಚೆಡ್ಡಿಗಳು ದಶಲಕ್ಷ ರಾಮಮಂದಿರ ಕಟ್ಟಲು ಯೋಚಿಸಿದಂತೆಯೇ ಅಂದು ಉಂಡು ಜಗಲಿ ಮೇಲೆ ಕುಳಿತಿದ್ದ ಪುರೋಹಿತನೊಬ್ಬ ನರಸಿಂಹನ ಕತೆ ಕಟ್ಟಿದ. ಈ ಕತೆ ಕೇಳಿ ದೇವರ ಬಗ್ಗೆ ಪ್ರಶ್ನಿಸಿದವನಿಗೆ ಯಾವ ಗತಿ ಬರುತ್ತದೋ ಎಂದು ಹೆದರಿದ ಶೂದ್ರ ಸಮೂಹ, ಪುರೋಹಿತಶಾಹಿಗಳು ಹೇಳಿದ ಜಾಗದಲ್ಲಿ ನರಸಿಂಹ ದೇವಸ್ಥಾನ ಕಟ್ಟಿಕೊಟ್ಟರು. ಇಡೀ ದೇಶದ ತುಂಬ ಎಣಿಸಿದರೆ ಅವೂ ದಶಲಕ್ಷವಾಗಬಹುದಂತಲ್ಲಾ. ಆ ದೇವಸ್ಥಾನಗಳಿಗೆ ತಲಾ ಮೂವರಂತೆ ಪೂಜಾರಿಗಳು, ಅವರಿಗೆ ತಲಾ ಹತ್ತು ಎಕರೆಯಂತೆ ಮುವ್ವತ್ತು ಎಕರೆ ಕೆರೆಹಿಂದೆ ಗದ್ದೆ, ಮನೆಯಲ್ಲಿ ನೇಗಿಲು ನೊಗ ಇಲ್ಲದಿದ್ದರೂ ಬತ್ತ, ಹೀಗೆ ತಿಂದುಂಡು ತೇಗಿದ ಚೆಡ್ಡಿಗಳ "ಸದರಿ ನರಸಿಂಹ ದೇವಸ್ಥಾನಗಳು ಶೂದ್ರ ಶಾಪದಿಂದ ಹಾಳುಬೀಳುತ್ತಿವೆ" ಎಂದು ಹೇಳಿ ಹೊಸರಾಮಮಂದಿರ ಕಟ್ಟಲು ಹೊರಟಿವೆಯಂತಲ್ಲಾ, ಥೂತ್ತೇರಿ!!

* * * * * * * * * * * *

ಚೆಡ್ಡಿಗಳು ಹೊಸ ರಾಮಮಂದಿರ ಕಟ್ಟುವ ಕಾರ್ಯಕ್ರಮದಿಂದ ಭಾರತದ ಬಡವರು ಇಟ್ಟಿಗೆಗೆ ದುಡ್ಡು ಕೊಡುತ್ತಾರೆ, ಗಾರೆಗೆ ದುಡ್ಡು ಕೊಡುತ್ತಾರೆ. ಎಲ್ಲಾ ಆದನಂತರ ರಾಮಪಾದುಕೆ, ಜ್ಯೋತಿ, ರಾಮಾಯಣ ಪಾರಾಯಣ ಇತ್ಯಾದಿಗಳಿಗೆ ಕಾಣಿಕೆ ಕಸಿಯುವ ಚೆಡ್ಡಿಗಳು ಮೊದಲು ತಮ್ಮ ನಿರ್ಗತಿಕತನವನ್ನು ನೀಗಿಕೊಂಡು, ಆನಂತರ ಪೂಜಾರಿಕೆ ಹಂಚಿಕೊಳ್ಳುವ ಅಪಾಯಿಂಟ್‌ಮೆಂಟ್ ಆರ್ಡರುಗಳಿಂದ ತಮ್ಮ ನಿರುದ್ಯೋಗವನ್ನು ನಿವಾರಿಸಿಕೊಳ್ಳಲಿವೆಯಂತಲ್ಲಾ, ಥೂತ್ತೇರಿ!

* * * * * * * * * * * *

"ಮತಾಂತರ ತಡೆಗೆ ರಾಮಮಂದಿರ ಮದ್ದೆ?" ಎಂದು ಒಂದೆರಡು ಬುದ್ಧಿ ಮಾಂದ್ಯ ಚೆಡ್ಡಿಗಳನ್ನು ಕೇಳಿದರೆ, "ಅದೇನೊ ನಮಗೆ ಗೊತ್ತಿಲ್ಲ. ಹೊಸ ರಾಮಮಂದಿರಗಳು ಧಾರ್ಮಿಕ ಪೊಲೀಸ್ ಠಾಣೆಗಳಿದ್ದಂತೆ. ಎಲ್ಲೆಲ್ಲಿ ಮತಾಂತರ ನಡೆಯುತ್ತದೊ ಅವೆಲ್ಲಾ ಸುದ್ದಿಗಳು ನಮ್ಮ ಶೂದ್ರ ಬಾತ್ಮೀದಾರರಿಂದ ತಿಳಿಯುತ್ತದೆ. ಆ ಕೂಡಲೇ ನಾವು ಚೆಡ್ಡಿ ಮತ್ತು ಲಾಠಿಯೊಂದಿಗೆ ದಾಳಿ ಮಾಡಿ ಮತಾಂತರ ಮಾಡುವವರನ್ನು ಓಡಿಸುತ್ತೇವೆ. ಮತಾಂತರಕ್ಕೆ ಒಳಗಾಗುವವರ ಮನೆ ಬಾಗಿಲಿಗೆ ಶ್ರೀರಾಮ ದೇವರ ಸ್ಟೀಕರ್ ಅಂಟಿಸಿ ಬರುತ್ತೇವೆ" ಎಂದರಲ್ಲ. "ಈ ಕಾರ್ಯಕ್ರಮ ಎಲ್ಲಾದರೂ ನಡೆದಿದೆಯೇ?" ಎಂದು ಕೇಳಿದರೆ, "ಬೇಕಾದಷ್ಟು ಕಡೆ ನಮ್ಮ ಈ ಕಾರ್ಯಾಚರಣೆ ನಡೆದಿದೆ. ಕೆಲವರ ಮನೆಬಾಗಿಲಿಗಂತೂ ಭಾರತಾಂಬೆಯ ಸ್ಟೀಕರ್ ಅಂಟಿಸಿ ಬಂದಿದ್ದೇವೆ. ಬೇಕಿದ್ದರೆ ಬನ್ನಿ ತೋರುತ್ತೇವೆ" ಎಂದು ನಂಟರು ಊಟಕ್ಕೆ ಕರೆದಂತೆ ಕರೆದರಲ್ಲಾ ಆ ಚೆಡ್ಡಿ ಚತುರರು, ಥೂತ್ತೇರಿ!!

* * * * * * * * * * * *

ಚೆಡ್ಡಿಗಳು ದಶಲಕ್ಷ ರಾಮಮಂದಿರಗಳ ಕಾರ್ಯಕ್ರಮದಿಂದಾಗಿ ಮುಂದಿನ ಹಲವು ಶತಮಾನಗಳು ಬೆವರಿಲ್ಲದಂತೆ ನೆರಳಲ್ಲಿ ಕುಳಿತು, ಭಜನೆ ಮಾಡುತ್ತ, ಪತ್ರೊಡೆ, ಪಾಯಸ, ಪಾನಕ, ಕೋಸಂಬರಿ ಭಾರಿಸಲು ನೀಲನಕ್ಷೆಯೊಂದಿಗೆ ತಯಾರಿ ನಡೆಸುತ್ತಿದ್ದಾರಂತಲ್ಲ, ಇಂತಹವರ ಬೆಳವಣಿಗೆಯ ಅಪಾಯವನ್ನರಿಯದ ನಮ್ಮ ಮೇಧಾವಿ ಮುಖ್ಯಮಂತ್ರಿ, ಸುವರ್ಣ ಗ್ರಾಮವೆಂಬ ಕಾರ್ಯಕ್ರಮ ತಂದು ಎಲ್ಲಾ ಅನುಕೂಲಗಳಿರುವ ಜೆಡಿಎಸ್ ಕಾರ್ಯಕರ್ತರ ಊರನ್ನೇ ಸುವರ್ಣ ಗ್ರಾಮವನ್ನಾಗಿ ಮಾಡಲಿದ್ದಾರಂತಲ್ಲಾ. "ಸುಸ್ಥಿತಿಯಲ್ಲಿರುವ ಊರುಗಳನ್ನೆ ಏಕೆ ಸುವರ್ಣಗ್ರಾಮದಡಿ ಸೇರಿಸುತ್ತೀರಿ?" ಎಂದು ಆ ಕಾರ್ಯಕರ್ತರು ಕೇಳಿದರೆ "ಇನ್ನೇನು ಮಾಡದು ಸಾರ್. ನಿರ್ಗತಿಕ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡರೆ ಅಲಾಟಾದ ಹಣವನ್ನೆಲ್ಲಾ ಖರ್ಚು ಮಾಡಲೇಬೇಕಾಗುತ್ತದೆ. ಇಲ್ಲಿ ಹಾಗಲ್ಲ, ಈಗಾಗಲೇ ಇರುವ ಚರಂಡಿಗೆ ಗಾರೆ ಮೆತ್ತಬಹುದು, ಹಾಳಾದ ಬೋರ್‌ವೆಲ್ ರಿಪೇರಿ ಮಾಡಿಸಬಹುದು, ಈಗಾಗಲೇ ಇರುವ ರಸ್ತೆಗೆ ಮೂರು ಮಂಕರಿ ಮಣ್ಣು ಎಸೆದು ಪೂರಾ ಬಿಲ್ ಮಾಡಿಕೊಳ್ಳಬಹುದು. ಸಾಧ್ಯವಾದರೆ ಟಾರು ಬಳಿದಿದ್ದೇವೆ ಎಂಬ ಬಿಲ್ಲನ್ನ ಮಾಡಿಕೊಳ್ಳಬಹುದು" ಎಂದು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರಂತಲ್ಲಾ, ಥೂತ್ತೇರಿ!!

* * * * * * * * * * * *

ಕಾವೇರಿ ನೀರಿನ ಗಲಾಟೆಯಲ್ಲಿ ಏನಾದರೂ ಮಾಡಿ ಹೀರೋ ಆಗಲು ಹೊರಟ ನಮ್ಮ ಮುದಿ ಮಾದೇಗೌಡರು, ಸತ್ಯಾಗ್ರಹಕ್ಕೆಂದು ಕುಳಿತಿದ್ದ ಜಾಗಕ್ಕೆ ಬಂದ ಅಂಬಿಯನ್ನು ಗದರಿ ಕಳಿಸಿದ ರೋಮಾಂಚಕಾರಿ ಸುದ್ದಿ ಬಂದಿದೆಯಲ್ಲಾ. ಯಾವಾಗಲೂ ಸಿಟ್ಟು ಮತ್ತು ಅಸಹನೆಯಿಂದ ಕುದಿಯುವಂತಹ ಮಾದೇಗೌಡರ ಎದುರು ಕುಂತು ಪ್ರಶ್ನೆ ಕೇಳುವುದಕ್ಕಿಂತಲೂ ಫೋನು ಮಾಡಿದರೆ ಹೇಗೆ ಅನ್ನಿಸಿ, ಧೈರ್ಯ ಮಾಡಿ ಫೋನ್ ಮಾಡಿದೆ. ರಿಂಗಾದ ಕೂಡಲೇ ತೆಗೆದುಕೊಂಡ ವ್ಯಕ್ತಿ "ಈಗತಾನೆ ಜೂಬಿಲಿ ಪಾರ್ಕಿನಿಂದ ಬಂದಿದಾರೆ. ಮಲಗೋ ಟೈಮು, ವತ್ತರಿಕೆ ಫೋನ್ ಮಾಡಿ" ಎಂದಿತು.

"ಗೌಡ್ರು ಕುಡಿದಿದ್ದಾರೇನಪ್ಪ?"

"ಇನ್ನೂ ಇಲ್ಲ, ನೀವ್ಯಾರು?"



"ನಾನು ಪತ್ರಕರ್ತ. ಇವತ್ತು ರಾತ್ರಿನೆ ಪತ್ರಿಕೆ ಪ್ರಿಂಟಿಗೋಗಬೇಕು. ಫೋನ್ ಕೊಡ್ತಿರಾ?"

"ಆಯ್ತು ತಗಳಿ, ಮಾತಾಡಿ."

"ಸಾರ್ ನಾನು ಯಾಹೂ, ಲಂಕೇಶ್ ಕಡೆಯವನು. ಒಂದೆರಡು ಪ್ರಶ್ನೆ....."

"ಜಲ್ದಿ ಕೇಳ್ರಿ, ಮನಿಕಬೇಕು."

"ಅಂಬರೀಷ್‌ಗೆ ಜೋರು ಮಾಡಿದ್ರಲ್ಲ ಯಾಕ್ ಸಾ?"

"ಜೋರು ಮಾಡದೆ ಇನ್ನೇನು ಹಿಡಕಂಡು ಮುದ್ದಾಡಬೇಕಾಗಿತ್ತ? ನಮ್ಮಷ್ಟಕ್ಕೆ ನಾವು ಕುಂತಿದ್ದಿವಿ. ಅಲ್ಲಿಗೆ ಇವನ ಸಿನುಮಾ ದಂಡು ದಾಳಿ ತಂದ್ರೆ ನನಿಗೆ ಸಿಟ್ಟು ಭರದಿಲವೆ?"

"ನೀವು ಅಂಬರೀಷ್ ಜೊತೆ ಸೇರಬೇಕಾಗಿತ್ತು."

"ಯಾಕೆ, ಅಂತದೇನು ನಮಿಗೆ ಬಂದಿರೊ ಗಾಚಾರ?"

"ಅಂಬರೀಷ್ ನಿಮಗಿಂತ ಶಕ್ತಿಶಾಲಿ ರಾಜಕಾರಣಿ. ಅವುನು ನಿಮ್ಮನ್ನ ಸೋಲಿಸಿದ ಮೇಲೆ ನೀವು ಮೇಲಕ್ಕೆ ಏಳಲೇಯಿಲ್ಲ."

"ನೀನ್ಯಾವನೊ ಅವುನಭಿಮಾನಿ ಅಂತ ಕಾಣ್ತದೆ. ಮದ್ಲು ಫೋನಿಡು."

"ಸಾರಿ ಸಾ, ಇನ್ನೊಂದು ಪ್ರಶ್ನೆ. ನೀವು ಎಸ್ಸೆಂ ಕೃಷ್ಣನ ಕಾಲದಲ್ಲಿ ಮಗಂಗೆ ಸೀಟು ಕೊಡ್ತರೆ ಅಂತ ರೈತ ಚಳುವಳಿನ ಕೃಷ್ಣನಿಗೆ ಬಿಟ್ಟುಕೊಟ್ಟಿದ್ರಂತೆ?"

"ಯಾವ ಸೂಳೆಮಗ ಅಂಗಂದೋನು, ಕರಕಂಡು ಬಾ ಇಲ್ಲಿ ಮುಕ್ಕುಗಿತಿನಿ?"

"ಥೂತ್ತೇರಿ!!!"

–ಯಾಹೂ



ಮುಂಗಾರು ಮಳೆ ಬಿತ್ತು ದುನಿಯಾ ಬದಲಾಯಿತು

ಬೇಸಿಗೆ ಶುರುವಾಗುವ ಮೊದಲೇ ಕನ್ನಡ ಸಿನಿಮಾ ಜಗತ್ತಿನಲ್ಲೊಂದು ಮುಂಗಾರು ಮಳೆ ಬಿದ್ದಿದೆ. ಚೇತೋಹಾರಿ ಮಳೆ ಸಿನಿಮಾದ ದುನಿಯಾವನ್ನೇ ಬದಲಾಯಿಸಿಬಿಟ್ಟಿದೆ.

ರಿಮೇಕ್ ವೀರರು, ನಿರುತ್ಸಾಹ ಹುಟ್ಟಿಸುತ್ತಿದ್ದ ನಟರು, ಪೆದ್ದು ನಿರ್ಮಾಪಕರೆಲ್ಲಾ ಬೆಚ್ಚಿ ಬೀಳುವಂತೆ ಪ್ರೇಕ್ಷಕ ಕನ್ನಡ ಸಿನಿಮಾಗಳನ್ನು ನೋಡಲು ಶುರುಮಾಡಿದ್ದಾನೆ, ಮೆಚ್ಚಿಕೊಳ್ಳುತ್ತಿದ್ದಾನೆ. ಜಡ್ಡುಗಟ್ಟಿಹೋಗಿದ್ದ ಕನ್ನಡ ಚಿತ್ರರಂಗದಲ್ಲಿ ಮಿಂಚಿನ ಸಂಚಲನ ಉಂಟಾಗಿದೆ. ಹಳಬರು ಹೆದರಿ ಕುಳಿತುಕೊಂಡಿದ್ದಾರೆ. ಹೊಸಬರು ಗರಿಬಿಚ್ಚಿ ಹಾರಾಡುತ್ತಿದ್ದಾರೆ. ಹೊಸಬರ ಆಗಮನದಿಂದ ಈಗ ಪರಿಸ್ಥಿತಿ ಹೇಗಿದೆ ಎಂದರೆ ಇನ್ನು ಮುಂದೆ ಈ ಹೊಸಬರೇ ಕನ್ನಡ ಚಿತ್ರರಂಗವನ್ನು ಆಳುವ ಸಾಧ್ಯತೆಯಿದೆ.

ಕನ್ನಡ ಚಿತ್ರರಂಗದಲ್ಲೊಂದು ಸೊಂಪಾದ ಮುಂಗಾರು ಮಳೆ ಬಿದ್ದಿದೆ. ರಿಮೇಕ್ ವೀರರು, ನಿರುತ್ಸಾಹ ಹುಟ್ಟಿಸುತ್ತಿದ್ದ ನಟರು, ಪೆದ್ದು ನಿರ್ಮಾಪಕರೆಲ್ಲಾ ಬೆಚ್ಚಿ ಬೀಳುವಂತೆ ಪ್ರೇಕ್ಷಕ ಕನ್ನಡ ಸಿನಿಮಾಗಳನ್ನು ನೋಡಲು ಶುರುಮಾಡಿದ್ದಾನೆ, ಮೆಚ್ಚಿಕೊಳ್ಳುತ್ತಿದ್ದಾನೆ. ದರ್ಶನ್‌ನ ಮಚ್ಚಿನಾಟ, ಉಪೇಂದ್ರನ ಮಂಗಾಟ ಮತ್ತು ವಿಷ್ಣುವರ್ಧನ್ ಮೀಸೆಯ ಆರ್ಭಟ, ರವಿಚಂದ್ರನ್ ಅವರ ಹೊಕ್ಕಳಿನಾಟ ನೋಡಿ ನೋಡಿ ಬೇಸತ್ತ ಪ್ರೇಕ್ಷಕ ಹೊಸ ಚಿಂತನೆಯ ಹುಡುಗರನ್ನು ಎರಡೂ ಕೈಗಳಿಂದ ಬಾಚಿ ತಬ್ಬಿಕೊಂಡಿದ್ದಾನೆ.

ಸದಾಶಿವ ಶೆಣೈ

ದರ್ಶನ್‌ನ ಮಚ್ಚಿನಾಟ, ಉಪೇಂದ್ರನ ಮಂಗಾಟ ಮತ್ತು ವಿಷ್ಣುವರ್ಧನ್ ಮೀಸೆಯ ಆರ್ಭಟ, ರವಿಚಂದ್ರನ್ ಅವರ ಹೊಕ್ಕಳಿನಾಟ ನೋಡಿ ನೋಡಿ ಬೇಸತ್ತ ಪ್ರೇಕ್ಷಕ ಹೊಸ ಚಿಂತನೆಯ ಹುಡುಗರನ್ನು ಎರಡೂ ಕೈಗಳಿಂದ ಬಾಚಿ ತಬ್ಬಿಕೊಂಡಿದ್ದಾನೆ. ಹಿರಿಯರು ತಮ್ಮ ಶೈಲಿಯನ್ನು ಬದಲಾಯಿಸಿಕೊಳ್ಳದಿದ್ದರೆ ಈ ಹೊಸಬರ ಪ್ರವಾಹದಲ್ಲಿ ಕೊಚ್ಚಿಹೋಗುವ ಎಲ್ಲ ಅಪಾಯವೂ ಇದೆ.

ತಂಪು ನೀಡಿದ ಮಳೆ

ಒಂದು 'ಮುಂಗಾರು ಮಳೆ' ಕನ್ನಡ ಚಿತ್ರರಂಗದ ಚಿತ್ರಣವನ್ನೇ ಬದಲಾಯಿಸಿಬಿಟ್ಟಿದೆ. ಮತ್ತೊಂದು ಹೆಸರಿಸಲೇಬೇಕಾದ ಚಿತ್ರ 'ಜೊತೆ ಜೊತೆಯಲಿ'. ಈಗ ಇವೆರಡು ಚಿತ್ರಗಳೊಂದಿಗೆ 'ದುನಿಯಾ' ಎಂಬ ಚಿತ್ರವೂ ಸೇರಿಕೊಂಡಿದೆ.

ಈ ಮೂರೂ ಚಿತ್ರ ತಂಡಗಳನ್ನೊಮ್ಮೆ ಗಮನಿಸಿ. ಇಲ್ಲಿ ನಿಮಗೆ ಮಧ್ಯ ವಯಸ್ಕರು ಯಾರೂ ಇಲ್ಲ; ಮೂರೂ ತಂಡಗಳಲ್ಲಿ ಯೌವ್ವನ ಮತ್ತು ಉತ್ಸಾಹ ತುಂಬಿ ತುಳುಕುತ್ತಿದೆ. ಹೊಸ ಚಿಂತನೆ, ಹೊಸ ಹುರುಪು ಮತ್ತು ಹೊಸ ಉತ್ಸಾಹದ ಫಲವಾಗಿ ಈ ಚಿತ್ರಗಳು ಬಾಕ್ಸಾಫೀಸಿನಲ್ಲಿ ಗೆದ್ದಿವೆ.

'ಮುಂಗಾರು ಮಳೆ' ಎಂಬ ಚಿತ್ರದಿಂದ ಕಾಮಿಡಿ ಟೈಂ ಗಣೇಶ್ ಎಂಬ ಮಾಮೂಲಿ ನಟನಿಗೆ ಸ್ಟಾರ್ ವ್ಯಾಲ್ಯು ಬಂದಿದೆ. ಇವತ್ತು ಬರೀ ಗಾಂಧಿನಗರ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿ ಜನ ಗಣೇಶನ ನಟನೆಯನ್ನು ಮೆಚ್ಚಿದ್ದಾರೆ. ವಾಸ್ತವವಾಗಿ ಗಣೇಶನನ್ನು ಸ್ಟಾರ್ ಮಾಡಿದ ಕೀರ್ತಿ ನಿರ್ದೇಶಕ ಯೋಗರಾಜ್ ಭಟ್‌ರದ್ದು. ಯಾವಾಗಲೂ ರಾಜ್‌ಕುಮಾರ್, ವಿಷ್ಣುವರ್ಧನ್‌ರ ಸುತ್ತಲೇ ಕಾಲ್‌ಶೀಟ್‌ಗಾಗಿ ಓಡಾಡುತ್ತಿದ್ದ ನಾರಾಯಣ್‌ರಂಥ ಹಿರಿಯ ನಿರ್ದೇಶಕರೇ ಈಗ ಗಣೇಶನಿಗೆ ಗಂಟುಬಿದ್ದಿದ್ದಾರೆಂದರೆ ನೀವೇ ಲೆಕ್ಕ ಹಾಕಿ.

ಯೋಗರಾಜ್‌ಭಟ್ ತಮ್ಮ ಮೂರನೆ ಪ್ರಯತ್ನದಲ್ಲಿ ಬಂಪರ್ ಲಾಟರಿ ಹೊಡೆದಿದ್ದಾರೆ. ಅವರು ಈ ಹಿಂದೆ ನಿರ್ದೇಶಿಸಿದ್ದ 'ಮಣಿ' ಮತ್ತು 'ರಂಗ ಎಸ್ಸೆಸ್ಸೆಲ್ಸಿ' ಚಿತ್ರಗಳು ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸದಿದ್ದರೂ ಆತನ ಪ್ರತಿಭೆಯ ತುಣುಕನ್ನು ತೋರಿಸಿದ್ದವು. ಯೋಗರಾಜನ ಯೋಗ ಈಗ 'ಮುಂಗಾರು ಮಳೆ'ಯಿಂದಾಗಿ ಸಂಪೂರ್ಣ ಬದಲಾಗಿಬಿಟ್ಟಿದೆ. ಈ ಚಿತ್ರಕ್ಕೆ ಯೋಗರಾಜ್ ಭಟ್ ಮೂರು ಲಕ್ಷ ಸಂಭಾವನೆ ಪಡೆದರೂ ಇದರ ರಿಮೇಕ್ ಹಕ್ಕಿಗಾಗಿ ಸುಮಾರು ಮೂವತ್ತೈದು ಲಕ್ಷ ಸಂಭಾವನೆ ಪಡೆದಿದ್ದಾರೆ. ಕನ್ನಡದ ನಿರ್ದೇಶಕನೊಬ್ಬ ಇಷ್ಟು ದೊಡ್ಡ ಮೊತ್ತದ ಸಂಭಾವನೆ ಪಡೆದಿರುವುದು ನಿಜಕ್ಕೂ ಸಂತೋಷದ ವಿಷಯ.



'ಮುಂಗಾರು ಮಳೆ'ಯ ಮತ್ತೊಬ್ಬ ಹೀರೋ ಅಂದರೆ ಛಾಯಾಗ್ರಾಹಕ ಕೃಷ್ಣ. ಇದು ಈತನ ಮೊದಲ ಚಿತ್ರ. ಮೊದಲ ಚಿತ್ರದಲ್ಲೇ ಈತ ಇಡೀ ಕರ್ನಾಟಕದ ಕಣ್ಮನ ಸೂರೆಗೊಂಡಿದ್ದಾನೆ. ಜೋಗ್ ಜಲಪಾತವನ್ನು ಈತನಕ ಸಾವಿರಾರು ಛಾಯಾಗ್ರಾಹಕರು ಚಿತ್ರೀಕರಿಸಿರಬಹುದು ಆದರೆ ಈತ ಚಿತ್ರೀಕರಿಸಿದ ರೀತಿಯನ್ನು ನೋಡಿದರೆ ಮೈ ಜುಮ್ಮೆನ್ನಿಸುತ್ತದೆ. ಅದರ ರೋಮಾಂಚನವನ್ನು ಅನುಭವಿಸಬೇಕಾದರೆ ನೀವೊಮ್ಮೆ ಥಿಯೇಟರಿಗೇ ಹೋಗಿ ಅದನ್ನು ನೋಡಿಬರಬೇಕು.

'ಮುಂಗಾರು ಮಳೆ'ಯ ಯಶಸ್ಸಿಗೆ ಮತ್ತೊಂದು ಕಾರಣ ಅದರ ನೈಜ ಚಿತ್ರಕತೆ. ಅದನ್ನೂ ಪ್ರಥಮ ಬಾರಿಗೆ ಬರೆದವರು ಪ್ರೀತಮ್ ಎಂಬ ಹೊಸಬರು ಎಂದರೆ ನಿಮಗೆ ಅಚ್ಚರಿ ಆಗಬಹುದು. ನಿರ್ದೇಶಕ ಯೋಗರಾಜ್ ಭಟ್, ಕತೆಗಾರ ಪ್ರೀತಮ್, ಛಾಯಾಗ್ರಾಹಕ ಕೃಷ್ಣ ಈ ಮೂವರಿಗೆ ಸಾಥ್ ನೀಡಿದವರು ಸದ್ಯಕ್ಕೆ ಗಾಂಧಿನಗರದಲ್ಲಿ ಲಕ್ಕಿ ಸಂಗೀತ ನಿರ್ದೇಶಕ ಎಂದು ಪರಿಗಣಿಸಲ್ಪಟ್ಟಿರುವ ಮನೋಮೂರ್ತಿ. ಇಲ್ಲಿ ಸಾಹಿತಿ ಜಯಂತ್ ಕಾಯ್ಕಿಣಿಯವರ ಗೀತರಚನೆಯನ್ನೂ ಸ್ಮರಿಸಲೇಬೇಕು. ಸಿನಿಮಾದವರ ಗೀತೆಗಳೆಂದರೆ ಮರ-ಗಿಡ, ಚಂದ್ರನ ಸುತ್ತಲೇ ಸುತ್ತುತ್ತಿರುತ್ತವೆ. ಆದರೆ ಸೂಕ್ಷ್ಮ ಮನಸ್ಸಿನ ಕಾಯ್ಕಿಣಿ ಬರೆದ 'ಅನಿಸುತಿದೆ ಏಕೋ ಇಂದು...' ಹಾಡು ಕೇಳುಗರ ಹೃದಯವನ್ನು ತಾಕಿ ಇವತ್ತು ತುಂಬಾ ಜನಪ್ರಿಯವಾಗಿದೆ. ಇವರೆಲ್ಲರಿಗೆ ಅವಕಾಶ ನೀಡಿ ಒಂದು ಸೃಜನಶೀಲ ಚಿತ್ರ ಬರುವಂತೆ ಸಹಕರಿಸಿದ್ದು ನಿರ್ಮಾಪಕ ಇ. ಕೃಷ್ಣಪ್ಪ, ಅಂದಹಾಗೆ ಇವರೂ ಗಾಂಧಿನಗರಕ್ಕೆ ಹೊಸಬರಾಗಿದ್ದು ಇದು ಅವರ ಮೊದಲನೇ ಚಿತ್ರ!

ಇದಕ್ಕೇ ಅಂದದ್ದು; ಹೊಸಬರ ಆಗಮನದಿಂದ ಒಂದು ಹೊಸ ಸಂಚಲನ ಉಂಟಾಗಿದೆ ಎಂದು.

ದಿನಕರಾ ಶುಭಕರಾ

ಹಾಗೆ ನೋಡಿದರೆ ಹೊಸಬರ ಆಗಮನಕ್ಕೆ ಒಂದು ಶುಭಕರ ಮುನ್ನುಡಿ ಬರೆದದ್ದು ದರ್ಶನ್ ಸಹೋದರ ದಿನಕರ್. ಆತ ನಿರ್ದೇಶನಕ್ಕೆ ಇಳಿದಾಗ ಸಹೋದರ ದರ್ಶನ್ ನೆರಳಿನಲ್ಲಿ ಈತ ಬರುತ್ತಿದ್ದಾನೆ ಎಂದೇ ಗಾಂಧಿನಗರ ಕುಹಕವಾಡಿತ್ತು. ಆದರೆ ಲಾಂಗು-ಮಚ್ಚು ಹಿಡಿಯುವ ದರ್ಶನ್ ಮತ್ತು ಪ್ರೀತಿಯ ಎಳೆಯನ್ನು ನವಿರಾಗಿ ಬಿಡಿಸಿಟ್ಟ ದಿನಕರ್ ನಡುವೆ ಆಕಾಶ ಮತ್ತು ಭೂಮಿಯಷ್ಟು ವ್ಯತ್ಯಾಸ. ಇದನ್ನು ಕಂಡ ನಂತರ "ಎಲ್ಲಿಯ ದಿನಕರ್? ಎಲ್ಲಿಯ ದರ್ಶನ್!" ಎಂದು ಅಂದು ಕುಹಕವಾಡಿದ ಗಾಂಧಿನಗರಿಗರೆ ಇವತ್ತು ಬಹುಪರಾಕ್ ಹೇಳುತ್ತಿದ್ದಾರೆ.

'ಜೊತೆ ಜೊತೆಯಲಿ' ಚಿತ್ರ ಅಂತಹ ಅದ್ಭೂರಿ ಚಿತ್ರವೇನೂ ಅಲ್ಲ. 'ನೆನಪಿರಲಿ' ಖ್ಯಾತಿಯ ಪ್ರೇಮ್ ಎಂಬ ಮಾಮೂಲಿ ನಟನನ್ನು ರಮ್ಯಾ ಜೊತೆ ಸೇರಿಸಿ ದಿನಕರ್ ಎಂಬ ಯುವ ನಿರ್ದೇಶಕ ಪ್ರೀತಿ-ಪ್ರೇಮದ ಒಂದು ಹೊಸ ಹವಾವನ್ನು ಕನ್ನಡ ಚಿತ್ರರಂಗದಲ್ಲಿ ತೇಲಿಸಿಬಿಟ್ಟಿದ್ದಾರೆ. ನಿಜ ಹೇಳಬೇಕೆಂದರೆ ದರ್ಶನ್ ನಟಿಸಿದ ಚಿತ್ರಕ್ಕಿಂತಲೂ ಹತ್ತು ಪಾಲು ಹೆಚ್ಚು ಲಾಭವನ್ನು ಈ ಚಿತ್ರ ಅವರಿಗೆ ತಂದು ಕೊಡುತ್ತಿದೆ. ಇಲ್ಲಿ ಕೂಡ ಅಷ್ಟೇ, ಇದರಲ್ಲೂ ಪ್ರೀತಿ-ಪ್ರೇಮದ ಹಳೆಯ ಗೊಡ್ಡು ಕತೆ ಇದ್ದರೂ ಅದನ್ನು ಹೊಸ ಶೈಲಿಯಲ್ಲಿ ನವಿರಾಗಿ ನಿರೂಪಿಸಿದ್ದರಿಂದ ಚಿತ್ರ ಗೆದ್ದಿತು.

ದಿನಕರ್ ಕಲ್ಪನೆಗೆ ಸರಿಯಾಗಿ ಜೀವಕಳೆ ತಂದುಕೊಟ್ಟ ಪ್ರೇಮ್ ಇಂದು ಕನ್ನಡದ ಶಾರುಖ್‌ಖಾನ್ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದಾನೆ. ಈತನಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ ಎಂದು ಗೊತ್ತಿದ್ದರೂ ಕಾಲೇಜು ಹುಡುಗಿಯರು ಈತನಿಗಾಗಿ ಮುಗಿಬೀಳುತ್ತಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಇತ್ತೀಚಿನ ದಿನಗಳಲ್ಲಿ ಇವನಷ್ಟು ಸುಂದರ ನಟ ಕಾಣಿಸಿದ್ದೇ ಇಲ್ಲ. ಇಲ್ಲೊಂದು ಮೆಚ್ಚಬೇಕಾದ ವಿಷಯವೆಂದರೆ ಈತ ಬರೀ ಸುಂದರ ಮಾತ್ರವಲ್ಲ, ಬುದ್ಧಿವಂತ ಕೂಡ. 'ಜೊತೆ ಜೊತೆಯಲಿ' ಹಿಟ್ ಆದ ತಕ್ಷಣ ಒಂದು ಕೈಲಿ ಹಣದ ಥೈಲಿ, ಮತ್ತೊಂದು ಕೈಲಿ ಕ್ಯಾಸೆಟ್ ಹಿಡಿದುಕೊಂಡು ಬಂದ ನಿರ್ಮಾಪಕರಿಗೆಲ್ಲಾ "ನಾನು ರಿಮೇಕ್ ಚಿತ್ರಗಳಲ್ಲಿ ನಟಿಸೋಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಅವರನ್ನೆಲ್ಲ ತಿರಸ್ಕರಿಸಿದ್ದಾನೆ.

'ಜೊತೆ ಜೊತೆಯಲಿ' ಚಿತ್ರದ ಯಶಸ್ಸಿಗೆ ಮತ್ತೊಬ್ಬ ಯುವ ತಂತ್ರಜ್ಞ ಮುಖ್ಯ ಕಾರಣ. ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಗರಡಿಯಲ್ಲಿ ಪಳಗಿದ ಸಂಗೀತ ನಿರ್ದೇಶಕ ಹರಿಕೃಷ್ಣ ತನ್ನ ಚೊಚ್ಚಲ ಸಂಗೀತ ನಿರ್ದೇಶನದಲ್ಲೇ ತನ್ನ ಛಾಪನ್ನು ಮೂಡಿಸಿ ಸ್ಟಾರ್ ಆಗಿದ್ದಾರೆ. ಇಂದು ಹಂಸಲೇಖಾ ಮತ್ತು ಗುರುಕಿರಣ್‌ಗಿಂತ ಈ ಯುವ ಸಂಗೀತ ನಿರ್ದೇಶಕನಿಗೆ ಗಾಂಧಿನಗರದಲ್ಲಿ ಎಲ್ಲಿಲ್ಲದ ಡಿಮ್ಯಾಂಡು!

'ಮುಂಗಾರುಮಳೆ' ಎಷ್ಟು ಯಶಸ್ವಿಯಾಗಿದೆ ಎಂದರೆ ಅದು 'ಜೋಗಿ' ಚಿತ್ರದ ಗಳಿಕೆಯನ್ನೂ ಮೀರಿ ಕನ್ನಡ ಚಿತ್ರರಂಗದಲ್ಲೇ ಹೊಸ ದಾಖಲೆಯನ್ನು ಸೃಷ್ಟಿಸಲಿದೆ. 'ಜೊತೆ ಜೊತೆಯಲಿ' ಇಪ್ಪತ್ತೈದು ವಾರಗಳ ಪ್ರದರ್ಶನ ಕಾಣುವುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿ ಇನ್ನೊಂದು ವಿಶೇಷವೆಂದರೆ ಈ ಎರಡೂ ಚಿತ್ರಗಳ ನಿರ್ಮಾಪಕರೂ ಹೊಸಬರೆ. ಅಕಸ್ಮಾತ್ ಹಳೆ ನಿರ್ಮಾಪಕರಾಗಿದ್ದಿದ್ದರೆ, ಈ ಹೊಸ ಚಿಂತನೆಯ ನಿರ್ದೇಶಕ, ಛಾಯಾಗ್ರಾಹಕ, ಸಂಗೀತ ನಿರ್ದೇಶಕ, ನಟ, ಎಲ್ಲರನ್ನೂ ತಿರಸ್ಕರಿಸಿ ಮಾಮೂಲಿ

ಸೂರಿ, ಸತ್ಯ ಹೆಗ್ಡೆ ಹಾಗೂ ನಿರ್ಮಾಪಕ







ಯೋಗರಾಜ್ ಭಟ್ ಛಾಯಾಗ್ರಾಹಕ ಕೃಷ್ಣ ನಿರ್ಮಾಪಕ ಕೃಷ್ಣಪ್ಪ







ವ ಚಿತ್ರಗಳನ್ನೋ ಅಥವಾ ರಿಮೇಕ್ ಾವನ್ನೋ ಮಾಡಿರುತ್ತಿದ್ದರೋ ಏನೋ?

ಬದಲ್‌ಗಯಾ ದುನಿಯಾ

ಈಗ 'ಮಳೆ' 'ಜೊತೆ ಜೊತೆ' 'ದುನಿಯಾ' ಕೊಂದಿದೆ. ಈ ಚಿತ್ರದಲ್ಲೂ ಹೊಸಬರು ಯಶಸ್ಸಿನ ಟವನ್ನು ಹಾರಿಸಿದ್ದಾರೆ. ಇಲ್ಲೂ ಅಷ್ಟೇ. ನಿರ್ದೇಶಕ ನಟ ಪ್ರೇಮ್ ಗರಡಿಯಲ್ಲಿ ಪಳಗಿದ ಸೂರಿಗೆ ಮೊದಲ ನಿರ್ದೇಶನದ ಚಿತ್ರ. ನಾಯಕ ವಿಜಯ್‌ಗೆ ಹೀರೋ ಆಗಿ ಇದು ಮೊದಲ ಅವಕಾಶ. ಆಟಗಾರರು ಮೊದಲ ಅವಕಾಶದಲ್ಲಿ ಸೆಂಚುರಿ ಸಿ ಹೇಗೆ ಅಭಿಮಾನಿಗಳ ಪ್ರೀತಿಗೆ ಪಾತ್ರರಾಗು ೋ ಅದೇ ರೀತಿ ಇವರಿಬ್ಬರೂ ಮೊದಲ ಪ್ರಯತ್ನ ಅದ್ಭುತ ರಸದೌತಣ ನೀಡಿ ಎಲ್ಲರ ಮೆಚ್ಚುಗೆಗೆ ರಾಗಿದ್ದಾರೆ.

ಈ ಚಿತ್ರದಲ್ಲಿ ಕೂಡಾ ಅಷ್ಟೇ ಯುವ ಛಾಯಾ ಕ ಸತ್ಯ ಹೆಗ್ಡೆ ಎಲ್ಲರೂ ಚಕಿತರಾಗುವ ರೀತಿಯಲ್ಲಿ ಕೈಚಳಕ ಮತ್ತು ಕೌಶಲ್ಯವನ್ನು ಮೆರೆದಿದ್ದಾರೆ. ಮತ್ತು ತಮಿಳಿನ ಛಾಯಾಗ್ರಾಹಕರೂ ರಗಾಗುವಂತೆ ಈ ಕನ್ನಡದ ಹುಡುಗ ಕೆಲಸ ದಿರುವುದು ಹೆಮ್ಮೆಯೇ ಸರಿ.

ಆದರೆ ಈ ಚಿತ್ರದ ನಿಜವಾದ ಹೈಲೈಟ್ ಎಂದರೆ ಕ ವಿಜಯ್. ಆತನ ಮ್ಯಾನರಿಸಂ, ಬಾಡಿ ಗ್ವೇಜ್, ಕಣ್ನೋಟ.... ಎಲ್ಲವೂ ಸೂಪರ್ಬ್. ್ಸ್‌ಗಳು ನೋಡಿದರೆ ನಿಜಕ್ಕೂ ಈತ ಒಬ್ಬ ಪವರ್ ಸ್ಟರ್‌ನಂತೆ ಕಾಣಿಸುತ್ತಾನೆ. ಈತ ಒಳ್ಳೆ ಕತೆಗಳನ್ನು ಮಾಡಿಕೊಂಡರೆ ಹಲವಾರು ಯಶಸ್ವಿ ಚಿತ್ರಗಳನ್ನು ವ ಭರವಸೆ ತೋರಿಸುತ್ತಾನೆ.

ಈ ಚಿತ್ರಕ್ಕೆ ಸಂಭಾಷಣೆ ಬರೆದಿರುವ ಮಳವಳ್ಳಿ ಕೃಷ್ಣ ಚಿತ್ರವೊಂದರ ಗ್ಲಾಮರ್ ಅನ್ನೇ ಾಯಿಸಿಬಿಟ್ಟಿದ್ದಾರೆ. ಚಿತ್ರಮಂದಿರಗಳಲ್ಲಿ ಸಂಭಾಷಣೆ ನ್ನು ಕೇಳಿ ಜನ ಚಪ್ಪಾಳೆ ತಟ್ಟುತ್ತಿದ್ದಾರೆ. ಕನ್ನಡದ ೋಶದಲ್ಲಿ ಇಷ್ಟೊಂದು ಹೊಸ ಶಬ್ದಗಳು ಇವೆಯೇ ು ಅಚ್ಚರಿ ಪಡುವಷ್ಟು ಹೊಸ ಹೊಸ ಶೈಲಿಯ ಾಷಣೆಗಳನ್ನು ಈ ಹುಡುಗರು ಸೃಷ್ಟಿಸಿದ್ದಾರೆ.

'ದುನಿಯಾ' ಚಿತ್ರ 'ಜೋಗಿ' ಮತ್ತು 'ಓಂ' ಚಿತ್ರಗಳ ನ್ನೊಂದು ಆಯಾಮ ಅನ್ನಿಸಿದರೂ, ಈ ಚಿತ್ರ ಡಿದಾಗ ಒಂದು ಹೊಸ ಅನುಭವವಂತೂ ತ್ತದೆ. ಈ ಮೂರು ಚಿತ್ರಗಳನ್ನು ಅಕ್ಕಪಕ್ಕಕ್ಕಿಟ್ಟು ಡಿದಾಗ ನಮ್ಮ ಕನ್ನಡದ ಯುವಕರಲ್ಲಿ ಇಷ್ಟೊಂದು ಿ ಇದೆಯಲ್ಲ ಎಂಬ ಅಚ್ಚರಿಯೊಂದಿಗೆ ಹೆಮ್ಮೆ ಆಗುತ್ತದೆ.

ಬಡತನವೇ ಬಂಡವಾಳ

ಈ ಎಲ್ಲ ಯುವಕರ ಸ್ಥೈರ್ಯ ಮತ್ತು ನನ್ನು ಮೆಚ್ಚಲೇಬೇಕು. ೂ ಕನಸುಗಳನ್ನು ೊಂಡು ಗಾಂಧಿನಗರಕ್ಕೆ ಟ್ಟವರೇ ಏನಃ ಇವರಿಗೆ ದ ಗಾಡ್‌ಫಾದರ್‌ಗಳ ರಲಿಲ್ಲ, ಗಾಡ್‌ಫಾದರ್ ಯಾಕೆ ಸ್ವತಃ ಗಾಡ್ ಇವರ ಜೊತೆಯಿರಲಿಲ್ಲ.

ನೆನಪಿರಲಿ' ಖ್ಯಾತಿಯ ಪ್ರೇಮ್ ಅತ್ಯಂತ ಬಡ ುಂಬದಿಂದ ಬಂದ ಒಬ್ಬ ಸಾಮಾನ್ಯ ಹುಡುಗ. ೂರಿನಲ್ಲಿ ಈತ ತನ್ನ ಹೆತ್ತವರ ಜೊತೆ ಜಂಕ್ ನ ಸಿಂಗಲ್ ರೂಂ ಮನೆಯಲ್ಲಿ ಮೊನ್ನೆ ಮೊನ್ನೆ ವಾಸ ಮಾಡುತ್ತಿದ್ದ. ಇತ್ತೀಚಿನವರೆಗೂ ಈತ ಿಂಗ್ ಸ್ಥಳಕ್ಕೆ ಬಸ್ಸಿನಲ್ಲೇ ಪ್ರಯಾಣಿಸುತ್ತಿದ್ದ. ಈಗ ಚಿತ್ರವೊಂದಕ್ಕೆ ಇಪ್ಪತ್ತು ಲಕ್ಷ ಸಂಭಾವನೆ ಪಡೆಯುವ ಆಗಿ ಸಮ್ಮೆದುರು ಬೆಳೆದು ನಿಂತಿದ್ದಾನೆ, ಜೊತೆಗೀಗ ಕಾರೊಂದರ ಒಡೆಯನೂ ಆಗಿದ್ದಾನೆ. ಇದು ದ್ದು ಆತನ ಶ್ರಮದಿಂದ ಎಂಬುದರಲ್ಲಿ ಎರಡು ಲ್ಲ.

ಮುಂಗಾರು ಮಳೆ'ಯ ಗಣೇಶ್ ಕೂಡ ಪಕ್ಕದ ಂಗಲದಲ್ಲಿ ಇದೇ ತರ ಪುಟ್ಟದೊಂದು ಮನೆ ದ್ದು ಹೀರೋ ಆಗುವ ಕನಸು ಕಾಣುತ್ತಿದ್ದ. ಂಗಲದಿಂದ ಕನಸುಗಳ ಸಾಮ್ರಾಜ್ಯದ ರಾಜಧಾನಿ ನಗರಕ್ಕೆ, ಅದೆಷ್ಟೋ ಬಾರಿ ಈತ ನಡೆದುಕೊಂಡೇ ಉದಾಹರಣೆಗಳಿವೆ. ಅಷ್ಟೊಂದು ಬಡತನದ ಈತನದ್ದು, ಕೊನೆಗೆ ಹೊಟ್ಟೆಪಾಡಿಗಾಗಿ ಕೆಲವು ಳಲ್ಲಿ ಹಾಸ್ಯನಟನಾಗಿ, ಮತ್ತೆ ಕೆಲವು ಚಿತ್ರಗಳಲ್ಲಿ ೋಗಳಿಂದ ಒದೆಸಿಕೊಳ್ಳುವ ಸೈಡ್ ನಟನಾಗಿ ಹಣ ಸಂಪಾದಿಸುತ್ತಿದ್ದ, ಅದೂ ಗಿಟ್ಟದಿದ್ದಾಗ ್ಯಾಗಳಲ್ಲಿ ಮಿಮಿಕ್ರಿ ಮಾಡುತ್ತಾ ಜೀವನ ಸಾಗಿಸು





ಜೊತೆಜೊತೆಯಲಿ-ಪ್ರೇಮ್ ಜೊತೆ ರಮ್ಯಾ

ಲಾಸ್ ಆಗಲ್ಲ ಯಾಕೆಂದ್ರೆ.....!

ಒಂದುಕಾಲು ಕೋಟಿ ರೂ. ಖರ್ಚಿನ 'ಜೊತೆ ಜೊತೆಯಲಿ' ಇದುವರೆಗೂ 10 ಕೋಟಿ ರೂ. ದುಡಿದಿದೆ. ಈಗ ತಾನೇ ಐವತ್ತು ದಿನ ಪೂರೈಸಿರುವ 'ಮುಂಗಾರು ಮಳೆ' 15 ಕೋಟಿಯ ಲಾಭದ ಬೆಳೆ ತೆಗೆದಿದೆ. 'ದುನಿಯಾ' ಕೂಡ ಈಗಾಗಲೇ ಲಾಭದಲ್ಲಿ ಮಾರಾಟವಾಗಿದೆ ಎಂದರೆ ನಂಬುತ್ತೀರಾ?

ನೀವು ನಂಬಲೇಬೇಕು. ಇದು ನಿಜ.

ಒಂದು ಖುಷಿಯ ವಿಚಾರ ಈ ಮೂರು ಚಿತ್ರಗಳ ನಿರ್ಮಾಪಕರೆಲ್ಲ ಹೊಸಬರು. 'ಜೊತೆಜೊತೆಯಲಿ' ಮೀನಾ ತೂಗುದೀಪರವರ ಮೊದಲ ನಿರ್ಮಾಣದ ಚಿತ್ರ. ಅಚ್ಚುಕಟ್ಟಾದ ಕತೆ, ಹಾಡು, ಹಿಡಿತ ಮೀರದ ಖರ್ಚು, ಆತ್ಮವಿಶ್ವಾಸವೇ ಇವರ ಪ್ಲಸ್ ಪಾಯಿಂಟ್ ಆಗಿದ್ದವು.



ಇನ್ನು 'ಮುಂಗಾರು ಮಳೆ' ನಿರ್ಮಾಪಕ ಇ. ಕೃಷ್ಣಪ್ಪರಿಗೂ ಇದೇ ಮೊದಲ ಸಾಹಸ. ಒಂದು ಒಳ್ಳೆ ಕತೆ ಹುಡುಕಿ, ಅಭಿರುಚಿ ಇರುವ ನಿರ್ದೇಶಕನನ್ನು ಆರಿಸಿ, ಪ್ರತಿಭಾವಂತ ಕಲಾವಿದರ ಟೀಂ ಕಟ್ಟಿಕೊಂಡು ಸಿನಿಮಾ ಮಾಡುವ ಖಯಾಲಿ ಇದೆಯಲ್ಲಾ, ಅಂತಾ ನಿರ್ಮಾಪಕರಿಗೆ ಹ್ಯಾಟ್ಸಾಫ್ ಹೇಳಲೇಬೇಕು.

'ದುನಿಯಾ' ಕೂಡ ಇಂತದ್ದೇ.

ನಿರ್ಮಾಪಕ ಟಿ.ಪಿ. ಸಿದ್ಧರಾಜು ವೃತ್ತಿಯಲ್ಲಿ ವಕೀಲರು. ಎಲ್ಲಾ ಹೊಸಬರನ್ನೇ ಹಾಕಿಕೊಂಡು ಒಂದೂಕಾಲು ಕೋಟಿ ರೂಪಾಯಿ ಬಂಡವಾಳ ಹಾಕಿ ಚಿತ್ರ ನಿರ್ಮಿಸಿದ ಸಿದ್ಧರಾಜು ಈಗಾಗಲೇ ಸೇಫ್ ಆಗಿದ್ದಾರೆ.

ಒಳ್ಳೇ ಸಿನಿಮಾ ಕೊಟ್ಟರೆ ಜನ ಯಾಕೆ ಬೇಡ ಅಂತಾರೆ ನೀವೇ ಹೇಳಿ?

ತೆಲುಗು, ತಮಿಳು, ಮಲೆಯಾಳಂ, ಹಿಂದಿಯಲ್ಲಿ ಹಿಟ್ ಆದ ಸಿನಿಮಾಗಳ ರೀಮೇಕ್ ಹಕ್ಕು ಪಡೆಯಲು ಓಡಾಡುತ್ತಾ ಕೊನೆಗೆ ಸೋಲುವ ಸಿನಿಮಾ ತೆಗೆಯುತ್ತಿರುವ ಹಳೇ ನಿರ್ಮಾಪಕರು ಇದನ್ನೆಲ್ಲಾ ಈಗಲಾದರೂ ಗಮನಿಸಲಿ.

ತ್ತಿದ್ದ. ಇಂಥ ಸಂದರ್ಭದಲ್ಲಿ ಆತನಿಗೆ ಸ್ವಲ್ಪ ನೆಮ್ಮದಿ ನೀಡಿದ್ದು ಉದಯ ಟೀವಿಯ ಕಾಮಿಡಿ ಟೈಂ ಕಾರ್ಯಕ್ರಮದಿಂದ ಬರುತ್ತಿದ್ದ ಹಣ ಮತ್ತು ಜನಪ್ರಿಯತೆ.

'ದುನಿಯಾ' ಚಿತ್ರದ ನಾಯಕ ವಿಜಯ್ ಸಾಗಿ ಬಂದ ಕಥೆ ಇನ್ನೂ ಕಠೋರವಾಗಿದೆ. ನಿಜ ಹೇಳ ಬೇಕೆಂದರೆ ಅದೊಂದು ಸಿನಿಮಾಕ್ಕೆ ಹೇಳಿಮಾಡಿಸಿದ ಕಥೆಯಂತಿದೆ. ಈತನಿಗೆ ಬಾಡಿಬಿಲ್ಡ್ ಮಾಡುವ ಹುಚ್ಚು, ಆದರೆ ಬಾಡಿಬಿಲ್ಡ್ ಮಾಡಿದ ನಂತರ ಅದಕ್ಕೆ ಬೇಕಾದ ಮೊಟ್ಟೆ ಮತ್ತು ಇತರೆ ಪೌಷ್ಟಿಕ ಆಹಾರ ತಿನ್ನಲು ಈತನ ಬಳಿ ಚಿಕ್ಕಾಸೂ ಇರುತ್ತಿರಲಿಲ್ಲ, ಅಥವಾ ಈತನಿಗೆ ಒಪ್ಪೊತ್ತು ಊಟ ಹಾಕಿಸುವ ಗೆಳೆಯರೂ ಇರಲಿಲ್ಲ, ಆದರೂ ಕೂಡ ಛಲ ಬಿಡದ ತ್ರಿವಿಕ್ರಮನಂತೆ ಈತ



ಆದಿ ಲೋಕೇಶ್ ಪ್ರಜ್ವಲ್ ದೇವರಾಜ್ ತರುಣ್ ಸುಧೀರ್

ಬಾಡಿ ಬಿಲ್ಡ್ ಮಾಡುವ ಹುಚ್ಚನ್ನಂತೂ ಬಿಡಲಿಲ್ಲ. ಪ್ರತಿ ದಿನ ವ್ಯಾಯಾಮ ಮಾಡುವ ಮೊದಲು ಮತ್ತು ವ್ಯಾಯಾಮದ ನಂತರ ಎರಡು ಲೀಟರ್ ನೀರೇ ಇವನ ಪಾಲಿನ ಆಹಾರವಾಗಿರುತ್ತಿತ್ತು. ಇಂತಹ ನಿಕೃಷ್ಟ ಸ್ಥಿತಿಯಿಂದ ಬಂದ ವಿಜಯ್‌ನ 'ದುನಿಯಾ' ಈಗ ಬದಲಾಗಿಬಿಟ್ಟಿದೆ. ಕೋಟ್ಯಂತರ ರುಪಾಯಿ ಚೆಲ್ಲುವ ನಿರ್ಮಾಪಕರು ಹಣದ ಚೀಲ ಹಿಡಿದುಕೊಂಡು ವಿಜಯ್ ಕಾಲ್‌ಶೀಟಗಾಗಿ ಆತನ ಮನೆ ಹುಡುಕುತ್ತಿದ್ದಾರೆ. ಆದರೆ ಪಾಪ ಆತನಿಗೆ ಉಳಿದುಕೊಳ್ಳಲು ಬೆಂಗಳೂರಿನಲ್ಲಿ ಒಂದು ಪುಟ್ಟ ಮನೆಯೂ ಇಲ್ಲವೆಂಬುದು ಇವರಿಗೇನು ಗೊತ್ತು?

ಈ ಮೂವರ ಕತೆ ಎಷ್ಟು ರೋಮಾಂಚಕವಾಗಿದೆಯಲ್ಲವೇ?

ಕಳೆಗುಂದಿದ ಸ್ಟಾರ್ ಸನ್ಸ್

ಇವರ ಜೊತೆಗೇ ಬಂದ ಇನ್ನಿತರ ಯುವ ನಾಯಕ ನಟರುಗಳಾದ ತರುಣ್ ಸುಧೀರ್, ಆದಿ ಲೋಕೇಶ್ ಮತ್ತು ಪ್ರಜ್ವಲ್ ದೇವರಾಜ್‌ರತ್ತ ಒಮ್ಮೆ ಕಣ್ಣಾಡಿಸಿ. ಇವರು ಚಿತ್ರರಂಗಕ್ಕೆ ಕಾಲಿಡುವ ಮೊದಲೇ ಗಾಂಧಿನಗರದವರು ಇವರನ್ನು ಕೊಂಡಾಡಲು ಶುರುಮಾಡಿದ್ದರು. ಈ ಹುಡುಗರ ತಂದೆಯಂದಿರು ಕಲಾವಿದರಾಗಿರುವುದರಿಂದ ಇವರೂ ಗೆದ್ದೇಗೆಲ್ಲುತ್ತಾರೆ ಎಂಬ ಕುರುಡು ವಿಶ್ವಾಸ ಗಾಂಧಿನಗರದಲ್ಲಿತ್ತು. ಆದರೆ ಇವರು ಎಡವಿದ್ದು ಅಲ್ಲೇ. ಆದರೆ ಗಾಂಧಿನಗರದವರು ಕೊಂಡಾಡಿದಷ್ಟು ಇವರು ಮೆರೆಯಲಿಲ್ಲ. ಇದರರ್ಥ ಈ ಹುಡುಗರು ಚೆನ್ನಾಗಿ ನಟಿಸಿಲ್ಲವೆಂದೇನಲ್ಲ. ಮೊದಲ ಪ್ರಯತ್ನದಲ್ಲಿ ಈ ಮೂವರೂ ತಮ್ಮ ಪ್ರತಿಭೆಯನ್ನು ತೋರಿಸಿದರೂ ಅವರು ಸಾಗಬೇಕಾದ ಹಾದಿ ಬಹಳಷ್ಟು ದೂರವಿದೆ.

ಹೀರೋಗಳ ಮಕ್ಕಳೇ ಹೀರೋಗಳಾಗಬೇಕೆಂದೇನಿಲ್ಲ ಎಂಬ ಅದ್ಭುತವಾದ ನುಡಿಗಟ್ಟನ್ನು ನಮ್ಮ ಪ್ರೇಕ್ಷಕರು ನೀಡಿದಂತಿದೆ. ಗಣೇಶ್, ಪ್ರೇಮ್ ಮತ್ತು ವಿಜಯ್ ಇವರುಗಳನ್ನು ಪ್ರೇಕ್ಷಕರು ಗೆಲ್ಲಿಸಿದ್ದೇ ಇದಕ್ಕೆ ಸಾಕ್ಷಿ.

ಮೌನ ಕ್ರಾಂತಿ!

ಹೀಗಾಗಿ ಈ ಹೊಸ ಹುಡುಗರ ಅಬ್ಬರದ ನಡುವೆ ದರ್ಶನ್ ನಟಿಸಿದ 'ಭೂಪತಿ' ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದೆ. ಭಾರೀ ನಿರೀಕ್ಷೆ ಹುಟ್ಟಿಸಿದ್ದ 'ಅರಸು' ಚಿತ್ರವೂ ಮುಂಗಾರು ಮಳೆಯಲ್ಲಿ ತೊಯ್ದುಹೋಗಿದೆ. ಇನ್ನು 'ತಾಯಿಯ ಮಡಿಲು' ಚಿತ್ರವನ್ನು ಅದು ರಿಲೀಸ್ ಆದ ಮರುಕ್ಷಣವೇ ಅದನ್ನು ನಿರ್ದೇಶಕ ನಾರಾಯಣ್‌ರವರ ಮಡಿಲಿಗೇ ಪ್ರೇಕ್ಷಕ ಹಿಂತಿರುಗಿಸಿದ್ದಾನೆ. ಇಂತಹ ಒಂದು ಮೌನ ಕ್ರಾಂತಿ ಕನ್ನಡ ಚಿತ್ರರಂಗದಲ್ಲಿ ಈ ಹಿಂದೆ ಎಂದೂ ನಡೆದೇ ಇರಲಿಲ್ಲ, ಯಾವುದೇ ಗಾಡ್ ಫಾದರ್‌ಗಳ ನೆರವಿಲ್ಲದೆ, ಯಾವುದೇ ಅಭಿಮಾನಿ ಸಂಘಗಳ ಬೆಂಬಲವಿಲ್ಲದೆ ಮಾಮೂಲಿ ಮೂರು ಜನ ನಾಯಕರು ಮತ್ತು ನಿರ್ದೇಶಕರು, ತಂತ್ರಜ್ಞರೂ ಚಿತ್ರರಂಗದಲ್ಲಿ ಹೊಸ ಜೀವನೋತ್ಸಾಹವನ್ನು ಮೂಡಿಸಿದ್ದಾರೆ.

ಈ ಯುವ ನಿರ್ದೇಶಕರು, ನಾಯಕ ನಟರು, ಸಂಗೀತ ನಿರ್ದೇಶಕರು, ಛಾಯಾಗ್ರಾಹಕರು ಕಷ್ಟಪಟ್ಟು ಈ ಮೂರೂ ಚಿತ್ರಗಳನ್ನು ತೆರೆಗೆ ತರದೇ ಇದ್ದರೆ ಕನ್ನಡ ಚಿತ್ರರಂಗದ ಪರಿಸ್ಥಿತಿ ಹೇಗಿರುತ್ತಿತ್ತು ಎಂದು ಒಮ್ಮೆ ಊಹಿಸಿ. ಸಾಯಿಕುಮಾರ್ ನಟಿಸಿದ 'ಪೊಲೀಸ್ ಸ್ಟೋರಿ', ದರ್ಶನ್‌ನ 'ಭೂಪತಿ', ಎಸ್. ನಾರಾಯಣ್ ನಿರ್ದೇಶನದ 'ತಾಯಿಯ ಮಡಿಲು' ಚಿತ್ರಗಳನ್ನು ನೋಡಿ ಕನ್ನಡಿಗರು ತಮ್ಮ ಆರೋಗ್ಯವನ್ನು, ಮನಸ್ಸಿನ ಸ್ವಾಸ್ಥ್ಯವನ್ನು ಇನ್ನಷ್ಟು ಹದಗೆಡಿಸಿಕೊಳ್ಳಬೇಕಿತ್ತೇನೋ?

ಇಲ್ಲೊಂದು ವಿಶೇಷವೆಂದರೆ ಕನ್ನಡದಲ್ಲಿ ಕತೆಗಳೇ ಇಲ್ಲವೆಂದು ರಿಮೇಕ್ ಚಿತ್ರಗಳಿಗೆ ಲಕ್ಷಗಟ್ಟಲೆ ಸುರಿಯುವ ನಿರ್ಮಾಪಕರುಗಳೇ ನಾಚುವ ರೀತಿಯಲ್ಲಿ ಯುವ ಕತೆಗಾರರಾದ ಪ್ರೀತಂ, ಸೂರಿ, ದಿನಕರ್ ಕತೆಗಳನ್ನು ಹೆಣೆದಿದ್ದಾರೆ.


2007ರ ಆರಂಭದಲ್ಲಿ ಚಿತ್ರರಂಗದಲ್ಲಿ ಇಂತಹ ಒಂದು ಆಹ್ಲಾದಕರ ವಾತಾವರಣ ಸೃಷ್ಟಿಯಾಗುತ್ತದೆಂದು ಯಾರೂ ಊಹಿಸಿರಲಿಲ್ಲ, ಆದರೆ ಇವತ್ತು ಅದೆಷ್ಟೋ ಕಾಲದ ನಂತರ ತಮಿಳು ಮತ್ತು ತೆಲುಗಿನವರು ಮತ್ತೊಮ್ಮೆ ಕನ್ನಡದ ಕಡೆಗೆ ತಿರುಗಿ ನೋಡುವಂತಾಗಿದೆ. ಅಂತಹ ಚಮತ್ಕಾರ ಮಾಡಿದ ಈ ಹೊಸ ಹುಡುಗರನ್ನು ಅಭಿನಂದಿಸೋಣ. ಅವರ ಮಾಂತ್ರಿಕ ಸ್ಪರ್ಶದಿಂದ ಚಿತ್ರರಂಗ ಇನ್ನಷ್ಟು ವಿಜೃಂಭಿಸಲಿ, ಇವರು ಯಾವುದೇ ಕಾರಣಕ್ಕೆ ಹಳಬರಂತೆ ಸಿದ್ಧ ಸೂತ್ರಕ್ಕೆ ಅಂಟಿಕೊಳ್ಳದೇ ಈ ತರಹ ಪ್ರಯೋಗಾತ್ಮಕ ಮತ್ತು ಸಾಹಸ ಪ್ರವೃತ್ತಿಯನ್ನು ಮುಂದುವರೆಸುವಂತಾಗಲಿ.



ಮುಂಗಾರುಮಳೆಯ ಜೊತೆ ಜೊತೆಯಲಿ ಬದಲಾದ ದುನಿಯಾ

ಮಲೆನಾಡಿನ ಕಾಡುಗಳಲ್ಲಿ ಟ್ರೆಕ್ಕಿಂಗ್ ಮಾಡುತ್ತಾ ಒಂದು ಸಣ್ಣ ಸಂತೋಷ ಅನುಭವಿಸಲು 2005ರ ಮೇ 28ರಂದು ಸಕಲೇಶಪುರಕ್ಕೆ ಹೋಗಿದ್ದ ಮೂವರು ಪ್ರಾಣ ತೆತ್ತಿದ್ದಾರೆ. ಕಾಡು ಸುತ್ತಿ ಬರಲು ಹೊರಟ ಬೆಂಗಳೂರಿನ ತೇಜಮೂರ್ತಿ, ವಸಂತಕುಮಾರ್ ಹಾಗೂ ಭಾಸ್ಕರ್ ಬಾಬು ಎಂಬ ನಿಷ್ಪಾಪಿ ಯುವಕರು ನಾಪತ್ತೆಯಾಗಿ ಒಂಬತ್ತು ತಿಂಗಳಾಗಿತ್ತು. ಅಂದರೆ ನಾಗರಿಕ ಜಗತ್ತಿನ ಸಂಪರ್ಕ ಕಳೆದುಕೊಂಡ ನಾಲ್ಕಾರು ದಿನಗಳಲ್ಲೇ ಅವರ ಸಾವು ಸಂಭವಿಸಿರುತ್ತದೆ. ಆದರೆ ಹೊರಜಗತ್ತಿಗೆ ಗೊತ್ತಾಗಿದ್ದೇ ಮೊನ್ನೆ ಫೆಬ್ರವರಿ 19ರಂದು. ಅನುಭವಿ ಟ್ರೆಕ್ಕರ್‌ಗಳಾಗಿದ್ದ ಇವರಿಗಾದರೂ ಕನಿಷ್ಠ ಎರಡು-ಮೂರು ದಿನಗಳಾದರು ಬೇಕೇಬೇಕು.

ಪಶ್ಚಿಮಘಟ್ಟದಲ್ಲಿ ಟ್ರೆಕ್ಕಿಂಗ್ ಹೋದೀರಿ ಜೋಕೆ!



ಈ ಮೂವರೂ 21ನೇ ಶತಮಾನದಲ್ಲಿ ಅದೂ ಸಾರಿಗೆ ಸಂಪರ್ಕ ಹೈಟೆಕ್ ಆಗಿರುವ ಈ ಕಾಲಘಟ್ಟದಲ್ಲೂ ಕಾಡಿನಲ್ಲಿ ಕಳೆದು ಹೋಗುತ್ತಾರೆ, ಅಲ್ಲೇ ಸತ್ತೂ ಹೋಗುತ್ತಾರೆಂಬುದು ನಂಬಲು ಅಸಾಧ್ಯ ಎನಿಸಬಹುದು. ಆದರೆ ಅಂಥದೊಂದು ದುರಂತ ಈಗ ಘಟಿಸಿ ಹೋಗಿದೆ.

2006 ಮೇ 28ರಂದು ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 48ರ ಆರ್‌ಎಂಸಿ ಗೇಟ್ (ಶಿರಾಡಿ ಗೇಟ್) ಸಮೀಪ ಸಂಜೆ 4 ಗಂಟೆ ಸುಮಾರಿಗೆ ಬಿಳಿ ಮಾರುತಿ ವ್ಯಾನೊಂದನ್ನು ಪಾರ್ಕು ಮಾಡಿ, ಚಾರಣಕ್ಕೆ ಹೋದವರು, ಶಿರಾಡಿಯಿಂದ ಏಳು ಕಿ.ಮೀ. ದೂರದ ಕಬ್ಬಿನಾಲೆ ಅರಣ್ಯದಲ್ಲಿ ಈಗ ಅಸ್ಥಿಪಂಜರವಾಗಿ ಪತ್ತೆಯಾಗಿದ್ದಾರೆ.

ಮಲೆನಾಡಿನ, ಪಶ್ಚಿಮ ಘಟ್ಟದ ಅಭಯಾರಣ್ಯಗಳನ್ನು ಮಳೆಗಾಲದಲ್ಲಿ ಚಾರಣಿಗರು ಹೊಕ್ಕುವುದಿಲ್ಲ. ಮಳೆಗಾಲದಲ್ಲಿ ಈ ಅಭಯಾರಣ್ಯದಲ್ಲಿ ಬೆಳಗ್ಗೆ 11 ಗಂಟೆ ಸುಮಾರಿಗೆ ಇಬ್ಬನಿ ಕಣ್ಮರೆಯಾದರೆ ಮತ್ತೆ ಸಂಜೆ 5 ಕ್ಕೆಲ್ಲಾ ಆವರಿಸಿಕೊಳ್ಳುತ್ತದೆ. ಕನಿಷ್ಠ ಎರಡು ಅಡಿಯ ಆಚೆಗಿರುವುದು ಕಣ್ಣಿಗೆ ಗೋಚರಿಸದು.

ಇಲ್ಲಿ 3ರಿಂದ 4 ಅಡಿ ಎತ್ತರದ ಹುಲ್ಲಿನರಾಶಿ ಇದೆ. ಕಲ್ಲು ಬಂಡೆಗಳಿವೆ. ಬೇಸಿಗೆ ಕಾಲದಲ್ಲೇ ಪಾಚಿ ಕಟ್ಟಿರುತ್ತದಾದ್ದರಿಂದ ಜಾರಿಕೆ ಇರುತ್ತದೆ. ಭೀಕರ ಪ್ರಾಣಿಗಳಿವೆ. ಗೊತ್ತಾಗದಂತೆ ಕಚ್ಚಿ ರಕ್ತ ಹೀರುವ ಜಿಗಣೆಗಳಿವೆ. ಎಲ್ಲಾ ಜಾತಿಯ ಹಾವುಗಳಿವೆ. ಹುಲಿ, ಚಿರತೆಯಂಥ ನಾನಾ ಕಾಡು ಪ್ರಾಣಿಗಳಿವೆ. ಈ ಕಾಡುಗಳಲ್ಲಿ ಮರದ ಕಳ್ಳನಾಟ ದಂಧೆ ಇದೆ. ರಾತ್ರಿ ಪ್ರಾಣಿಗಳ ಶಿಕಾರಿಗಳು ನಡೆಯುತ್ತವೆ.

ಇಂಥ ದಟ್ಟ ಅರಣ್ಯದಲ್ಲಿ ಸಂಜೆ 4 ಗಂಟೆಗೆ ಚಾರಣ ಹೊರಟ ಈ ತ್ರಿಮೂರ್ತಿಗಳು, ಶಿರಾಡಿಯಿಂದ 7 ಕಿ.ಮೀ. ದೂರದ ಕಬ್ಬಿನಾಲೆ ಅರಣ್ಯವನ್ನು ಯಾವಾಗ, ಹೇಗೆ, ತಲುಪಿದರು? ಕತ್ತಲಲ್ಲಿ ದಾರಿ ತಪ್ಪಿದರೆ? ಹೆಜ್ಜೆ-ಹೆಜ್ಜೆಗೂ ಸಣ್ಣಪುಟ್ಟ ಜಲ-ತೊರೆಗಳಿವೆ. ಕಲ್ಲು ಬಂಡೆಗಳಿವೆ, ಇಡೀ ಪ್ರದೇಶವೇ ಉಬ್ಬು-ತಗ್ಗಾಗಿದೆ. ಇವೆಲ್ಲವನ್ನೂ ದಾಟಿ ಕಬ್ಬಿನಾಲೆ ಅರಣ್ಯ ತಲುಪಲು ಎಂತಹ expert ಗಳಿಗಾದರೂ ಕನಿಷ್ಠ ಎರಡು-ಮೂರು ದಿನಗಳಾದರು ಬೇಕೇಬೇಕು.

ಮೂರು ಅಸ್ಥಿಪಂಜರಗಳು 100-200 ಮೀಟರ್ ಸುತ್ತಳತೆಯಲ್ಲಿ ದೊರೆತಿವೆ. ಅಸ್ಥಿಪಂಜರಗಳು ಪತ್ತೆಯಾದಲ್ಲಿ ಐಡೆಂಟಿಟಿ ಕಾರ್ಡು, ಶೂಗಳು, ವಿಸಿಟಿಂಗ್ ಕಾರ್ಡ್‌ಗಳು, ಭಾವಚಿತ್ರ, ವೀಸಾ ಕಾರ್ಡು ಬಟ್ಟೆ ಲೆವೀಸ್ ಕಂಪನಿಯ ಜೀನ್ಸ್ ಪ್ಯಾಂಟೊಂದು ಪತ್ತೆಯಾಗಿವೆ. ಮತ್ಯಾವ ಚಾರಣ ಸಾಮಗ್ರಿಗಳು ಪತ್ತೆಯಾಗಿಲ್ಲ. ಕಳೆದ 9 ತಿಂಗಳಿನಿಂದ ಸಿಕ್ಕ ವಸ್ತುಗಳೆಲ್ಲ ಪತ್ತೆಹಚ್ಚುವಂತಹ ಸ್ಥಿತಿಯಲ್ಲಿ ಸಿಕ್ಕಿವೆ ಎಂದರೆ ಅದೊಂದು ಪರಮಾಶ್ಚರ್ಯವೇ ಸರಿ.

ಸಿಕ್ಕ ಅಸ್ಥಿಪಂಜರಗಳು ತಲೆ, ದೇಹದ ಕೆಲವು ಭಾಗಗಳು ಮರದ ಪೊಟರೆಯ ಮೇಲೆ, ಹಳ್ಳದ ಸಮೀಪದ ದಂಡೆಯ ಮೇಲೆ ದೊರೆತಿವೆ. ಪೊಲೀಸರು ಪ್ರಾಣಿಗಳು ದೇಹದ ಮಾಂಸ ಖಂಡವನ್ನು ತಿಂದಿವೆ ಎಂಬ ಗುಮಾನಿ ವ್ಯಕ್ತಪಡಿಸಿದ್ದಾರೆ. ಕ್ರೂರ ಹಿಂಡು ಪ್ರಾಣಿಗಳ ದಂಡಿನ ದಾಳಿಗೆ ಎದುರಾಗಿ ಮೂವರು ಒಂದೇ ಸ್ಥಿತಿಯಲ್ಲಿ ಸಾಯಲು ಸಾಧ್ಯನಾ? ಇವೆಲ್ಲವೂ ಯಕ್ಷಪ್ರಶ್ನೆಗಳಾಗಿವೆ.

ಶೋಧ ಕಾರ್ಯ ನಡೆದಿತ್ತು

ಚಾರಣಕ್ಕೆ ತೆರಳಿ ನಾಪತ್ತೆಯಾದವರ ಪ್ರಕರಣ ದಾಖಲಾಗುತ್ತಿದ್ದಂತೆ ಪೊಲೀಸರ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಸತತ ಎಂಟು ದಿನಗಳ ಕಾಲ ಶೋಧ ಕಾರ್ಯ ನಡೆಸಿತು. ಇದಲ್ಲದೇ, ಕಾಣೆಯಾದವರ ಕುಟುಂಬ ಸದಸ್ಯರು ಅಡ್ವೆಂಚರ್ ಕ್ಲಬ್‌ನ 10 ಜನರೊಂದಿಗೆ ನಾಲ್ಕು ರಾತ್ರಿ-ಹಗಲು ಕಾಡಿನಲ್ಲೇ ಕ್ಯಾಂಪ್ ಮಾಡಿ ಹುಡುಕಾಡಿತ್ತಾದರೂ ಸಣ್ಣ ಕುರುಹೂ ದಕ್ಕಿರಲಿಲ್ಲ.

ಈ ಸಂದರ್ಭ ಬೆಂಗಳೂರಿಗರು ಚಾರಣಕ್ಕೆ ಹೊರಡುವ ಮುನ್ನ ಕಾರು ಪಾರ್ಕು ಮಾಡಿದ್ದ ಆರ್‌ಎಂಸಿ ಯಾರ್ಡ್ ಸಮೀಪದ ವರ್ತಕ ಸುಬ್ಬೇಗೌಡ ಫೋಟೋ ನೋಡಿ ಈ ಮೂವರು ಬಸ್ಸಿನಲ್ಲಿ ಹೋದುದಾಗಿ ತಿಳಿಸಿದ್ದ. ಪೊಲೀಸರಿಗೆ ಬಸ್ಸಿನ ಚಾಲಕನ ಶಿರಾಡಿಯಿಂದ ಫೋಟೋದಲ್ಲಿನ ಮೂವರು ಗುಂಡ್ಯಾಗೆ ಬಂದುದಾಗಿ ಹೇಳಿದ್ದ. ಶಿರಾಡಿಯಿಂದ ಗುಂಡ್ಯಾಗೆ ತಮ್ಮ ಕಾರಿನಲ್ಲೇ ಹೋಗಬಹುದಾಗಿದ್ದರೂ ಕಾರಿನಲ್ಲಿ ಹೋಗದೆ ಬಸ್ ಪ್ರಯಾಣ ಮಾಡಿದ್ದೇಕೆ ಎಂಬ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿದಿತ್ತು.

ಅಸ್ಥಿಪಂಜರಗಳು ಪತ್ತೆಯಾದದ್ದು ಹೀಗೆ


ಸಕಲೇಶಪುರ ಕ್ಷೇತ್ರದ ಶಾಸಕ ಎಚ್.ಎಂ. ವಿಶ್ವನಾಥ್ ಸಹೋದರ ಹುರುಡಿ ವಿಕ್ರಂ ಮತ್ತು ಆರು ಜನರ ತಂಡ ಫೆಬ್ರವರಿ 20ರಂದು ಕಬ್ಬಿನಾಲೆ ಅರಣ್ಯದ ಮಣಿಬೀಗ್ರಿ ಸಮೀಪದ ಚೌಡೇಶ್ವರಿ ದೇವಸ್ಥಾನದ ಪೂಜೆಗೆ ಪ್ರತಿ ವರ್ಷದಂತೆ ಈ ವರ್ಷವೂ ಹೊರಟಿತು.

ಕಳೆದ ವರ್ಷ ಕಬ್ಬಿನಾಲೆ ಅರಣ್ಯದಲ್ಲಿ ಕಂಡುಬಂದಿದ್ದ ಸುಂದರವಾಗಿ ಅರಳುವ ವಿವಿಧ ಬಗೆ ಆರ್ಕಿಡ್ ಹೂಗಳು ಮತ್ತು ಬೆಟ್ಟದ ಅಂಚಿನಲ್ಲಿ ಹರಿಯುವ ಚಿಕ್ಕ ಹಳ್ಳದಲ್ಲಿನ ಹಕ್ಕಿ ಕೊಕ್ಕಿನ ಆಕಾರದ ಮೂತಿ ಹೊಂದಿದ ವಿಶೇಷ ಮೀನಿನ ಫೋಟೋ ತೆಗೆಯಲಿಕ್ಕಾಗಿ ಹೊಸದಾಗಿ ಡಿಜಿಟಲ್ ಕ್ಯಾಮರಾ ಖರೀದಿಸಿ ಹವ್ಯಾಸಿ ಚಾರಣಿಗ ವಿಕ್ರಂ ಮತ್ತು ತಂಡ ಹಾನುಬಾಳಿನಿಂದ ಜೀಪಿನಲ್ಲಿ ಪ್ರಯಾಣ ಆರಂಭಿಸಿದೆ.

ಬೆಳಿಗ್ಗೆ 9.30ರಲ್ಲಿ ಕಾಡುಮನೆ ಎಸ್ಟೇಟಿನಲ್ಲಿ ಜೀಪು ನಿಲ್ಲಿಸಿ ಕಾಲುನಡಿಗೆಯಲ್ಲಿ ಕಬ್ಬಿನಾಲೆ ಅರಣ್ಯ ಪ್ರವೇಶಿಸಿದ್ದಾರೆ. ಅಲ್ಲಿನ ಇಟ್ಟಿಗೆಗೂಡು ಪ್ರದೇಶ ಸಮೀಪದ ಹಳ್ಳವೊಂದರಲ್ಲಿ ವಿಚಿತ್ರ ಮತ್ಸ್ಯ ಚಿತ್ರೀಕರಿಸುವ ಸಂದರ್ಭ ತಲೆಬುರುಡೆ ಇಲ್ಲದ ಮನುಷ್ಯ ದೇಹದ ಎಲುಬುಗಳು ಗೋಚರಿಸಿವೆ. ಅಲ್ಲಿಂದ ಆಣತಿ ದೂರದಲ್ಲೇ ಒಂದು ವಿದೇಶಿ ಷೂ ಮತ್ತು ಮಾನವನ ಹಲ್ಲುಗಳಿರುವ ಒಸಡಿನ ಭಾಗ ಪತ್ತೆಯಾಗಿದೆ.

ನಾಪತ್ತೆಯಾಗಿದ್ದ ಚಾರಣಿಗರ ಶಂಕೆ


ಪತ್ತೆಯಾಗುತ್ತಿರುವ ಅಸ್ಥಿಪಂಜರಗಳಿಗೂ ಒಂಬತ್ತು ತಿಂಗಳ ಹಿಂದೆ ಚಾರಣಕ್ಕೆ ಬಂದು ನಾಪತ್ತೆಯಾದವರಿಗೂ ಸಂಬಂಧವಿದೆಯಾ ಎಂದು ಶಂಕಿಸಿ ವಿಕ್ರಮ್ ಅರಮನೆ ಗುಡ್ಡದ ಕಣಿವೆಯಲ್ಲಿ ಹರಿಯುವ ಮತ್ತೊಂದು ಹಳ್ಳಕ್ಕೆ ಇಳಿದು ಶೋಧಿಸಿದಾಗ ಮನಿಪರ್ಸ್‌ವೊಂದು ಪತ್ತೆಯಾಗಿದೆ. ಅದರಲ್ಲಿ ನಾಪತ್ತೆಯಾಗಿದ್ದ ಚಾರಣಿಗರಲ್ಲಿ ಒಬ್ಬನಾದ ವಸಂತ್‌ಕುಮಾರನ (ಡ್ರೈವಿಂಗ್ ಲೈಸೆನ್ಸ್) ಪತ್ತೆಯಾಗಿದೆ.



ಹಾಗೆ ಹುಡುಕಾಟ ನಡೆಸಿದಾಗ ನೀರಿನ ನಡುವಿನ ಮರಗಿಡಗಳ ಒಣಗಿದ ರಂಬೆಕೊಂಬೆಗಳ ಜಿಗ್ಗಿನೊಳಗೆ ತಲೆಬುರುಡೆಯೊಂದು ಕಾಣಿಸಿದೆ. ತೊಡೆಭಾಗದ ಮೂಳೆ, ಲೆವೀಸ್ ಟ್ರೇಡ್ ಮಾರ್ಕಿನ ಜೀನ್ಸ್ ಪ್ಯಾಂಟೊಂದು ದೊರೆತಿದೆ.

ಈ ಭಾಗದಲ್ಲಿ ಅರಮನೆ ಗುಡ್ಡವೇ ಅತ್ಯಂತ ಎತ್ತರದ ಬೆಟ್ಟ. ಅದನ್ನು ಹತ್ತಿ ಅಲ್ಲಿ ಮೊಬೈಲ್ ಸಿಗ್ನಲ್ ಸಿಕ್ಕಿದಾಗ ತನ್ನ ಸಹೋದರ ಎಚ್.ಎಂ. ವಿಶ್ವನಾಥ್ (ಶಾಸಕ)ಗೆ ವಿಕ್ರಂ ನಾಪತ್ತೆಯಾಗಿದ್ದ ಚಾರಣಿಗರಿಗೆ ಸಂಬಂಧಿಸಿದ ಕೆಲ ದಾಖಲೆಗಳು ಮತ್ತು ಎರಡು ಅಸ್ಥಿಪಂಜರಗಳು ದೊರೆತಿರುವ ಸುದ್ದಿ ಮುಟ್ಟಿಸಿದ್ದಾರೆ.

ಅಸ್ಥಿಗಳು ಪತ್ತೆಯಾದ ಸ್ಥಳವು ಕಾಡುಮನೆಯಿಂದ 8 ಕಿ.ಮೀ. ದೂರ ಮತ್ತು ಶಿರಾಡಿಯಿಂದ 7 ಕಿ.ಮೀ. ದೂರದಲ್ಲಿದ್ದುದರಿಂದ ಪೊಲೀಸರು ಅಲ್ಲಿಗೆ ತಲುಪುವುದು ರಾತ್ರಿಯಾಗಬಹುದೆಂದು ಮರುದಿನ ಶೋಧ ನಡೆಸಿದ್ದಾರೆ. ಒಟ್ಟು ಮೂರು ಅಸ್ಥಿಪಂಜರಗಳು. ಜೊತೆಗೆ ತೇಜಮೂರ್ತಿಯ ಭಾವ ಚಿತ್ರ, ವಿಸಿಟಿಂಗ್ ಕಾರ್ಡು, ವೀಸಾ ಕಾರ್ಡುಗಳು ಪತ್ತೆಯಾಗಿವೆ. ಪೊಲೀಸರು ಹೈದರಬಾದಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಅಸ್ಥಿಪಂಜರದ ಕೆಲಭಾಗಗಳನ್ನು ಪರೀಕ್ಷೆಗೆ ಕಳಿಸಿದ್ದಾರೆ.



ಎಡ್ಡಾದಿಡ್ಡಿ ಶೋಧನಾ ಕಾರ್ಯ

ತೇಜಮೂರ್ತಿ ತಂಡ ಕಾಣೆಯಾದ ಬಗ್ಗೆ ಅವರು ಅರಣ್ಯ ಹೊಕ್ಕ ಎರಡನೆ ದಿನವೇ ಅನುಮಾನ ಬಂದಿತ್ತು. ನಂತರ ಇದು ಖಚಿತವಾದಾಗ ಹುಡುಕಲು ಹೊರಟ ಸರ್ಚ್ ಪಾರ್ಟಿಗಳೂ ಒಂದಿಷ್ಟು ತಪ್ಪು ಮಾಡಿದ್ದರು. ಏಕೆಂದರೆ ಇವರೆಲ್ಲಾ ಕಾಳಜಿಯಿಂದ ಬಂದಿದ್ದವರೇ ಹೊರತು ಇಂಥ ಸಂದರ್ಭಗಳಲ್ಲಿ ತೋರಬೇಕಿದ್ದ ವೃತ್ತಿ ಪರತೆಯನ್ನು ತೋರಿಸದೆ ಹೋದರು. ಉದಾಹರಣೆಗೆ ಚಾರಣಿಗರು ಕಾಣೆಯಾದ ನಂತರ ಸ್ಥಳೀಯ ಪೊಲೀಸರು ಹಾಗೂ ಟ್ರೆಕ್ಕಿಂಗ್ ಗುಂಪುಗಳು ನಾಲ್ಕಾರು ದಿನ ಹುಡುಕಿ ಬರಿಗೈಲಿ ಬಂದಿದ್ದರು. ನಂತರ ತೇಜಮೂರ್ತಿಯವರ ಗೆಳೆಯ ಸಂಜೀವ್, ಸುರೇಶ್ ಮತ್ತಿತರರ ಸಣ್ಣ ತಂಡವೂ ಕೆಲ ದಿನ ಸರ್ಚ್ ನಡೆಸಿತ್ತು, ಈ ಮಧ್ಯೆ ಮೈಸೂರಿನ ಕೆಲ ಚಾರಣಿಗರೂ ಬಂದು ಹುಡುಕಾಟ ನಡೆಸಿ ಹೋಗಿದ್ದರು. ಆದರೆ ಒಂದು ತಂಡ ಈಗಾಗಲೇ ಹುಡುಕಾಟ ನಡೆಸಿದ ಸ್ಥಳದಲ್ಲೇ ಇತರೆ ತಂಡಗಳೂ ಹುಡುಕಾಡಿದ್ದವು. ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ.

ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ನಗರದ ಯಾಂತ್ರಿಕ ಜೀವನದಿಂದ ಬೇಸತ್ತು ಟ್ರೆಕ್ಕಿಂಗ್‌ಗೆ ಹೋಗುವ ಸಾವಿರಾರು ಹವ್ಯಾಸಿಗರು ಇದ್ದಾರೆ. ಬೆಂಗಳೂರೊಂದರಲ್ಲೇ ಕನಿಷ್ಠ 250 ಅಡ್ವೆಂಚರ್ ಕ್ಲಬ್‌ಗಳಿವೆ. ಟ್ರೆಕ್ಕಿಂಗ್ ಎಂಬುದು ಈಗ ಕೇವಲ ಹವ್ಯಾಸವಲ್ಲ, ಅದೊಂದು ಸಣ್ಣ ಪ್ರಮಾಣದ ಉದ್ಯಮವೇ ಆಗಿದೆ.

ಟ್ರೆಕ್ಕಿಂಗ್‌ನಲ್ಲಿ ಮೈನವಿರೇಳಿಸುವ, ಮನಸ್ಸಿಗೆ ಮುದ ನೀಡುವಂತಹ ನೂರೆಂಟು ಸಂಗತಿಗಳಿರುತ್ತವೆ. ಆದರೆ ಅಪಾಯವೂ ಇಲ್ಲದಿಲ್ಲ.

ತೇಜಮೂರ್ತಿ ಟ್ರೆಕ್ಕಿಂಗ್‌ನಲ್ಲಿ ಹದಿನೈದು ವರ್ಷ ಅನುಭವ ಇದ್ದವರು. ವಸಂತ್ ಹಿಮಾಲಯದಲ್ಲೆಲ್ಲಾ ಓಡಾಡಿ ಬಂದಿದ್ದಾತ. ಭಾಸ್ಕರ್‌ಗೂ ಕನಿಷ್ಠ ಆರೆಂಟು ವರ್ಷಗಳ ಅನುಭವ ಇತ್ತು. ಹೀಗಿದ್ದೂ, ಇವರಿಗೆಲ್ಲಾ ಚಿರಪರಿಚಿತವಾಗಿದ್ದ ಸಕಲೇಶಪುರದ ಕಾಡಿನಲ್ಲೇ ಇವರು ಕಳೆದುಹೋದರೆಂಬುದನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕಿದೆ. ಟ್ರೆಕ್ಕಿಂಗ್ ಹೊರಡುವವರು ಇನ್ನು ಮುಂದಾದರು ಎಲ್ಲಿಂದ ಎಲ್ಲಿವರೆಗೆ, ಯಾವ ದಾರಿ, ಎಷ್ಟು ದಿನ ಎಂಬೆಲ್ಲಾ ವಿಚಾರ ಪಕ್ಕಾ ಮಾಡಿಕೊಂಡು ಮುಂದಡಿ ಇಟ್ಟರೆ ಕ್ಷೇಮ.

ಕೊನೆಯದಾಗಿ, ಚಾರಣಿಗರಿಗೊಂದು ಕಿವಿಮಾತು:

ನಮ್ಮ ಹತ್ತಿರ ಸಾಕಷ್ಟು ಬಟ್ಟೆಬರೆ, ಆಹಾರ, ಔಷಧಿ, ರಕ್ಷಣಾ ಸಲಕರಣೆಗಳು, ಸಂಪರ್ಕ ಸಾಧನಗಳೆಲ್ಲಾ ಇದ್ದಾಗ ಎಂತಹ ಗೊಂಡಾರಣ್ಯವನ್ನು ಪಳಗಿಸಬಹುದು ಎನ್ನಿಸುತ್ತಿರುತ್ತದೆ. ಆದರೆ ಕಡಿಮೆ ಸಿದ್ಧತೆ ಮಾಡಿಕೊಂಡು ಕಾಡು ಹೊಕ್ಕು ಇವೆಲ್ಲಾ ಸೌಕರ್ಯ ಖಾಲಿಯಾಗಿ ಬಿಟ್ಟರೆ ಚೇತೋಹಾರಿ ನಿಸರ್ಗವೂ ಸಾವು ತರುತ್ತದೆ ಎಂಬುದು ನೆನಪಿರಲಿ.

-ಜ್ಞಾನೇಂದ್ರ

ಇದೊಂದು ಕೊಲೆ ಸೆಂಟರ್!

ಮಂಗಳೂರು-ಬೆಂಗಳೂರು ನಡುವಿನ ರಾಷ್ಟ್ರೀಯ ಹೆದ್ದಾರಿ 48ರ ಪಶ್ಚಿಮಘಟ್ಟ ತಪ್ಪಲಿನ ಮಲೆನಾಡ ಮಡಿಲು ಸಕಲೇಶಪುರದ ಸುತ್ತಮುತ್ತಲಿನ ಶಿರಾಡಿ ಘಾಟ್, ಗುಂಡ್ಯಾ ರಕ್ಷಿತಾ ಅರಣ್ಯ, ಬಿಸಲೆ ಅಭಯಾರಣ್ಯಗಳು ಇತ್ತೀಚಿನ ದಿನಗಳಲ್ಲಿ ಕೊಲೆ ಸೆಂಟರ್‌ಗಳಾಗಿ ಪರಿವರ್ತನೆಗೊಂಡಿವೆ!

ಸುಮಾರು ಒಂದು ವರ್ಷದ ಹಿಂದೆ ಬೆಂಗಳೂರಿನ ಕಾಲ್‌ಸೆಂಟರ್ ಉದ್ಯೋಗಿ ತಾನಿಯಾ ಬ್ಯಾನರ್ಜಿಯನ್ನು ಕೊಲೆಗೈದು ಇಲ್ಲಿನ ಶಿರಾಡಿಘಾಟಿನಲ್ಲಿ ತಂದು ಎಸೆಯಲಾಗಿತ್ತು. ಇದಕ್ಕೂ ಎರಡು ವರ್ಷಗಳ ಹಿಂದೆ ಶಿರಾಡಿಯಿಂದ ಮುಂದಿನ ಘಾಟೊಂದರಲ್ಲಿ ವಕೀಲೆ ಚಿತ್ರಲೇಖಾಳ ಶವಪತ್ತೆಯಾಗಿತ್ತು. ಒಟ್ಟು ಈ ಕೊಲೆ ಸೆಂಟರ್‌ನಲ್ಲಿ ಕಳೆದ ಹತ್ತು ವರ್ಷಗಳಲ್ಲಿ 30ಕ್ಕೂ ಹೆಚ್ಚು ಶವಗಳು ಪತ್ತೆಯಾಗಿವೆ!

ಪಶ್ಚಿಮ ಘಟ್ಟದ ಮಲೆನಾಡಿನ ಈ ಸುತ್ತಮುತ್ತಲ ಅಭಯಾರಣ್ಯಗಳಲ್ಲಿ ವಿವಿಧ ಜಾತಿಯ ಕಾಡುಪ್ರಾಣಿಗಳಿವೆ. ಆಯುರ್ವೇದದಲ್ಲಿ ಬಳಕೆಯಾಗುವ ಸಾವಿರಾರು ಜಾತಿಯ ಗಿಡಮೂಲಿಕೆಗಳಿವೆ. ಇಲ್ಲಿನ ಸಣ್ಣಪುಟ್ಟ ಹಳ್ಳಕೊಳ್ಳ ಕೆಂಪು ಹೊಳೆಯ ನದಿ ತೀರದಲ್ಲಿ ಹೊಳಪಿನ ಕಲ್ಲುಗಳಿವೆ. ಬೀಟೆ, ತೇಗು, ಹೊನ್ನೆ, ನಂದಿ, ಹಲಸು ಲಕ್ಷಾಂತರ ಮರಗಳಿವೆ.

ಈ ಭಾಗದಲ್ಲಿ ವಿಶಿಷ್ಟ ಮಾದರಿಯ ಕೆಂಪು ಹರಳಿನ ಕಲ್ಲು ದಂಧೆಗೆ ಗನ್ ಫೈಟ್‌ಗಳಾಗಿವೆ. ಮರದ ಕಳ್ಳನಾಟಗೂ ಹೆಣಗಳುರುಳಿವೆ. ಇನ್ನು ಕಾಡುಪ್ರಾಣಿಗಳ ಶಿಕಾರಿಗೆ ಹೊರಟವರು ಹಾರಿಸಿದ ಗುಂಡಿಗೆ ನೂರಾರು ಪ್ರಾಣಿಗಳು ಹಾರಿಹೋಗಿವೆ. ಈ ಭಾಗದಲ್ಲಿ ಇಲ್ಲದ ಸಂಪನ್ಮೂಲಗಳಿಲ್ಲ; ಇರುವುದೆಲ್ಲದಕ್ಕೂ ರಕ್ತದ ಛಾಪು ಇದೆ.


ನಾಗಮಂಗಲದ ಡರ್ಟಿ ಫೈಟ್!

ಸುರೇಶ್‌ಗೌಡನ ಬುಡಕ್ಕೆ ಚಲುವಣ್ಣನ ಬಾಂಬು

ನಾಗಮಂಗಲದ ಜಿದ್ದಾಜಿದ್ದಿಗೆ ಇದೊಂದು ಲೇಟೆಸ್ಟ್ ಉದಾಹರಣೆಯಷ್ಟೇ.

ಮುಂದಿನ ಚುನಾವಣೆಯಲ್ಲಿ ಸಾರಿಗೆ ಮಂತ್ರಿ ಚಲುವರಾಯಸ್ವಾಮಿಯನ್ನು ಶತಗತಾಯ ಮಣ್ಣು ಮುಕ್ಕಿಸಲು ಹೊರಟಿದ್ದ ಕಾಂಗ್ರೆಸ್ ನಾಯಕ ಸುರೇಶ್‌ಗೌಡನ ರೆಕ್ಕೆಪುಕ್ಕಗಳನ್ನೆಲ್ಲ ಒಂದೇ ಏಟಿಗೆ ಕತ್ತರಿಸಿ ಬಿಸಾಕಿದ್ದಾರೆ ಸಾರಿಗೆ ಚಲುವಣ್ಣ!

ಅದೂ ಎಂಥಾ ರೇಡ್ ಎಂದರೆ ಸುರೇಶ್‌ಗೌಡನ ಹೌಸಿಂಗ್ ಸೊಸೈಟಿಯನ್ನೂ ಆತನ ಮನೆಯನ್ನೂ ಒಟ್ಟೊಟ್ಟಿಗೇ ತೆರಿಗೆ ಅಧಿಕಾರಿಗಳು ರೇಡ್ ಮಾಡಿದ್ದಾರೆ. ಅದೇ ಕಾಲಕ್ಕೆ ಸುರೇಶ್ ಗೌಡ ಅಧ್ಯಕ್ಷನಾಗಿದ್ದ ಎಚ್.ಎ.ಎಲ್. ಹೌಸಿಂಗ್ ಸೊಸೈಟಿಯನ್ನೇ ಸರ್ಕಾರ ಜಪ್ತಿ ಮಾಡಿಕೊಂಡಿದೆ. ಇದು ಚಲುವರಾಯನದೇ ಕೆಲಸ ಎಂದು ನಾಗಮಂಗಲಕ್ಕೆ ನಾಗಮಂಗಲವೇ ತಲೆ ಚಚ್ಚಿಕೊಳ್ಳುವುದಕ್ಕೂ ಕಾರಣಗಳಿವೆ.



ಕಳೆದ ಪಂಚಾಯ್ತಿ ಚುನಾವಣೆಯಲ್ಲಿ ತನ್ನದೇ ಬಂಡುಕೋರ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹಾಕಿದ್ದು, ತನ್ಮೂಲಕ ಇಡೀ ತಾಲ್ಲೂಕು ಪೂರ್ತಿ ಜೆಡಿಎಸ್ಸೇ ಗೆಲ್ಲುವಂತೆ ಮಾಡಿದ್ದು ಇದೇ ಸುರೇಶ್‌ಗೌಡ. ಎಲ್ಲಾರ್ ಶಿವರಾಮೇಗೌಡ ಈಗಾಗಲೇ ಮೂರು ಬಾರಿ ಸೋತಿರುವುದರಿಂದ ಮುಂದಿನ ಬಾರಿ ತನಗೇ ಕಾಂಗ್ರೆಸ್ ಟಿಕೆಟ್ಟು ಕೊಡುತ್ತದೆಯೆಂದು ನಂಬಿದ ಸುರೇಶ್‌ಗೌಡ ಒಂದು ಹಂತದಲ್ಲಿ ಚಲುವಣ್ಣನನ್ನೇ ಮೀರಿಸುವಂತೆ ದುಡ್ಡು ಬಿಚ್ಚಲಾರಂಭಿಸಿದ್ದ. ಮುಂದಿನ ಚುನಾವಣೆಯಲ್ಲಿ ಆತ ಖಂಡಿತ ಗೆಲ್ಲುತ್ತಾನೆಂದೇ ಜನ ಮಾತಾಡಲಾರಂಭಿಸಿದ್ದು ಚಲುವಣ್ಣನ ನಿದ್ದೆಗೆಡಿಸಿದೆ: ಇಷ್ಟೆಲ್ಲಕ್ಕೂ ಸುರೇಶ್‌ಗೌಡನಿಗೆ ದುಡ್ಡು ಬರುವುದು ಆತ ಅಧ್ಯಕ್ಷನಾಗಿರುವ ಎಚ್‌ಎಎಲ್ ಹೌಸಿಂಗ್ ಸೊಸೈಟಿಯಿಂದ ತಾನೆ?

ಅದನ್ನೇ ಸರ್ಕಾರ ಸೂಪರ್ ಸೀಡ್ ಮಾಡಿಬಿಟ್ಟರೆ?

ಇಂಥಾ ಲೆಕ್ಕ ಹಾಕಿಯೇ ಸಹಕಾರ ಮಂತ್ರಿ ಜಿ.ಟಿ. ದೇವೇಗೌಡರ ತಲೆ ತಿಕ್ಕಿದ ಚಲುವ ಫೆಬ್ರವರಿ 24ರ ಹೊತ್ತಿಗೆ ಎಚ್‌ಎಎಲ್ ಹೌಸಿಂಗ್ ಸೊಸೈಟಿಯನ್ನೇ ಸೂಪರ್ ಸೀಡ್ ಮಾಡಿಸಿದ್ದಾರೆ. ಸದ್ಯ ಅಲ್ಲಿಗೆ ಸರ್ಕಾರದ ಆಡಳಿತಾಧಿಕಾರಿ ಬಂದು ವಕ್ಕರಿಸಿದ್ದಾನೆ. ಅದೇ ಹೊತ್ತಿಗೆ ತೆರಿಗೆ ಅಧಿಕಾರಿಗಳು ಇಂದಿರಾನಗರದ ಸುರೇಶ್‌ಗೌಡನ ಮನೆ ಮೇಲೆ ರೇಡು ಬಿದ್ದಿದ್ದಾರೆ. ಮನೆಯೂ ರೇಡು, ಸೊಸೈಟಿಯೂ ಬರಖಾಸ್ತು!

ಸದ್ಯ ಸಾರಿಗೆ ಚಲುವನ ಮುಖದಲ್ಲಿ ವಿಕಟನಗೆ. ಹಾಗಂತ ಅಪಾಯ ತಪ್ಪಿತೆ? ಜಿದ್ದಿಗೆ ಬಿದ್ದು ಸುರೇಶ್‌ಗೌಡ ಮತ್ತೆ ಶಿವರಾಮೇಗೌಡರ ಬೆನ್ನಿಗೆ ನಿಂತುಬಿಟ್ಟರೆ?

ಅಲ್ಲಿಗೆ ಚಲುವನ ಬಾಣ ಅವನಿಗೇ ತಿರುಗುಬಾಣ!

ಹಾಸನದ ಪುಕ್ಕಲು ಪೋಲೀಸರು

ಮೊನ್ನೆ ಫೆಬ್ರವರಿ 21 ರ ಸಂಜೆ ಹಾಸನದ ಕೋರ್ಟ್ ಆವರಣದಲ್ಲಿ ಏನೇನಾಯಿತೆಂಬುದನ್ನು ಇಡೀ ಕರ್ನಾಟಕ ರಾಜ್ಯದ ಜನತೆ ನೋಡಿದ್ದಾರೆ. ನ್ಯಾಯವಾದಿಗಳು ಎನಿಸಿಕೊಂಡ ಜಯರಾಂ ಸತ್ತವನ ಕೆಲವು ವಕೀಲರ ಗ್ಯಾಂಗ್ ಹಾಡುಹಗಲೇ ಸಾವಿತ್ರಮ್ಮ ಎಂಬ ಮಹಿಳೆಯ ಮೇಲೆ ದೌರ್ಜನ್ಯ ನಡೆಸಿತು. ಬಿಡಿಸಲು ಬಂದ ಆಕೆಯ ಪತಿ ಕಾಮೇಗೌಡನನ್ನು ಕೋರ್ಟ್ ಕಂಪೌಂಡ್ ಪೂರ್ತಿ ಓಡಾಡಿಸಿಕೊಂಡು ಬಡಿದರು. ಸ್ಥಳದಲ್ಲಿದ್ದ ಪತ್ರಕರ್ತರು ಜಯರಾಂ ಗ್ಯಾಂಗಿನ ಈ ಆಟಾಟೋಪಗಳನ್ನೆಲ್ಲಾ ದಾಖಲಿಸಿಕೊಂಡರೆ ಅದೇ ತಪ್ಪೆನ್ನುವಂತೆ ಪತ್ರಕರ್ತರಿಗೂ ಒದೆ ಬಿತ್ತು. ಪೊಲೀಸರು ಅವತ್ತೂ ಸುಮ್ಮನಿದ್ದರು. ಈಗಲೂ ಸುಮ್ಮನಿದ್ದಾರೆ ಎಂಬುದೇ ನಾಚಿಕೆಗೇಡಿನ ವಿಚಾರ.



ಹಲ್ಲೆಗೊಳಗಾದ ಸಾವಿತ್ರಮ್ಮ

ಇಷ್ಟಕ್ಕೂ ಈ ವಕೀಲರು ಈ ಗೂಂಡಾಗಿರಿ ನಡೆಸಿದ್ದು ಸಾವಿತ್ರಮ್ಮಗೆ ನ್ಯಾಯವಾಗೇ ಸೇರಬೇಕಿದ್ದ ಅಪಘಾತ ಪರಿಹಾರದ ದುಡ್ಡು ನುಂಗಲು. ಸಾವಿತ್ರಮ್ಮನ ಅಣ್ಣನ ಸಾವಿಗೆ ಕೋರ್ಟ್ ಪರಿಹಾರ ಕೊಡಿಸಿತ್ತು. ಆದರೆ ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತೆ ಆ ದುಡ್ಡು ವಕೀಲ ಜಯರಾಂನ ಜೇಬು ಸೇರಿತೇ ವಿನಃ ನೊಂದವರ ಕೈ ಸೇರಲೇ ಇಲ್ಲ. ಕಷ್ಟದಲ್ಲಿದ್ದೀನಿ, ಆ ದುಡ್ಡು ನಮಗೆ ಸೇರಬೇಕು ಕೊಡಿ' ಎಂದು ಸಾವಿತ್ರಮ್ಮ ಕೇಳಿದ್ದೇ ಘನಘೋರ ಅಪರಾಧವಾಗಿ ಹೋಯಿತೆಂದರೆ ಲಾಯರ್ ಜಯರಾಂನ ನೀಚತನ ಎಷ್ಟಿರಬೇಕು. ಆದರೆ ಅವತ್ತು ಗಲಾಟೆಯಾಗಿದ್ದು ಕೇವಲ ಹಣದ ವಿಚಾರಕ್ಕೆ ಮಾತ್ರವಲ್ಲ.

ಈ ಜಯರಾಂ ಸಾವಿತ್ರಮ್ಮನ ಗಂಟು ನುಂಗಿದ್ದೇ ಅಲ್ಲದೇ ಆಕೆಯನ್ನು ಲೈಂಗಿಕವಾಗಿಯೂ ಬಳಸಿಕೊಳ್ಳಲು ನೋಡಿದ್ದಾನೆ. ಅಷ್ಟರಲ್ಲಾಗಲೇ ಅಸಹನೆಯಿಂದ ಕುದಿಯುತ್ತಿದ್ದ ಆ ಮಹಿಳೆ ಕೋರ್ಟ್ ಆವರಣದಲ್ಲೇ ಚಪ್ಪಲಿ ಕೈಗೆತ್ತಿಕೊಂಡಿದ್ದಾಳೆ. ಇನ್ನುಳಿದ ವಕೀಲರಿಗೆ ಈ ದೃಶ್ಯ ಕಾಣಿಸಿತೇ ವಿನಃ ಜಯರಾಂನ ಕಚ್ಚೇ ಹರುಕತನ ಗೊತ್ತಾಗಲಿಲ್ಲ. ಲಾಯರ್ ಜಯರಾಂಗೆ ಚಪ್ಪಲಿ ಏಟು ಬಿತ್ತಂತೆ ಎಂದು ಕೇಳಿದ್ದೇ ತಡ, ವಕೀಲರ ಸಂಘದ ಗೂಡದೊಳಗೆ ಇಸ್ಪೀಟು ಎಲೆ ತಟ್ಟುತ್ತಿದ್ದ ಜುಗಾರಿ ವೀರರೆಲ್ಲಾ ರೋಷಾವೇಷದಿಂದ ಹೊರಬಂದು ಸಾವಿತ್ರಮ್ಮನ ಸೀರೆ ಕಿತ್ತು ಎರ್ರಾಬರ್ರಿ ಹೊಡೆದಿದ್ದಾರೆ. ವಕೀಲ ವೀರಾಗ್ರಣಿಗಳಾದ ಪರಮೇಶ್, ಪ್ರಸನ್ನ, ನಟರಾಜ್ ಕಾಟೀಹಳ್ಳಿ, ಮೋಹನ್, ವಿಜಯಕುಮಾರ್, ಅಪ್ಪಣ್ಣಗೌಡ, ಭಾಸ್ಕರ್, ಜ್ಞಾನಮೂರ್ತಿ, ಓಬಳೇಶ್, ಪೂರ್ಣಚಂದ್ರ, ತೀರ್ಥಪ್ರಸಾದ, ಶ್ರೀನಾಥ್, ಮಂಜುನಾಥ್- ಇತ್ಯಾದಿಗಳೆಲ್ಲಾ ಗಬ್ಬುನಾತ ಬೀರುವ ಮಾತಾಡುತ್ತಾ ಈ ಹೊಲಸು ಕೆಲಸ ಮಾಡುತ್ತಿದ್ದಾಗ ಇನ್ನುಳಿದ ವಕೀಲ ಸಮೂಹ ಮೂಕರಾಗಿದ್ದರು. ಕೆಲ ಮಹಿಳಾ ವಕೀಲರು ಧೈರ್ಯದಿಂದ ಅಡ್ಡಬಂದು ಸಾವಿತ್ರಮ್ಮನನ್ನು ರಕ್ಷಿಸದಿದ್ದರೆ ಈ ಪೋಲಿ ಲಾಯರ್‌ಗಳು ಇನ್ನೂ ಹಲ್ಕಾ ದೃಶ್ಯಗಳನ್ನು ಸೃಷ್ಟಿಸುತ್ತಿದ್ದರೇನೋ?



ವಕೀಲರ ವಿರುದ್ಧ ಪತ್ರಕರ್ತರ ಪ್ರತಿಭಟನೆ

ಆದರೆ ಜಯರಾಂ ಗ್ಯಾಂಗಿನ ಅಟ್ಟಹಾಸ ಅಲ್ಲಿಗೂ ನಿಲ್ಲದೆ ಪತ್ರಕರ್ತರ ವಿರುದ್ಧ ತಿರುಗಿತು. ಈ ಮಾನಭಂಗ ಹಲ್ಲೆಯ ಘಟನೆಗಳ ಫೋಟೋ-ವೀಡಿಯೋ ದಾಖಲೆ ಮಾಡಿಕೊಳ್ಳುತ್ತಿದ್ದ ಈ ಟಿವಿಯ ಅಂಬಿಕಾ ಪ್ರಸಾದ್, ಶ್ರೀನಿವಾಸಗೌಡ, ಪ್ರಜಾವಾಣಿಯ ಅತಿಖ್ ರೆಹಮಾನ್, ಹಾಸನವಾಣಿಯ ಮುರಳಿ, ಟೀವಿ 9 ನ ಶಿವಾಜಿಯ ಮೇಲೂ ಗೂಂಡಾ ವಕೀಲರ ಗುಂಪು ಮುಗಿಬಿತ್ತು. ಮನಬಂದಂತೆ ಹೊಡೆದು ತಾವು ಅಸಲಿ ಗೂಂಡಾಗಳೆಂಬುದನ್ನು ಮತ್ತೆ ಸಾಬೀತು ಮಾಡಿಬಿಟ್ಟಿತು.

ಈ ಮಾನಭಂಗ, ಹಲ್ಲೆ ದೌರ್ಜನ್ಯಗಳನ್ನು ಸ್ವತಃ ನ್ಯಾಯವಾದಿಗಳೇ ನಡೆಸಿರುವುದರಿಂದ ನ್ಯಾಯ ಅನ್ಯಾಯಗಳ ಪ್ರಶ್ನೆ ಎತ್ತಿಕೊಂಡೇ ಮಾತಾಡುವುದಾದರೆ ಸಾವಿತ್ರಮ್ಮ ತನ್ನ ಪಾಲಿನ ಹಣ ನೀಡುವಂತೆ ಲಾಯರ್ ಜಯರಾಂನನ್ನು ಕೇಳಿದ್ದು ತಪ್ಪೇನು?

ಅಪಘಾತದಲ್ಲಿ ಸತ್ತಿದ್ದ ವ್ಯಕ್ತಿ ಸಾವಿತ್ರಮ್ಮನ ಅಣ್ಣ. ಮೊದಲು ಈ ಹಣ ಸಾವಿತ್ರಮ್ಮನ ತಾಯಿಗೆ ನೀಡುವಂತೆ ಕೋರ್ಟ್ ಆದೇಶಿಸಿತ್ತು. ಆದರೆ ಹಣ ಜಯರಾಂ ಕೈಲಿತ್ತು. ಆತ ಕಾಸು ಬಿಚ್ಚಲಿಲ್ಲ. ಮುಂದೆ ಸಾವಿತ್ರಮ್ಮನ ತಾಯಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗಲೂ ಜಯರಾಂ ಆಕೆಗೆ ಸೇರಬೇಕಾದ ಹಣ ಕೊಡಲೇ ಇಲ್ಲ. ಆ ರೋಗಿ ಅಸಹಾಯಕಳಾಗಿ ಸತ್ತಾಗಲೂ ಜಯರಾಂನ ಕಲ್ಲುಮನಸ್ಸು ಕರಗಲೇ ಇಲ್ಲ. ಇದೆಲ್ಲದರಿಂದ ರೋಸಿಹೋದ ಸಾವಿತ್ರಮ್ಮ ಫೆಬ್ರವರಿ 21 ರ ಬುಧವಾರ ಪೊಲೀಸ್‌ಗೆ ದೂರು ಕೊಡಲು ಹೋದರೆ 'ಇದೆಲ್ಲಾ ಯಾಕೆ, ಜಯರಾಂ ಹತ್ರ NOC ತಗೊಂಡು ಬೇರೆ ಲಾಯರ್ ಹುಡುಕ್ಕೊಳ್ಳಿ' ಎಂಬ ಪುಗಸಟ್ಟೆ ಸಲಹೆ ಕೊಟ್ಟಿದ್ದಾರೆ. ಆಗಲೀ ಅಂತಾ ಸಾವಿತ್ರಮ್ಮ 'ಎನ್‌ಓಸಿ ಕೊಡಯ್ಯ' ಅಂದರೆ 'ನಿನ್ನನ್ ಕೊಡ್ತಿಯಾ' ಅಂದಿದ್ದಾನೆ ಲಂಪಟ ಜಯರಾಮ. ಈ ಮಾತು ಕೇಳಿದ ಮೇಲೆ ಸಾವಿತ್ರಮ್ಮ ಚಪ್ಪಲಿ ಕೈಗೆತ್ತಿಕೊಂಡಿದ್ದರಲ್ಲಿ ಏನಾಶ್ಚರ್ಯ?

ಒಬ್ಬ ಅಸಹಾಯಕ ಮಹಿಳೆ ತನ್ನ ಸ್ವಾಭಿಮಾನ, ಆತ್ಮಗೌರವ ಉಳಿಸಿಕೊಳ್ಳಲು ತಿರುಗಿ ಬೀಳುತ್ತಾಳೆಯೇ ವಿನಃ ತಾನೇ ಕಾಲು ಕೆರೆದು ಬೀದಿ ಜಗಳಕ್ಕೆ ಇಳಿಯುವುದಿಲ್ಲ, ಹಾಸನದ ಲಾಯರ್‌ಗಳಂತೆ! ಜಯರಾಂಗೆ ಚಪ್ಪಲಿ ಏಟು ಬಿತ್ತೂಂತ ತಲೆಬುಡ ವಿಚಾರಿಸದೆ ಪಬ್ಲಿಕ್ಕಾಗಿ ಹೆಂಗಸೊಬ್ಬಳ ಸೀರೆ ಕಿತ್ತು ಹಾಕಿ ತಮ್ಮ ವೃತ್ತಿಗೌರವಕ್ಕೇ ಚಪ್ಪಲೀಲಿ ಹೊಡೆದುಕೊಂಡಿದ್ದಾರೆ ಇವರು.

ಇಷ್ಟಕ್ಕೂ ಹಾಸನ ಪೊಲೀಸರೇನು ಮಾಡಿದ್ದಾರೆ ನೋಡಿ.

ಈ ಹಲ್ಲೆ ದೌರ್ಜನ್ಯಗಳು ರಾಜ್ಯಾದ್ಯಂತ ಟೆಲಿಕಾಸ್ಟ್ ಆಗಿವೆ. ಕೋಟ್ಯಂತರ ಜನ ನೋಡಿದ್ದಾರೆ. ಏಟು ತಿಂದ ಸಾವಿತ್ರಮ್ಮ, ಪತ್ರಕರ್ತರೆಲ್ಲಾ ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಆದರೂ ನಗರ ಠಾಣೆಯ ಇನ್ಸ್‌ಪೆಕ್ಟರ್ ಯೋಗೀಶ್ ಅರೆಪ್ರಜ್ಞಾವಸ್ಥೆಯಲ್ಲೇ ಇದ್ದಾರೆ. ಎಸ್.ಪಿ. ಪಾಂಡುರಂಗ ರಾಣೆ ಪೊಲೀಸರು ನಿರ್ವಹಿಸಬೇಕಾದ ಪ್ರಾಥಮಿಕ ಡ್ಯೂಟಿಗಳೂ ಗೊತ್ತಿರದ ಶಾಲಾ ಬಾಲಕನಂತೆ ತೆಪ್ಪಗಿದ್ದಾರೆ. ಹೀಗಾದರೆ ಜನರಿಗೆ ಪೊಲೀಸರು, ಕಾನೂನಿನ ಬಗ್ಗೆ ಗೌರವ, ನಂಬಿಕೆ ಉಳಿಯುತ್ತಾ? ಅಲ್ಲಾ ವಕೀಲರೆಂದರೆ ಕಾನೂನಿಗಿಂತಾ ದೊಡ್ಡವರಾ?

ಗೂಂಡಾಗಿರಿ ಮಾಡಿದ ವಕೀಲರೆಲ್ಲಾ ಈಗಲೂ ರಾಜಾರೋಷವಾಗಿ ಓಡಾಡುತ್ತಿದ್ದಾರೆ. ದುಡ್ಡು-ಮಾನ ಎರಡೂ ಕಳೆದುಕೊಂಡ ಸಾವಿತ್ರಮ್ಮ ಆಸ್ಪತ್ರೆ ಸೇರಿದ್ದಾರೆ. ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದ ಪತ್ರಕರ್ತರೆಲ್ಲಾ ವಿನಾಕಾರಣ ಏಟು ತಿಂದಿದ್ದಾರೆ. ಆದರೆ ಪೊಲೀಸರು ಏನು ತಿಂದಿದ್ದಾರೆ, ಎಷ್ಟು ತಿಂದಿದ್ದಾರೆಂಬುದು ಗೊತ್ತಾಗುತ್ತಿಲ್ಲ!

ಕರ್ತವ್ಯಪ್ರಜ್ಞೆ ಇರದ ನಾಮರ್ಧರು ಅಮೇಧ್ಯವನ್ನೇ ತಾನೇ ತಿನ್ನುವುದು..?

ವಕೀಲರ ಅಪಪ್ರಚಾರ

ಸಾವಿತ್ರಮ್ಮ ಎಂಬ ಮಹಿಳೆಯನ್ನು ಸಾರ್ವಜನಿಕವಾಗಿ ಹೊಡೆದು ತಮ್ಮ ವೃತ್ತಿಗೇ ಅವಮಾನ ಮಾಡಿರುವ ವಕೀಲರು ಈಗ ಹೊಸ ವರಸೆಯೊಂದನ್ನೂ ಪ್ರಾರಂಭಿಸಿದ್ದಾರೆ. "ನಮ್ಮನ್ನು ಪ್ರಶ್ನಿಸುತ್ತೀರಲ್ಲಾ, ಆ ಹೆಂಗಸು ಎಂಥವಳು ಗೊತ್ತಾ? ಅಂತ ಪತ್ರಕರ್ತರನ್ನು ಯಾಮಾರಿಸುತ್ತಿದ್ದಾರೆ; ಆಕೆಯ ತೇಜೋವಧೆ ನಡೆಸುತ್ತಿದ್ದಾರೆ. ಸಾವಿತ್ರಮ್ಮ ಓರ್ವ ಅಸಹಾಯಕ ಮಹಿಳೆ. ಆದರೂ ಅವಳು "ಅಂಥವಳು, ಮೈ ದಂಧೆಯಲ್ಲಿರುವವಳು ಎಂದೆಲ್ಲಾ ಆರೋಪಿಸುತ್ತಿರುವ ವಕೀಲರಿಗೆ ಇಲ್ಲೊಂದು ಪ್ರಶ್ನೆ.

ಆಕೆ ಅಂಥವಳೇ ಎಂದು ವಾದಕ್ಕಾಗಿ ಇಟ್ಟುಕೊಳ್ಳೋಣ. ಆದರೂ ಆಕೆಯನ್ನು ಸಾರ್ವಜನಿಕವಾಗಿ ಥಳಿಸಬಹುದು ಎಂದು ಯಾವ ಕಾನೂನು ಹೇಳುತ್ತೆ ಎಂಬುದು ಹಾಸನದ ವಕೀಲರೇ ಸ್ಪಷ್ಟಪಡಿಸಬೇಕು.

ರಾಜೀಕಬೂಲಿ ಪರಿಹಾರ ಅಲ್ಲ

ಹಾಸನ ಪೊಲೀಸರ ಈ ಹೆಂಬೇಡಿತನಕ್ಕೆ ರಾಜಕಾರಣಿಗಳ ಚಿತಾವಣೆಯೇ ಕಾರಣ. ಮಾಜಿ ವಕೀಲ, ಹಾಲಿ ಶಾಸಕ ಆನಂದ್ ಹಾಗೂ ಮಾಜಿ ಶಾಸಕ ಜವರೇಗೌಡರಿಗೆ ಮಾಡಲು ಬೇರೇನೂ ಕೆಲಸವಿರದೆ ಈಗ ಪತ್ರಕರ್ತರಿಗೂ ಲಾಯರ್‌ಗಳಿಗೂ ರಾಜಿ ಮಾಡಿಸಲು ಓಡಾಡುತ್ತಿದ್ದಾರೆ. ಇವರ ಅಡ್ನಾಡಿ ಮಾತು ಕೇಳಿಯೇ ಪೊಲೀಸರೂ ಕೂಡ ಅಪರಾಧಿ ವಕೀಲರ ವಿರುದ್ಧ ಇನ್ನು ಯಾವ ಕ್ರಮವನ್ನು ಜರುಗಿಸಿಲ್ಲ. ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಈಗಾಗಲೇ ಹಾಸನಕ್ಕೇ ಹೋಗಿ ಘಟನೆಯ ವಿವರ ಪಡೆದುಬಂದಿದ್ದಾರೆ. ರಾಜ್ಯಾದ್ಯಂತ ಪತ್ರಕರ್ತರು ಪ್ರತಿಭಟಿಸುತ್ತಿದ್ದಾರೆ. ಸತ್ಯ ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ಆದರೂ ಹಾಸನ ಪೊಲೀಸರಿಗೆ ತಮ್ಮ ಕೆಲಸ ಏನೆಂಬುದೇ ಗೊತ್ತಾಗುತ್ತಿಲ್ಲವೆಂದರೆ ಈ ಪೊಲೀಸು, ಕಾನೂನು ಎಲ್ಲಾ ಯಾಕಿರಬೇಕು?

ಸಿಓಡಿ ಪೊಲೀಸರ ತೀರ್ಥಯಾತ್ರೆಯಲ್ಲಿ ಕಳೆದುಹೋದ ಸುಚೇತಾ ಕೊಲೆ ತನಿಖೆ!

ಮಂಗಳೂರು


ಇನ್ನು ವರದಿ ಮಾಡಲು ಏನೂ ಉಳಿದಿಲ್ಲ. ಪ್ರತಿಭಟನೆ, ರಾಜಕೀಯ ಮೇಲಾಟ, ನಾರ್ಕೋ ಅನಾಲಿಸಿಸ್, ಸಿಓಡಿ ತನಿಖೆ ಎಂದೆಲ್ಲಾ ಕಳೆದ ಮೂರು ವರ್ಷಗಳ ಕಾಲ ನಡೆಯಿತು. ಕೊನೆಗೀಗ ಪತ್ತೆಯಾಗದ ಪ್ರಕರಣವೆಂದು 'ಸಿ' ರಿಪೋರ್ಟ್ ಹಾಕುವ ಮೂಲಕ ಸುಚೇತಾ ಶೆಟ್ಟಿ ಕೊಲೆ ಪ್ರಕರಣದ ತನಿಖೆಗೆ ಎಳ್ಳುನೀರು ಬಿಟ್ಟಾಗಿದೆ. ಸುಚೇತಾ ಶೆಟ್ಟಿ ಕಾರ್ಕಳ ತಾಲ್ಲೂಕಿನ ನಾಲ್ಕಾರು ಸದಾಶಿವಶೆಟ್ಟರ ಮುದ್ದಿನ ಮಗಳು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿದ್ದಾಗ್ಯೂ ಹೆಬ್ರಿಯ ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಸೈನ್ಸ್ ಓದುತ್ತಿದ್ದಳು.

ಅದೊಂದು ದಿನ ದನ ಮೇಯಿಸಲು ಕಾಡಿಗೆ ಹೋಗಿದ್ದ ಸುಚೇತಾ ನಾಪತ್ತೆಯಾಗಿ ಎರಡು ದಿನಗಳ ಬಳಿಕ ಆಕೆಯ ನಿರ್ಜೀವ ದೇಹ ಕಾರ್ಕಳದ ಚೋಮಲ್ಲ ತೀರ್ಥ ಕೆರೆಯಲ್ಲಿ ಪತ್ತೆಯಾಗಿತ್ತು. ಬೆತ್ತಲೆಯಾಗಿ, ಗುಪ್ತಾಂಗದಲ್ಲಿ ರಕ್ತ ಸುರಿಯುವ ವಿಕಾರ ಸ್ಥಿತಿಯಲ್ಲಿದ್ದ ಆಕೆಯ ಮೃತದೇಹ ಮೇಲ್ನೋಟಕ್ಕೇ ಅತ್ಯಾಚಾರಕ್ಕೀಡಾಗಿರುವುದಕ್ಕೆ ಸಾಕ್ಷ್ಯ ನೀಡಿತ್ತು. ನಂತರದ ವೈದ್ಯಕೀಯ ಪರೀಕ್ಷೆಯೂ ಅದನ್ನು ದೃಢ ಪಡಿಸಿತ್ತು.

ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಸಂಭವಿಸಿದ ಈ ದುರ್ಘಟನೆ ಭಾರೀ ಪ್ರಚಾರ ಪಡೆದು, ಅದರಲ್ಲಿ ಭರಪೂರ ಮೈಲೇಜು ಗಿಟ್ಟಿಸಿಕೊಂಡವರೆಂದರೆ ಬಿಜೆಪಿಯ ಶಾಸಕ ಸುನೀಲ್‌ಕುಮಾರ್. ಕಾರಣ ಈ ಬಡಪಾಯಿ ಹೆಣ್ಣುಮಗಳ ಸಾವಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ [illegible] ನೆಂಟನೂ, ಕಚ್ಚೆ ಹರುಕನೂ ಆಗಿ ಪ್ರಚಲಿತವಿರುವ ವ್ಯಕ್ತಿಯೋರ್ವನ ಹೆಸರು ಬಲವಾಗಿ ಕೇಳಿಬಂದದ್ದು.

ಮಂಗಳೂರು ಮತ್ತು ಮೂಡಬಿದಿರೆಯ ಲಾಡ್ಜ್‌ಗಳಲ್ಲಿ ಎರಡು ದಿನ ಸಾಮೂಹಿಕ ಅತ್ಯಾಚಾರ ಮಾಡಿ ಕೊನೆಗೆ ನಿತ್ರಾಣಗೊಂಡ ಸುಚೇತಾಳ ದೇಹವನ್ನು ಚೋಮಲ್ಲ ತೀರ್ಥಕ್ಕೆ ಎಸೆದರು ಎನ್ನುವ ಸುದ್ದಿ ಆ ದಿನಗಳಲ್ಲಿ [illegible] ದಲೋ ತೇಲಿ ಬಂದು ಕುತೂಹಲ ಕೆರಳಿಸಿತ್ತು! ಈ ಸುದ್ದಿ [illegible] ನೋ, ಸುಳ್ಳೊ? ಅಂತೂ ಅದನ್ನೇ ಹಿಡಿದುಕೊಂಡು ಪ್ರತಿಭಟನೆ, [illegible]..... ಅಂತೆಲ್ಲಾ ಮಾಡಿ ಆರೋಪಿಗಳನ್ನು ಹಿಡಿಸುತ್ತೇನೆ ಎಂದು [illegible] ಸುನಿಲ್‌ಕುಮಾರ್ ಅದೇ ಇಮೇಜಿನಲ್ಲಿ ಗೆದ್ದು ಶಾಸಕನಾದದ್ದಂತೂ ನಿಜ.

ಈ ನಡುವೆ ಪೊಲೀಸರು ತನಿಖೆಯ ನಾಟಕವಾಡಿ ಕೈಗೆ ಸಿಕ್ಕ ಅಮಾಯಕರನ್ನು ಠಾಣೆಗೆ ತಂದು ಬೆಂಡೆತ್ತಿ ಹೈರಾಣ ಮಾಡಿದರೇ ಹೊರತು ಶಂಕಿತ ಪ್ರಭಾವಿ ಹೆಣ್ಣುಬಾಕನನ್ನು ವಿಚಾರಿಸುವ ಗೋಜಿಗೇ ಹೋಗಲಿಲ್ಲ. ಉಗ್ರ ಪ್ರತಾಪಿ ಶಾಸಕ ಸುನಿಲ್‌ಕುಮಾರನೂ ಆನಂತರ ದನಕಳ್ಳರಿಂದ ಮಾಮೂಲು ಫಿಕ್ಸ್ ಮಾಡುವುದರಲ್ಲಿ ಬ್ಯುಸಿಯಾಗಿ ಹಳೆಯದನ್ನು ಮರೆತರು. ಒಮ್ಮೆ ವಿಧಾನಸಭೆಯಲ್ಲಿ ಸಿಓಡಿ ತನಿಖೆ ಮಾಡುವಂತೆ ಕಿರುಚಾಡಿ ಸುದ್ದಿ ಮಾಡಿದ್ದು ಬಿಟ್ಟರೆ, ಈತನಿಗೆ ಆನಂತರ ದನಕಳ್ಳರನ್ನು ಹಿಡಿಯುವುದರಲ್ಲಿ ಇದ್ದ ಕಾಳಜಿ ಈ ಅಮಾಯಕ ಹೆಣ್ಣುಮಗಳ ಕೊಲೆ ಗಡುಕರ ತನಿಖೆ ಬಗ್ಗೆ ಇರಲಿಲ್ಲ. ಕೊನೆಗೆ ಈ ಪ್ರಕರಣ ಸಿಓಡಿ ತನಿಖೆಗೆ ಒಪ್ಪಿಸಿದ್ದೇ ಎಲ್ಲರೂ ಮರೆತೇಬಿಟ್ಟರು.



ಸುಚೇತಾ

ಸಿಓಡಿಯವರು ಕೈ ಹಾಕಿದರೆ ಪಾತಕಿಗಳಿಗೆ ಗ್ರಹಚಾರ ಖಂಡಿತ ಅನ್ನುವ ಭ್ರಮೆ ಮತ್ತು ನಂಬಿಕೆ ಕರಾವಳಿಯ ಜನತೆಯಲ್ಲಿ ಈ ಹಿಂದೆ ಮನೆ ಮಾಡಿತ್ತು. ಆದರೆ ಯಾವಾಗ ಭಾರೀ ಪ್ರಚಾರ ಮತ್ತು ಪ್ರತಿಭಟನೆ ನಡುವೆ ರಾಜಕೀಯ ಒತ್ತಡದಿಂದ ಸಿಓಡಿ ಕೈಗೆತ್ತ ಪುತ್ತೂರಿನ ಪುತ್ತೋಳಿ ಕೊಲೆ ಪ್ರಕರಣ, ಬೆಳ್ತಂಗಡಿಯ ಅಂಬಂಬೆ ಸುಜಾತ ಕೊಲೆ ಕೇಸು, ಸಿದ್ದಕಟ್ಟೆ ಭಾರತಿ ಕೊಲೆ ಕೇಸು ಹೀಗೆ ಸಾಲುಸಾಲು ಕೊಲೆ ಪ್ರಕರಣಗಳು ಪತ್ತೆಯಾಗದೇ ಮೂಲೆ ಗುಂಪಾದಾಗ ಸಿಓಡಿ ಮೇಲಿನ ಜನರ ನಂಬಿಕೆ ಕರಗತೊಡಗಿತು. ಸಿಓಡಿ ಅಂದರೆ ಅಲ್ಲಿಗೆ ಫೈಲ್ ಕ್ಲೋಸ್ ಆದಂತೆ ಎನ್ನುವುದು ಇದೀಗ ಸುಚೇತಾ ಕೊಲೆ ಪ್ರಕರಣದಲ್ಲಿ ಇನ್ನಷ್ಟು ಸ್ಪಷ್ಟವಾಗಿದೆ.

ಈ ಮೇಲೆ ತಿಳಿಸಿದ ಪ್ರಕರಣಗಳಲ್ಲಿ ಭಾರೀ ತನಿಖೆಯ ಪೋಸಿನಲ್ಲಿ ಮಂಗಳೂರಿಗೆ ಬರುವುದೆಂದರೆ ಸಿಓಡಿ ಪೊಲೀಸರಿಗೆ ಅದೊಂದು ತೀರ್ಥಯಾತ್ರೆಯಿದ್ದಂತೆ. ಹೆಂಡತಿ-ಮಕ್ಕಳು ಪರಿವಾರ ಸಮೇತ ಬೆಂಗಳೂರಿನಿಂದ ಹೊರಡುವ ಸಿಓಡಿ ಅಧಿಕಾರಿಗಳು, ಆರೋಪಿಗಳಿಗೇ ಫೋನಾಯಿಸಿ ವಾಸ್ತವ್ಯಕ್ಕೆ ಸೂಕ್ತ ವ್ಯವಸ್ಥೆ ಮಾಡಿಸಿಕೊಳ್ಳುತ್ತಾರೆ. ಅವರು ಅರ್ಪಿಸುವ ಆದರ ಆತಿಥ್ಯದ ನಡುವೆ ತನಿಖೆಯ ರಿಪೋರ್ಟು ರೆಡಿಯಾಗುತ್ತದೆ. ಬೆಂಗಳೂರು ಬಿಡುತ್ತಲೇ ಧರ್ಮಸ್ಥಳ, ಸುಬ್ರಹ್ಮಣ್ಯ, ಉಡುಪಿಗಳಿಗೆ ಹೋಗುವ ವೇಳೆ ನಿಗದಿಯಾಗುವುದರಿಂದ, ತನಿಖೆಗಿಂತ ಸಕಾಲದಲ್ಲಿ ದೇವರ ದರ್ಶನ ಪಡೆಯುವ ಅವಸರ ಸಿಓಡಿ ಅಧಿಕಾರಿಗಳಿಗಿರುತ್ತದೆ. ಹೀಗೆ ಆರೋಪಿಗಳ ಆತಿಥ್ಯ ಪಡೆದು ಸುಬ್ರಹ್ಮಣ್ಯ-ಧರ್ಮಸ್ಥಳಗಳಲ್ಲಿ ಪಾಪ ನಿವೇದನೆ ಮಾಡಿಕೊಳ್ಳುವ ಸಿಓಡಿ ಪೊಲೀಸರ ತನಿಖೆಯಿಂದ ಏನಾದರೂ ನಿರೀಕ್ಷಿಸಲು ಸಾಧ್ಯವೇ? ಅದ್ದರಿಂದಲೇ ಸುಚೇತಾ ಕೊಲೆ ಪ್ರಕರಣದಲ್ಲಿ ಹತ್ತರೊಟ್ಟಿಗೆ ಹನ್ನೊಂದಾಗಿ 'ಸಿ' ರಿಪೋರ್ಟ್ ಬಿದ್ದಿದ್ದು ಇದೆಲ್ಲಾ ನೋಡಿದಾಗ ಕಿಂಚಿತ್ತಾದರೂ ನ್ಯಾಯ ನಿರೀಕ್ಷಿಸು [illegible] ಸಿಓಡಿ ಪೊಲೀಸರ ತೀರ್ಥಯಾತ್ರೆ, ತನಿಖೆಯಿಂದ [illegible] ಲೇಸು ಎಂದಷ್ಟೇ ಈಗ ಹೇಳಬಹುದಾಗಿದೆ.

ಆನ್‌ಲೈನ್ ಲಾಟರಿ:
ಪಾಪರ್ ಆದ ಗುಲ್ಬರ್ಗಾ ಜನತೆ

ಮಟ್ಕಾ ಹಾಗೂ ಬೋಗಸ್‌ಲಾಟರಿಗಳ ಹಾವಳಿಯಿಂದ ತತ್ತರಿಸಿಹೋಗಿರುವ ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳಿಗೆ ಆನ್‌ಲೈನ್ ಲಾಟರಿ ಎಂಬ ಹೆಮ್ಮಾರಿ ಗಂಟುಬಿದ್ದಿದೆ. ಬೀದರ್ ಜಿಲ್ಲೆಯ ಐದು ತಾಲ್ಲೂಕ್ ಹಾಗೂ ಗುಲ್ಬರ್ಗಾ ಜಿಲ್ಲೆಯ ಹತ್ತು ತಾಲ್ಲೂಕು ಸೇರಿ ಕನಿಷ್ಠ ಅಂದರೂ ಸಾವಿರಕ್ಕೂ ಹೆಚ್ಚು ಆನ್‌ಲೈನ್ ಲಾಟರಿ ಕೇಂದ್ರಗಳು ಆರಂಭವಾಗಿವೆ. ಇದರಿಂದಾಗಿ ನಿರುದ್ಯೋಗಿ ಯುವಕರು, ಹಳ್ಳಿಯ ರೈತರು, ಕಾಲೇಜು ವಿದ್ಯಾರ್ಥಿಗಳು ಹಾದಿ ತಪ್ಪುತ್ತಿದ್ದಾರೆ. ಅಲ್ಲದೆ ಲಾಟರಿ ಕೇಂದ್ರಕ್ಕೆ ತೆರಳಿದವರೆಲ್ಲರ ಬದುಕು ಈಗ ಬೀದಿಗೆ ಬಂದಿದೆ. ಈ ಜಿಲ್ಲೆಗಳಲ್ಲಿ ಕೆಲವರು ಮನೆ-ಮಠ ಮಾರಿಕೊಂಡು ಮಾನಸಿಕ ಅಸ್ವಸ್ಥರಾಗಿದ್ದಾರೆ. ಎರಡು ಜಿಲ್ಲೆಗಳಲ್ಲಿ ಈಗಾಗಲೇ ನಾಲ್ಕೈದು ಜನ ಪ್ರಾಣ ಕಳೆದುಕೊಂಡಿದ್ದಾರೆ.

ಸರ್ಕಾರ ಆನ್‌ಲೈನ್ ಲಾಟರಿಗೆ ಹಸಿರು ನಿಶಾನೆ ತೋರಿಸಿದ ಬೆನ್ನಲ್ಲೇ ಎರಡು ಜಿಲ್ಲೆಯ ವಿವಿಧ ತಾಲ್ಲೂಕು ಹಾಗೂ ನಗರದ ವಿವಿಧ ಗಲ್ಲಿಗಲ್ಲಿಗಳಲ್ಲಿ ಆನ್‌ಲೈನ್ ಲಾಟರಿ ಕೇಂದ್ರಗಳು ನಾಯಿಕೊಡೆಗಳಂತೆ ಬೆಳೆದಿವೆ. ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8.30 ರವರೆಗೆ ಗಡಿಯಾರದ ಮುಳ್ಳು ತಿರುಗಿದಂತೆ ಒಂದು ಗಂಟೆ, ಅರ್ಧ ಗಂಟೆ, 15 ನಿಮಿಷಕ್ಕೊಂದು ಡ್ರಾ ಆಗುವ ಈ ಲಾಟರಿ ಕೇಂದ್ರಗಳ ಮುಂದೆ ಬೆಳಗಾಗುತ್ತಲೇ ದಿನಗೂಲಿಗಳು, ಬಡವರು, ನಿರುದ್ಯೋಗಿಗಳು, ಹಮಾಲಿಗಳು, ರಿಕ್ಷಾವಾಲಾಗಳು, ಕಾಲೇಜು ವಿದ್ಯಾರ್ಥಿಗಳ ದಂಡು ಜಮಾಯಿಸುತ್ತದೆ. ಹಿಂದಿನ ದಿನ ಕೈಕೊಟ್ಟ ಅಂಕಿ ಕುರಿತು ಮತ್ತವರ ರೂಟ್ ಬಗ್ಗೆ ಚರ್ಚಿಸಿ ಅದನ್ನು follow ಮಾಡುತ್ತಾ ಸಮಯ ಹಾಗೂ ಹಣ ಹಾಳು ಮಾಡಿಕೊಳ್ಳುತ್ತಿದ್ದಾರೆ.

ನೂರರಲ್ಲಿ ಒಬ್ಬರಿಗೆ ಒಲಿದ ಅದೃಷ್ಟ ಕುರಿತು ಮಾತನಾಡುತ್ತ ಆ ಅಂಕಿಸಂಖ್ಯೆಗಳ ಸುತ್ತಲೂ ಆಟ ಆರಂಭಿಸುತ್ತಾರೆ. ಇವರ ದಿನಚರಿ ಮುಗಿಯುವಷ್ಟರಲ್ಲಿ ಜೇಬು ಖಾಲಿಯಾಗಿರುತ್ತದೆ. ಇದರಿಂದಾಗಿ ಪರಿಚಯಸ್ಥರನ್ನು ಕಾಡಿ-ಬೇಡಿ ಊರಿಗೆ ಹೋಗಲು ಖರ್ಚಿಗೆ ತೆಗೆದುಕೊಂಡು ಮನೆ ಸೇರುತ್ತಾರೆ. ಅಂತೆಯೇ ಲಾಟರಿ ಕೇಂದ್ರಗಳು ಇದೀಗ ಅಡ್ಡಾದಿಗಳ ಅಡ್ಡೆಗಳಾಗಿ ಪರಿಣಮಿಸಿದೆ.

ಬೀದರ್ ಜಿಲ್ಲೆಯ ಹುಮನಾಬಾದ್, ಭಾಲ್ಕಿ, ಬಸವಕಲ್ಯಾಣ, ಔರಾದ್, ಗುಲ್ಬರ್ಗಾ ಜಿಲ್ಲೆಯ ಶಹಾಪುರ, ಸುರಪುರ, ಅಫಜ್‌ಲ್ಪುರ, ಆಳಂದ, ಜೇವರ್ಗಿ ಮುಂತಾದೆಡೆಗಳಲ್ಲಿ ಫ್ಲೇವಿನ್ 'ರಾಜಶ್ರೀ' ಲಕ್ಕಿ ಲಾಟ್ ಎಂಬ ಈ ಮೂರು ನಮೂನೆಯ ಲಾಟರಿಗಳು ಲಭ್ಯವಿದ್ದು ಪ್ರತಿಯೊಂದು ಕೇಂದ್ರದಿಂದ ದಿನಂಪ್ರತಿ 20 ರಿಂದ 25 ಸಾವಿರ ರೂ. ಕಲೆಕ್ಷನ್ ಆಗುತ್ತಿದೆ. ಒಂದೊಂದು ತಾಲ್ಲೂಕಿನ ಎಲ್ಲ ಲಾಟರಿ ಕೇಂದ್ರಗಳಿಂದ ಒಂದು ದಿನಕ್ಕೆ 3 ಲಕ್ಷ ಹಣ ಬಂದರೆ, ಒಂದೊಂದು ದಿನಕ್ಕೆ ಒಂದೊಂದು ಜಿಲ್ಲೆಯಿಂದ 30 ರಿಂದ 50 ಲಕ್ಷದವರೆಗೆ ಜಮಾ ಆಗುತ್ತದೆ.



ಲಾಟರಿಯಲ್ಲಿ ಮಗ್ನರಾಗಿರುವ ಗುಲ್ಬರ್ಗಾ ಜನತೆ

ಈ ಎರಡು ಜಿಲ್ಲೆಗಳಲ್ಲಿ ನಡೆಯುವ ಲಾಟರಿ ವ್ಯವಹಾರವನ್ನು ಲೆಕ್ಕ ಹಾಕುತ್ತಾ ಹೋದರೆ ಒಂದು ನಿಮಿಷಕ್ಕೆ ಹತ್ತು ಸಾವಿರ ರೂಪಾಯಿ ಹಾಗೂ ಒಂದು ಗಂಟೆಗೆ 5 ಲಕ್ಷ ರೂಪಾಯಿ ಜಮಾ ಆಗುತ್ತಿದೆ. ದಿಢೀರ್ ಶ್ರೀಮಂತರಾಗುವ ಆಸೆಯಿಂದ ಮಧ್ಯಮ ವರ್ಗದ ಜನರು ಈ ಲಾಟರಿ ಕೇಂದ್ರಗಳಿಗೆ ಮಾರು ಹೋಗುತ್ತಿದ್ದು ಅದರ ಜೊತೆಗೆ ಅಲ್ಪವಿರಾಮ ಹಾಕುತ್ತಿದ್ದಾರೆ. ಮೊಬೈಲ್ ಬಳಕೆಯಿಂದ ನಗರದಲ್ಲಿ ಎಸ್‌ಟಿಡಿ ಬೂತ್‌ಗಳು ಒಂದೊಂದು ಮರೆಯಾಗುತ್ತಿದ್ದಂತೆ ಆ ಜಾಗದಲ್ಲಿ ಈ ಲಾಟರಿ ಕೇಂದ್ರಗಳು ಹುಟ್ಟಿಕೊಳ್ಳುತ್ತಿವೆ. ಮಟ್ಕಾ ದಂಧೆಗಿಂತ ರಾಜಾರೋಷವಾಗಿ ಲಾಟರಿ ಕೇಂದ್ರಗಳು ತಮ್ಮ ವ್ಯವಹಾರ ನಡೆಸುತ್ತಿವೆ. ಮಟ್ಕಾದ ರಿಸಲ್ಟ್ ಒಂದು ದಿನದಲ್ಲಿ ಒಂದು ಬಾರಿ ಬರುತ್ತಿದ್ದರೆ, ಈ ಲಾಟರಿ ಡ್ರಾಗಳ ಫಲಿತಾಂಶ 15 ನಿಮಿಷಕ್ಕೊಮ್ಮೆ ಬಂದು ಜನತೆಯನ್ನು ಬರಬಾದಾ ಮಾಡುತ್ತಿದೆ.

ಇಲ್ಲಿನ ಬಹುಪಾಲು ಲಾಟರಿ ಕೇಂದ್ರಗಳು ಬಲಿಷ್ಠ ರಾಜಕಾರಣಿಗಳ ಬಲಗೈ ಬಂಟರ ಕಪಿಮುಷ್ಠಿ ಯಲ್ಲಿವೆ. ಸಂಜೆಯಾಗುತ್ತಿದ್ದಂತೆ ಎಲ್ಲಾ ಆನ್‌ಲೈನ್ ಲಾಟರಿ ಕೇಂದ್ರಗಳಲ್ಲಿ ಜನ ತುಂಬಿ ತುಳುಕಾಡುತ್ತಾರೆ. ಮನೆಯಿಂದ ತಂದ ಹಣ ಖಾಲಿಯಾದಾಗ ಉದ್ರಿ ಕೇಳುವ ಜನರು ಆಗಾಗ ಮಾರಾಮಾರಿ ನಡೆಸಿರುತ್ತಾರೆ.

ಬೀದರ್ ಜಿಲ್ಲೆಯ ಹುಮನಾಬಾದ್ ಗುಲ್ಬರ್ಗಾ ಜಿಲ್ಲೆಯ ಶಹಾಪುರಗಳಲ್ಲಿ ಏನಿಲ್ಲವೆಂದರೂ ನೂರಕ್ಕೂ ಹೆಚ್ಚು ಲಾಟರಿ ಕೇಂದ್ರಗಳು ತೆರೆದುಕೊಂಡಿವೆ. ಇಲ್ಲಿ ವಿದ್ಯಾವಂತರರನ್ನು ಒಳಗೊಂಡಂತೆ ಬಹುಪಾಲು ಮಧ್ಯಮ ವರ್ಗದವರು ಆನ್‌ಲೈನ್ ಲಾಟರಿ ಜಾಲಕ್ಕೆ ಬಿದ್ದಿದ್ದಾರೆ. ದಿನಕ್ಕೆ ಒಂದರಿಂದ ಎರಡು ಲಕ್ಷ ಕಮಾಯಿಸುವ ಈ ತಾಲ್ಲೂಕುಗಳಲ್ಲಿನ ಲಾಟರಿ ಕೇಂದ್ರಗಳು ವಿಶೇಷವಾಗಿ ಶುಕ್ರವಾರ ಮತ್ತು ಶನಿವಾರದಂದು ಹೌಸ್‌ಫುಲ್ ಆಗಿರುತ್ತವೆ. ಯಾಕೆಂದರೆ ಆ ದಿನ ವಾರದ ಸಂತೆ ಇರುವುದರಿಂದ ಜನರ ಜೇಬಿನಲ್ಲಿ ದುಡಿದ ಕೂಲಿ ಹಣ ಭರ್ತಿಯಾಗಿರುತ್ತವೆ. ಸಂಜೆಯ ನೆಪದಲ್ಲಿ ನಗರಕ್ಕೆ ಬರುವ ಕೆಲ ಗ್ರಾಮಾಂತರ ಜನರು ಆ ದಿನಗಳಲ್ಲಿ ನೂರಾರು ರೂಪಾಯಿ ಆನ್‌ಲೈನ್ ಲಾಟರಿಗೆ ಜಮಾ ಮಾಡಿ ಹೋಗುವ ಪರಿಪಾಠವಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಪ್ರದೇಶ ಹೊಂದಿದ ಈ ಭಾಗದಲ್ಲಿ ಜನರ ಕೈಯಲ್ಲಿ ಸ್ವಲ್ಪ ಹಣ



ಆನ್‌ಲೈನ್ ಲಾಟರಿ ವಿರುದ್ಧ ಪ್ರತಿಭಟಿಸುತ್ತಿರುವ ರಕ್ಷಣಾ ವೇದಿಕೆ

ಓಡಾಡುತ್ತಿರುವುದರಿಂದ ಸುರಪುರ ಹಾಗೂ ಜೇವರ್ಗಿಗಳಲ್ಲಿ ಸಂಜೆಯಾಗುತ್ತಿದ್ದಂತೆ ಇಲ್ಲಿನ ಕೂಲಿ-ನಾಲಿ ಮಾಡುವ ಜನರು ಲಾಟರಿ ಕೇಂದ್ರಗಳತ್ತ ಪ್ರಯಾಣ ಬೆಳೆಸುತ್ತಿದ್ದಾರೆ. ಈಗಾಗಲೇ ಎರಡೂ ಜಿಲ್ಲೆಯ ವಿವಿಧ ತಾಲ್ಲೂಕಿನ ಜನ ಈ ಹಾವಳಿಯಿಂದ ತತ್ತರಿಸಿಹೋಗಿದ್ದಾರೆ. ಅನೇಕ ಕುಟುಂಬಗಳು ದಿವಾಳಿಯೆದ್ದಿದೆ. ಇದ್ದಬದ್ದ ಆಸ್ತಿಯನ್ನೆಲ್ಲ ಮಾರಿಕೊಂಡಿದ್ದಾರೆ. ಇನ್ನು ಕೆಲವರು ಸಾಲ ಮಾಡಿ ನಾಪತ್ತೆಯಾಗಿದ್ದಾರೆ.

ಈ ಲಾಟರಿ ಆರಂಭವಾದಾಗಿನಿಂದ ಅನೇಕರು ತಮ್ಮ ಪ್ರಾಣಕ್ಕೆ ಸಂಚಕಾರ ತಂದುಕೊಂಡಿದ್ದರೆ. ಗುಲ್ಬರ್ಗಾ ನಗರದ ಶಹಾಬಜಾರ್ ಬಡಾವಣೆಯ ಮಲ್ಲಿಕಾರ್ಜುನ ಬಸಯ್ಯ ಮಠಪತಿ ಎಂಬ 25 ವಯಸ್ಸಿನ ಯುವಕ, ಈ ಲಾಟರಿಗೆ ಬೆನ್ನುಬಿದ್ದು ಸಾಲ ಮಾಡಿಕೊಂಡು ಸಾಲ ತೀರಿಸಲಾಗದೇ ಫೆ. 20 ರಂದು ಭೀಮಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈಗ್ಗೆ ಎರಡು ತಿಂಗಳ ಹಿಂದೆ ಲಾಟರಿ ಆಡಿ 20 ಸಾವಿರ ರೂಪಾಯಿ ಸಾಲ ಮಾಡಿಕೊಂಡಿದ್ದನಾದರೂ ಲಾಟರಿಯಿಂದ ಲಾಭ ಮಾತ್ರ ಈತನಿಗಾಗಿರಲಿಲ್ಲ.

ಆದರೂ ಲಾಟರಿ ಚಟದಿಂದ ಈತ ಫೆ. 19 ರಂದು ಒಂದೇ ದಿನ 12,300 ರೂ. ಲಾಟರಿ ಆಡಿದ. ಆತನ ದುರದೃಷ್ಟವೆಂಬಂತೆ ಅಲ್ಲೂ ಯಶಸ್ವಿಯಾಗಲಿಲ್ಲ. ಹಣ ಕೊಡುವುದಾಗಿ ಕರೆದುಕೊಂಡು ಬಂದ ಅಳಿಯನ ಸಮ್ಮುಖದಲ್ಲೇ ಜೇವರ್ಗಿಗೆ ಬಂದು ಮತ್ತೆ 1500 ರೂಪಾಯಿ ಲಾಟರಿ ಆಡಿದ್ದಾನೆ. ಅಲ್ಲೂ ಸೋತು ಹೋದಾಗ ಗುಲ್ಬರ್ಗಾದಲ್ಲಿಯೇ ಹಣ ತೀರಿಸುತ್ತೇನೆ ಎಂದು ಹೇಳಿ ಅಳಿಯನೊಂದಿಗೆ ಮರಳಿ ಗುಲ್ಬರ್ಗಾ ಬಸ್ ಹತ್ತಿ ಕುಳಿತಿದ್ದಾನೆ. ಆದರೆ ಮಾರ್ಗ ಮಧ್ಯದ ಕಟ್ಟಿ ಸಂಗಾವಿಯಲ್ಲಿ ಬಸ್ ನಿಂತಾಗ ಬಹಿರ್ದೆಸೆಗೆ ಹೋಗಬೇಕಾಗಿದೆ ಎಂದು ಕೆಳಗಿಳಿದು ಹೋಗಿ ಬ್ರಿಜ್ ಮೇಲಿಂದ ಹಾರಿ ಪ್ರಾಣ ಕಳೆದುಕೊಂಡಿದ್ದಾನೆ.

ದಿನವೊಂದಕ್ಕೆ 30 ರಿಂದ 40 ಲಕ್ಷ ರೂ. ಸುಲಿಯುವ ಈ ಸರ್ಕಾರಿ ಮಟ್ಕಾ ಎನ್ನುವ ಆನ್‌ಲೈನ್ ಲಾಟರಿ ಎರಡೂ ಜಿಲ್ಲೆಗಳಲ್ಲಿನ ಸಾವಿರಾರು ಕುಟುಂಬಗಳ ನರಳಾಟಕ್ಕೆ ಕಾರಣವಾಗಿದೆ. ಇಷ್ಟು ಸಾಲದೆಂಬಂತೆ ಹಳ್ಳಿಗಾಡಿನಿಂದ ಬರುವ ವಿದ್ಯಾರ್ಥಿಗಳನ್ನು ಲಾಟರಿ ಕೇಂದ್ರಗಳು ತಮ್ಮತ್ತ ಸೆಳೆಯುತ್ತವೆ. ಇದರಿಂದಾಗಿ ವಿದ್ಯಾರ್ಥಿಗಳ ಓದು ಕೂಡ ಲಾಟರಿ ದಂಧೆಯಿಂದ ಹಾಳಾಗ ತೊಡಗಿದೆ. ಹೀಗೆ ಬೀದರ್ ಹಾಗೂ ಗುಲ್ಬರ್ಗಾ ಜಿಲ್ಲೆಯ ಒಟ್ಟು 15 ತಾಲ್ಲೂಕಿನಲ್ಲಿ ಲಾಟರಿ ದಂಧೆ ಬಡವರ ಬದುಕನ್ನು ಬರ್ಬಾದ್ ಮಾಡುತ್ತಿದೆ. ಈ ಲಾಟರಿ ಹಾವಳಿ ನಿಷೇಧಿಸುವಂತೆ ಜಿಲ್ಲಾ ರಕ್ಷಣಾ ವೇದಿಕೆ, ಕನ್ನಡ ಸೈನ್ಯ ಮುಂತಾದ ಸಂಘಟನೆಗಳು ಲಾಟರಿ ವಿರುದ್ಧ ಸಮರ ಸಾರಿ ಸುಮ್ಮನಾಗಿ ಬಿಟ್ಟಿವೆ. ರೈತರ ಸಾಲಮನ್ನಾ ಮಾಡುತ್ತೇವೆ ಎಂದು ಹೇಳುವ ಈ ಕೋಜಾ ಸರ್ಕಾರ ಜನರನ್ನು ದಿನಂಪ್ರತಿ ಸಾಲ ಮಾಡಲು ಹಚ್ಚುತ್ತಿದೆ. ಒಂದು ಅಂದಾಜಿನ ಪ್ರಕಾರ ರೈತರ ಸಾಲಮನ್ನಾ ಮಾಡುವುದಕ್ಕಾಗಿಯೇ ಈ ಆನ್‌ಲೈನ್ ಲಾಟರಿಗಳ ಜೊತೆ ಒಪ್ಪಂದ ಮಾಡಿಕೊಂಡು ಅವುಗಳಿಗೆ ಅನುಮತಿ ನೀಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಇದು ಹೀಗೆ ಮುಂದುವರಿದರೆ ಮುಂಬರುವ ದಿನಗಳಲ್ಲಿ ರೈತರ ಸರಣಿ ಆತ್ಮಹತ್ಯೆಗಳಂತೆ ದುಡಿಯುವ ವರ್ಗ, ನಿರುದ್ಯೋಗಿಗಳ, ವಿದ್ಯಾರ್ಥಿಗಳ ಬಡವರ ಸರಣಿ ಹತ್ಯೆಗಳು ಆನ್‌ಲೈನ್ ಹೆಮ್ಮಾರಿಗೆ ಬಲಿಯಾಗುವುದರಲ್ಲಿ ಸಂಶಯವಿಲ್ಲ.

-ಶಿವರಂಜನ್ ಸತ್ಯಂಪೇಟೆ

ಚಿತ್ರದುರ್ಗ: ನರ್ಸಿಂಗ್ ಕಾಲೇಜುಗಳ ಕಾಪಿ ದಂಧೆ

ಚಿತ್ರದುರ್ಗದ ಖಾಸಗಿ ನರ್ಸಿಂಗ್ ಕಾಲೇಜು ಮಾಫಿಯಾ ಅದೆಷ್ಟು ಮರ್ಯಾದೆಗೆಟ್ಟಿದೆಯೆಂದರೆ ಹಣವೊಂದಿದ್ದರೆ ಸರ್ಟಿಫಿಕೇಟುಗಳನ್ನು ಬಿಕರಿ ಮಾಡಲೂ ಹಿಂದೆಮುಂದೆ ನೋಡುತ್ತಿಲ್ಲ. ಜಿಲ್ಲೆಯಲ್ಲಿ 20 ಕ್ಕೂ ಹೆಚ್ಚು ಖಾಸಗಿ ನರ್ಸಿಂಗ್ ಕಾಲೇಜುಗಳಿದ್ದರೂ ಅಲ್ಲಿನ ಮೂಲಭೂತ ಸೌಕರ್ಯಗಳು, ಬೋಧನಾಮಟ್ಟ ಅತ್ಯಂತ ಕಳಪೆಯಾಗಿದೆ. ಈ ನರ್ಸಿಂಗ್ ಕಾಲೇಜು ದಂಧೆ ಎಂಬುದು ರಾಜಕೀಯ ಪ್ರಭಾವಿಗಳಿಗೆ, ಹಣವಂತ ವೈದ್ಯರುಗಳಿಗೆ, ಕ್ಯಾಪಿಟೇಷನ್ ಕುಳಗಳಿಗೆ ಭರ್ಜರಿ ಆದಾಯ ತಂದುಕೊಡುವ ಮೂಲವಾಗಿದೆ.


ಪ್ರವೇಶಾತಿಯಲ್ಲಿ ಶೇ. 60ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಹೊರರಾಜ್ಯದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಪ್ರತಿ ಸೀಟಿಗೆ ಒಂದೂವರೆಯಿಂದ ಎರಡು ಲಕ್ಷದವರೆಗೆ ಡೊನೇಷನ್ ಕೀಳುತ್ತಾರೆ. ಇದರ ಜೊತೆಗೆ ಕ್ಲಿನಿಕಲ್, ಕಮ್ಯೂನಿಟಿ ವಿಸಿಟಿಂಗ್, ಲೈಬ್ರರಿ ನಿರ್ವಹಣೆ... ಹೀಗೆ ಎಂತೆಂತದೋ ಬಾಬ್ತುಗಳನ್ನು ತೋರಿಸಿ ವರ್ಷಪೂರ್ತಿ ವಸೂಲಾತಿ ಮಾಡುತ್ತಾರೆ. ನಾಯಿಕೊಡೆಗಳಂತೆ ಮೇಲೆದ್ದಿರುವ ಈ ಖಾಸಗಿ ನರ್ಸಿಂಗ್ ಕಾಲೇಜುಗಳ ಒಳಾದಳಿತವೆಲ್ಲಾ ಗುಪ್ ಗುಪ್, ತಮ್ಮ ಕ್ಯಾಪಿಟೇಷನ್ ದಂಧೆಯ ರಕ್ಷಣೆಗಾಗಿ ಈ ಕುಳಗಳು ಎಸಗುತ್ತಿರುವ ಅನ್ಯಾಯ-ವಂಚನೆಗಳ ಸರಮಾಲೆಗೆ ಕಡಿವಾಣವೇ ಇಲ್ಲದಂತಾಗಿದೆ.

ಸದ್ಯಕ್ಕೆ ಈಗ ಚಿತ್ರದುರ್ಗದ ಖಾಸಗಿ ನರ್ಸಿಂಗ್ ಕಾಲೇಜುಗಳು ತಮ್ಮ ಅಸ್ತಿತ್ವಕ್ಕಾಗಿ, ಡೊನೇಷನ್ ರೇಟು ಹೆಚ್ಚಿಸಿಕೊಳ್ಳಲಿಕ್ಕಾಗಿ ಆಶ್ರಯಿಸಿರುವುದು ಪರೀಕ್ಷಾ ಫಲಿತಾಂಶಗಳನ್ನು. ಫಲಿತಾಂಶದ ಪ್ರಮಾಣವನ್ನು ತೋರಿಸಿಯೇ ಹೊರರಾಜ್ಯದ ವಿದ್ಯಾರ್ಥಿಗಳನ್ನು ಯಾಮಾರಿಸಿ, ಲಕ್ಷಾಂತರ ವಸೂಲಿ ಮಾಡಿ ಪ್ರವೇಶಾತಿ ಮಾಡಿಕೊಳ್ಳಲಾಗುತ್ತಿದೆ.

ಉತ್ತಮ ಬೋಧಕರೂ ಇಲ್ಲದೇ, ಅಗತ್ಯ ಮೂಲಭೂತ ಸೌಕರ್ಯಗಳೂ ಇಲ್ಲದೇ ಉತ್ತಮ ಫಲಿತಾಂಶವನ್ನು ನಿರೀಕ್ಷೆ ಮಾಡುವುದಾ ದರೂ ಹೇಗೆ? ಲಕ್ಷಾಂತರ ಡೊನೇಷನ್ ಕೊಟ್ಟ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವುದಾದರೂ ಹೇಗೆ? ಇದಕ್ಕೆ ಇಲ್ಲಿನ ಖಾಸಗಿ ನರ್ಸಿಂಗ್ ಕಾಲೇಜುಗಳು ಕಂಡುಕೊಂಡಿರುವ ಮಾರ್ಗವೆಂದರೆ ಸಾಮೂಹಿಕವಾಗಿ ಕಾಪಿ (mass copy) ಹೊಡೆಸುವುದು. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವಂತೆ ನೋಡಿಕೊಳ್ಳುವುದು. ಇದು ಕಳೆದ ಎರಡು ಮೂರು ವರ್ಷಗಳಿಂದಲೂ ಯಾವುದೇ ನಿಯಂತ್ರಣವಿಲ್ಲದೇ ನಡೆಯುತ್ತಿದೆ.

ಈಗ ಬರುವ ಫೆ. 28 ರ ಮಂಗಳವಾರದಿಂದ ನರ್ಸಿಂಗ್ ಪರೀಕ್ಷೆಗಳು ಆರಂಭವಾಗಲಿವೆ. ನರ್ಸಿಂಗ್ ವಿದ್ಯಾರ್ಥಿಗಳು ನಾಮುಂದು-ತಾಮುಂದು ಎಂಬಂತೆ ನರ್ಸಿಂಗ್ ಪಠ್ಯಪುಸ್ತಕಗಳು, ಗೈಡುಗಳ ಕಂತೆಗಟ್ಟಲೇ ಜೆರಾಕ್ಸ್ ಪ್ರತಿಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಚಿತ್ರದುರ್ಗದ ಜೆರಾಕ್ಸ್ ಸೆಂಟರುಗಳಿಗೀಗ ಸುಗ್ಗಿಯೋ ಸುಗ್ಗಿ. ಹಗಲು ರಾತ್ರಿಯೆನ್ನದೇ ನಿದ್ದೆಗೆಟ್ಟು ಜೆರಾಕ್ಸ್ ಮಾಡಿಕೊಡಲಾಗುತ್ತಿದೆ. ಒಂದೇ, ಎರಡೇ, ಸುಮಾರು ಇಪ್ಪತ್ತಕ್ಕೂ ಹೆಚ್ಚು ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳ ಪರೀಕ್ಷೆಗಾಗಿ ಜೆರಾಕ್ಸ್ ಪ್ರತಿಗಳು ಸಿದ್ಧವಾಗುತ್ತಿವೆ.

ಇದರಲ್ಲಿ ಯಾವ ರೀತಿಯ ಮುಚ್ಚು-ಮರೆಯಿಲ್ಲ. ವಿದ್ಯಾರ್ಥಿಗಳು ಬಹಿರಂಗವಾಗಿಯೇ ಈ ಕಾಪಿ ದಂಧೆಯನ್ನು ಸಮರ್ಥಿಸಿಕೊಂಡು ಮಾತನಾಡುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಡೊನೇಷನ್ ತೆಗೆದುಕೊಂಡಿದ್ದಾರೆ.



ಕಾಪಿ ದಂಧೆಯಲ್ಲಿ ತೊಡಗಿರುವ ನರ್ಸಿಂಗ್ ಕಾಲೇಜ್

ಕಾಲೇಜುಗಳಲ್ಲಿ ಪಾಠಗಳನ್ನು ಸರಿಯಾಗಿ ಮಾಡೋಲ್ಲ. ಇನ್ನು ಪ್ರಾಕ್ಟಿಕಲ್ಸ್ ಹೆಸರಿಗೆ ನಡೆದರೂ ಮಾರ್ಕ್ಸ್ ಎಲ್ಲಾ ಲೆಕ್ಚರರ್ಸ್ ಕೈನಲ್ಲೇ ಇರುತ್ತೆ. ಅದರ ಭಯ ಇಲ್ಲ. ಈ ಥಿಯರಿದೇ ದೊಡ್ಡ ಸಮಸ್ಯೆ. ಹಾಗಾಗಿ ಕಾಪಿ ಹೊಡೆಸುತ್ತಾರೆಂಬುದು ವಿದ್ಯಾರ್ಥಿಗಳ ಅಂಬೋಣ.

ಡೊನೇಷನ್ ಫೀಜುಗಳನ್ನು ಹೊರತುಪಡಿಸಿ ಪರೀಕ್ಷೆಯಲ್ಲಿ ಕಾಪಿ ಹೊಡೆಸಲಿಕ್ಕೆಂದೇ ಪ್ರತಿವಿದ್ಯಾರ್ಥಿಯಿಂದ ಕನಿಷ್ಠ ಎರಡು ಸಾವಿರದಿಂದ ಎಂಟತ್ತು ಸಾವಿರ ರೂಪಾಯಿಗಳವರೆಗೆ ಹಣ ವಸೂಲಿ ಮಾಡಲಾಗುತ್ತಿದೆ. ಲಕ್ಷಾಂತರ ಕೊಟ್ಟವರು, ಸಾವಿರಗಳನ್ನು ಕೊಡಲು ಹಿಂಜರಿಯುತ್ತಾರೆಯೇ? ಅದು ಎಕ್ಸಾಮಿನರುಗಳಿಗೆ ಕೊಡಲಿಕ್ಕೆಂದೇ ವಸೂಲಿ ಮಾಡುವಾಗ ದುಸರಾ ಮಾತೇ ಇರುವುದಿಲ್ಲ. ನರ್ಸಿಂಗ್ ಪರೀಕ್ಷೆಯಲ್ಲಿ ಕಾಪಿ ಮಾಡಿಸುವ ದಂಧೆಗೆ ಜಿಲ್ಲೆಯ ಯಾವ ಶಿಕ್ಷಣ ಸಂಸ್ಥೆಯೂ ಹೊರತಾಗಿಲ್ಲ. ಮೈಲಾರಲಿಂಗೇಶ್ವರ, ಶ್ರೀಕೃಷ್ಣ ಪಿವಿಎಸ್ ವಿವೇಕಾನಂದ, ಎಸ್.ಎಲ್.ವಿ. ಜಾಹ್ನವಿ, ಎಸ್.ಆರ್.ಇ. ಸೆಂಟ್ ಮೇರಿಸ್, ರಾಘವೇಂದ್ರ, ಪತಂಜಲಿ... ಸೇರಿದಂತೆ ಎಲ್ಲರೂ ಕಾಪಿ ದಂಧೆಕೋರರರೇ.


ಆರೋಗ್ಯ ಮಂತ್ರಿಗಳಿಗೇನಾದರೂ ನರ್ಸಿಂಗ್ ಶಿಕ್ಷಣದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕೆಂಬ ಕಾಳಜಿಯಿದ್ದರೆ ಈ ಕಾಪಿ ದಂಧೆಯ ನಿಯಂತ್ರಣಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲಿ ಎಕ್ಸಾಮಿನರುಗಳಾಗಿ ಬರುವವರೇ ಲಕ್ಷಾಂತರ ಹಣ ಬಾಚಿ ಕೊಂಡು ಬುಕ್ ಆಗುವುದರಿಂದ ಇದರ ಕಾವಲು ಮಾಡುವವರು ಯಾರು ಎಂಬ ಪ್ರಶ್ನೆ ಇದ್ದೇ ಇದೆ. ಇದು ಬೇಲಿಯೇ ಎದ್ದು ಹೊಲ ಮೇಯುವ ವಿದ್ಯಮಾನ. ಉನ್ನತ ಮಟ್ಟದಲ್ಲಿ ಯೋಜಿಸಿ-ನಿಯಂತ್ರಿಸದಿದ್ದಲ್ಲಿ ಇದನ್ನು ನಿಲ್ಲಿಸಲು ಸಾಧ್ಯವೇ ಇಲ್ಲ. ಅಂತದೊಂದು ಕಡಿವಾಣ ಹಾಕಿ ನೋಡಲಿ. ಕಳೆದ ಬಾರಿ ಬಂದಿರುವ ಫಲಿತಾಂಶಕ್ಕೂ ಈ ಬಾರಿ ಬರಲಿರುವ ಫಲಿತಾಂಶಕ್ಕೂ ತಾಳೆ ಮಾಡಿ ನೋಡಿದರೆ ಕಾಪಿ ದಂಧೆಯ ಗ್ರಾಫ್‌ನ ಏರಿಳಿತ ತನ್ನಿಂದ ತಾನೇ ಅನಾವರಣಗೊಳ್ಳುತ್ತದೆ. ಲಕ್ಷಾಂತರ ಡೊನೇಷನ್ ಪೀಕುವ ದಂಧೆಕೋರರರಿಗೂ ಬೋಧನೆ ಹಾಗೂ ಪ್ರಾಯೋಗಿಕ ಕಲಿಕೆಯಲ್ಲಿ ಗುಣಮಟ್ಟದ ಕಡೆ ಗಮನ ಹರಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.

-ವರದಿಗಾರ

ಹುಬ್ಬಳ್ಳಿ

ಪೊಲೀಸ್ ಠಾಣೆ ಜಾಗೆ ಮೇಲೆ ಮಾರ್ವಾಡಿ ಕಣ್ಣು!


ಲ್ಯಾಂಡ್ ಮಾಫಿಯಾ, ಮಾರ್ವಾಡಿ ಬುದ್ಧಿ, ...ರಣಿಗಳ ಅಭಯಹಸ್ತ... ಈ ಮೂರು ಒಟ್ಟು ...ದರೆ ಹಗರಣವೊಂದು ಸೃಷ್ಟಿಯಾಗುತ್ತದೆ ...ದಕ್ಕೆ ಹುಬ್ಬಳ್ಳಿಯ ಕೇಶ್ವಾಪೂರ ಪೊಲೀಸ್ ಠಾಣಾ ...ವೇ ಸಾಕ್ಷಿ. ಈ ಠಾಣೆಗೆಂದು ...ದ್ದ ಇವತ್ತು ಕಡಿಮೆ ಎಂದರೂ ...ಡು ಕೋಟಿ ರೂ. ಮೌಲ್ಯದ ...ಯನ್ನು ಕಬಳಿಸಲು ನಿಂತಿರುವ ಮಹೇಂದ್ರ ಸಿಂಘಿ ಎಂಬ ...ರ್ವಾಡಿ. ಅವನ ನೆರವಿಗೆ ...ರುವವರು ಕಾಂಗ್ರೆಸ್ ಪಕ್ಷದ ...ಯ ನಾಯಕ ಎಚ್. ಕೆ. ...ೀಲ್ ಮತು ಪ್ರಸ್ತುತ ಕೋ-ಜಾ ...ರದಲ್ಲಿ ಮಂತ್ರಿಯಾಗಿರುವ ...ರಾಜ್ ಹೊರಟ್ಟಿ.



ಈ ಹಗರಣದ ಕೇಂದ್ರಬಿಂದು ...ರುವ ಕೇಶ್ವಾಪೂರ ಪೊಲೀಸ್ ...ಗೆ ಒಂದು ಇತಿಹಾಸವೇ ಇದೆ. ಜ್ಯೋತಿ ಪ್ರಕಾಶ ...ರ್ಜಯವರು ಧಾರವಾಡ ಜಿಲ್ಲೆಯ ಎಸ್ಪಿ ಆಗಿದ್ದಾಗ ...ಬ್ಬಳ್ಳಿ ನಗರಕ್ಕೆ ಕೇಶ್ವಾಪೂರ, ನಾಗಶೆಟ್ಟಿಕೊಪ್ಪ ಬೆಂಗೇರಿ, ...ಪಾನಕೊಪ್ಪ ಸೇರಿದಂತೆ ಹಲವು ಗ್ರಾಮಗಳು ...ಡೆಗೊಂಡವು. ಈ ಹೆಚ್ಚಿನ ಜವಾಬ್ದಾರಿಯನ್ನು ...ರಲು ಕೇಶ್ವಾಪೂರ ಹಾಗೂ ಬೆಂಡಿಗೇರಿ ಪ್ರದೇಶ ...ಲ್ಲಿ ಪೊಲೀಸ್ ಠಾಣೆಗಳು ಬೇಕೆಂದು ಅನುಮತಿ ...ರಿ ಸರಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತು. ...ಮನವಿಗೆ ರಾಜ್ಯ ಸರ್ಕಾರವೂ ...ಗೆ ನೀಡಿತ್ತು.

...ಬೆಂಡಿಗೇರಿ ...ಲೀಸ್ ಠಾಣೆಗೆ ...ಹಾನಗರ ಪಾಲಿಕೆ ...ವ್ಯಾಯಾಮ ಶಾಲೆ ಹಾಗೂ ಲೈಬ್ರರಿ ಕಟ್ಟಡವನ್ನು ...ಟ್ಟಿ ಕೊಟ್ಟಿತು. ಆದರೆ ಕೇಶ್ವಾಪೂರ ಪೊಲೀಸ್ ...ಗೆ ಕಟ್ಟಡ ಇಲ್ಲದಿರುವುದೇ ಸಮಸ್ಯೆಯಾಗಿತ್ತು. ...ರೈತ ಸಂಘದ ಅಧ್ಯಕ್ಷರಾದ ಕಾಡಯ್ಯ ಹಿರೇಮಠರು ...ರ ವಿರೋಧದ ನಡುವೆಯೂ ನಾಗರಿಕರ ರಕ್ಷಣೆಗಾಗಿ ...ಲೀಸ್ ಠಾಣೆ ಇರಬೇಕೆಂದು ರೈತ ಸಂಘದ ...ರಿಯನ್ನೇ ಪೊಲೀಸ್ ಠಾಣೆಗೆ ನೀಡಿದ್ದರು.

...ಆನಂತರ ಕಾಡಯ್ಯ ಹಿರೇಮಠರು ನಗರಾಭಿವೃದ್ಧಿ ...ಡಳಿಯ ಛೇರಮನ್ ಆಗಿದ್ದಾಗ ಕೇಶ್ವಾಪೂರ ...ಲೀಸ್ ಠಾಣೆಯು ಸ್ವಂತ ಕಟ್ಟಡ ...ಂದಲಿ ಎಂದು ಕುಸುಗಲ್ಲರೋಡಗೇ ...ಂದಿಕೊಂಡಿರುವ ಸ್ಟೇಟ್ ಬ್ಯಾಂಕ್ ... ಇಂಡಿಯಾ ಪ್ರಧಾನ ಕಚೇರಿ ...ರ ಹತ್ತು ಗುಂಟೆ ಜಾಗೆಯನ್ನು ...ಜೂರು ಮಾಡಿದರು. ಆದರೆ ಈ ...ದ ಮೇಲೆ ಅರಿಹಂತ ಕೋ-ಆಪ ...ವ್ ಸೊಸೈಟಿ ತನ್ನ ಹಕ್ಕು ...ಸಲು ಮುಂದಾಗಿದ್ದರಿಂದ ನ್ಯಾಯಾ ...ಂದಲ್ಲಿ ಬಹಳ ವರ್ಷಗಳ ವ್ಯಾಜ್ಯ ...ಯಿತು.



ಮಹೇಂದ್ರ ಸಿಂಘಿ

ವ್ಯಾಜ್ಯದ ಹಿನ್ನೆಲೆ


...ಅರಿಹಂತ ಕೋ-ಆಪರೇಟಿವ್ ...ಸೈಟಿ ತನ್ನ ಸದಸ್ಯರಿಗಾಗಿ ಹುಬ್ಬಳ್ಳಿ- ಸೊಲ್ಲಾಪೂರ ...ಡಿಗೆ ಹೊಂದಿಕೊಂಡಿರುವ ಸರ್ವೆ ನಂ. 23/1/2 ...ೂ 23/1/3 ಗಳಲ್ಲಿ ಹೊಲಗಳನ್ನು ಖರೀದಿಸಿ, ...ಗಳನ್ನು ಅಭಿವೃದ್ಧಿ ಪಡಿಸಿ, ಸೈಟುಗಳಾಗಿ ತನ್ನ ...ಸ್ಯರಿಗೆ ಹಂಚಿತ್ತು, ಅದೇ ಸಮಯದಲ್ಲಿ ನಾಗರಿಕರ ...ಕೂಲಕ್ಕಾಗಿ, ಅಗತ್ಯ ಸೇವೆಗಳಿಗಾಗಿ ಎರಡು ಪ್ಲಾಟ್‌ಗಳನ್ನು (439/10/12) ಕಾಯ್ದಿರಿಸಲಾಗಿತ್ತು. ಆ ಜಾಗೆಗಳಲ್ಲಿ ಜನರಿಗೆ ಉಪಯುಕ್ತವಾಗಲು ಅಂಗಡಿ, ದವಾಖಾನೆ ಇತ್ಯಾದಿಗಳನ್ನು ಸ್ಥಾಪಿಸಲು ಅವುಗಳನ್ನು ಸೊಸೈಟಿಯು ನಗರಾಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿತ್ತು.

ಮಂಡಳಿಯು ಸದರಿ ಪ್ಲಾಟುಗಳನ್ನು ಕೇಶ್ವಾಪೂರ ಜನತೆಯ ಅನುಕೂಲಕ್ಕಾಗಿ ಪೊಲೀಸ್ ಠಾಣೆ ಸ್ಥಾಪಿಸಲು ಪೊಲೀಸ್ ಇಲಾಖೆಗೆ ನೀಡಿತು. ಆದರೆ ಇದನ್ನು ಪೊಲೀಸ್ ಠಾಣೆಗೆ ನೀಡಬಾರದೆಂದು ನಗರಾಭಿವೃದ್ಧಿ ಮಂಡಳಿಯ ವಿರುದ್ಧ ಅರಿಹಂತ ಸೊಸೈಟಿಯು ಹುಬ್ಬಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿತು. ಆಗ ನ್ಯಾಯಾಲಯವು ಅರಿಹಂತ ಕೋ -ಆಪರೇಟಿವ್ ಸೊಸೈಟಿ ಪರವಾಗಿ ತೀರ್ಪು ನೀಡಿತು. ಇದರ ವಿರುದ್ಧ 2000 ರಲ್ಲಿ ಸರ್ಕಾರ ಮೇಲ್ಮನವಿ ಸಲ್ಲಿಸಿತು. ಜನವರಿ 5, 2005 ರಂದು ತೀರ್ಪು ನೀಡಿದ ನ್ಯಾಯಾಲಯ ಸದರಿ ಪ್ಲಾಟುಗಳನ್ನು ಪೊಲೀಸ್ ಠಾಣೆಗೆ ಬಿಟ್ಟು ಕೊಡಬೇಕು ಎಂದಿತಲ್ಲದೆ "ಒಮ್ಮೆ ನಗರಾಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿದ ಜಾಗೆಯ ಮೇಲಿನ ಹಕ್ಕನ್ನು ಅರಿಹಂತ ಕೋ ಆಪರೇಟಿವ್ ಸೊಸೈಟಿ ಮತ್ತೆ ಪಡೆಯುವಂತಿಲ್ಲ" ಎಂದು ಹೇಳಿತು.

ಆದರೆ ಈ ಜಾಗೆಯನ್ನು ಕುರಿತು ನ್ಯಾಯಾಲಯದಲ್ಲಿ ಸರಕಾರ ಮತ್ತು ಅರಿಹಂತ ಸೊಸೈಟಿ ನಡುವೆ ವ್ಯಾಜ್ಯ ನಡೆಯುತ್ತಿದ್ದಾಗಲೇ ನಗರಾಭಿವೃದ್ಧಿ ಮಂಡಳಿಯು ಅದೇ ಜಾಗದಲ್ಲಿ ಸಂಘ, ಸಂಸ್ಥೆಗಳನ್ನು ಸ್ಥಾಪಿಸಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿತು. ಆಗ ಅರ್ಜಿ ಸಲ್ಲಿಸಿದವರಲ್ಲಿ ಮಾರ್ವಾಡಿ ಮಹೇಂದ್ರ ಸಿಂಘಿ ಎಂಬ ಖತರ್‌ನಾಕ್ ಆದ್ಮಿ ಒಬ್ಬ.

ಆತನ ಅರ್ಜಿಯನ್ನು ಸ್ವೀಕರಿಸಿದ ನಗರಾಭಿವೃದ್ಧಿ ಮಂಡಳಿಯು ದಿನಾಂಕ 2.1.1999 ರಂದು ಈ ಎರಡೂ ಜಾಗೆಗಳನ್ನು ಮಹೇಂದ್ರ ಸಿಂಘಿ ಅಧ್ಯಕ್ಷನಾಗಿರುವ ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್‌ಗೆ ಕೊಡುವುದೆಂದು ನಿರ್ಣಯವನ್ನು ತೆಗೆದುಕೊಂಡಿತು. ಈ ನಿರ್ಣಯಕ್ಕೆ ರಾಜ್ಯ ನಗರಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿಗಳೂ ಮಂಜೂರಾತಿ ನೀಡಿದರು.

ಇದೆಲ್ಲದರ ಹಿಂದೆ ಎಚ್.ಕೆ.ಪಾಟೀಲರ ಕೈವಾಡ... ತ್ತೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ. ಇಲ್ಲವಾದರೆ ಇವತ್ತು ಸುಮಾರು ಎರಡು ಕೋಟಿ ರೂಪಾಯಿಗಳ ಕಿಮ್ಮತ್ತು ಹೊಂದಿರುವ ಈ ಜಾಗೆಗಳನ್ನು ಕುರಿತು ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದ್ದಾಗಲೂ ಅದು ಹೇಗೆ ನಗರಾಭಿವೃದ್ಧಿ ಮಂಡಳಿಯು ಇದನ್ನು ವಿತರಿಸಲು ಸಾರ್ವಜನಿಕರಿಂದ ಅರ್ಜಿಯನ್ನು ಆಹ್ವಾನಿಸುತ್ತದೆ, ಅದನ್ನು ಇತರರಿಗೆ ನೀಡಲು ನಿರ್ಧರಿಸುತ್ತದೆ?



ಯಾರು ಈ ಸಿಂಘಿ!

ಹುಬ್ಬಳಿಯ ಪ್ರಮುಖ ಮಾರ್ವಾಡಿ ಹಸ್ತಿಮಲ್ ಸಿಂಘಿಯವರ ಮಗನೇ ಈ ಮಹೇಂದ್ರ ಸಿಂಘಿ. ಎಚ್. ಕೆ. ಪಾಟೀಲ್‌ರವರ ಬಲಗೈ ಬಂಟನಾಗಿರುವ ಈ ಸಿಂಘಿ ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತರ ಘಟಕದ ರಾಜ್ಯ ನಾಯಕ ಕೂಡ. ಈತ ಸ್ಥಾಪಿಸಿರುವ ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್‌ಗೆ ಈ ಜಾಗ ಬೇಕೆಂದೂ, ತನ್ನ ಸಂಸ್ಥೆಯು ಈ ಜಾಗದಲ್ಲಿ ಅಂಗ ವಿಕಲರಿಗೆ ಕೃತಕ ಕಾಲು ಜೋಡಣಾ ಆಸ್ಪತ್ರೆಯನ್ನು ಸ್ಥಾಪಿಸಲು ಉದ್ದೇಶಿಸಿದೆ ಎಂದೂ ಈತ ಅರ್ಜಿ ಸಲ್ಲಿಸಿದ್ದ. ಆತ ವ್ಯಕ್ತಪಡಿಸಿರುವ ಉದ್ದೇಶವೇನೋ ಉತ್ತಮವಾದ್ದದ್ದೇ. ಆದರೆ ಅದು ನಿಜವಾ ಎಂಬುದೇ ಪ್ರಶ್ನೆ!

> ಹುಬ್ಬಳ್ಳಿಯ ಕೇಶ್ವಾಪೂರ ಪೊಲೀಸ್ ಠಾಣೆಗೆ ನೀಡಿರುವ ಜಾಗೆಯನ್ನು ಹೊಡೆಯಲು ಸಂಚು ಮಾಡಿದವನೇ ಎಚ್.ಕೆ. ಪಾಟೀಲ್‌ರವರ ಮಾರ್ವಾಡಿ ಬಂಟ ಮಹೇಂದ್ರ ಸಿಂಘಿ. ಇದಕ್ಕೆ ನೀರೆರದವನೇ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿ.

ಯಾವೊತ್ತೊ ರಾಜಸ್ಥಾನ ತೊರೆದು ಹುಬ್ಬಳ್ಳಿ ಸೇರಿದ ಮಾರ್ವಾಡಿ ಹಸ್ತಿಮಲ್ ಸಿಂಘಿ ಪ್ರಾರಂಭದಲ್ಲಿ ಸಣ್ಣದಾದ ಟ್ರಾನ್ಸ್‌ಪೋರ್ಟ್ ಕಂಪನಿಯೊಂದನ್ನು ತೆರೆದರು. ನಂತರ ಬಡ್ಡಿ ವ್ಯಾಪಾರ ಪ್ರಾರಂಭಿಸಿದರು. ಕ್ರಮೇಣ ಈ ಎಲ್ಲಾ ವ್ಯವಹಾರಗಳನ್ನು ಅವರ ಏಕೈಕ ಪುತ್ರ ಮಹೇಂದ್ರ ಸಿಂಘಿ ನೋಡಿಕೊಳ್ಳ ತೊಡಗಿದ. ಟ್ರಾನ್ಸ್‌ಪೋರ್ಟ್, ಬಡ್ಡಿ ದಂಧೆಗಳಿಗೆ ರಾಜಕೀಯ ಆಶ್ರಯ ಬೇಕೆಂದು ಅರಿತ ಮಹೇಂದ್ರ ಸಿಂಘಿ ಕಾಂಗ್ರೆಸ್ ಪಕ್ಷ ಸೇರಿದ. ಆಗ ಅವನನ್ನು ಹತ್ತಿರ ಸೇರಿಸಿಕೊಂಡವರೇ ಎಚ್. ಕೆ. ಪಾಟೀಲ್ ಮತ್ತು ಅವರ ಶಿಷ್ಯ ಎ. ಎಂ. ಹಿಂಡಸಗೇರಿ.



ನಾರಾಯಣ್ ನಡುಮನಿ

ಹೇಗಿದ್ದರೂ ಹಿಂಡಸಗೇರಿಯದ್ದು ಕಬ್ಬಿಣ ವ್ಯಾಪಾರ. ಅವರ ರಾಮನ ಲೆಕ್ಕ ಕೃಷ್ಣನ ಲೆಕ್ಕಗಳನ್ನು ನಿಭಾಯಿಸಲು ಸಿಂಘಿಯಂತಹ ಖತರ್‌ನಾಕ್ ಮಾರ್ವಾಡಿಯ ಅವಶ್ಯಕತೆ ಇತ್ತು. ಹೀಗೆ ರಾಜಾಶ್ರಯ ಪಡೆದ ಸಿಂಘಿ, ಪಾರಸಮಲ್ ಜೈನ್, ಬದರಲಾಲ್ ಜೈನ್, ಗೌತಮ ಭಾಪಣ, ಗೌತಮ ಬರೂಟರಂತಹ ಇತರೆ ಜೈನ್ ಯುವಕರೊಂದಿಗೆ ಸೇರಿ ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್ ಅನ್ನು ಹುಟ್ಟುಹಾಕಿದ. ಇತರರೆಲ್ಲ ಈ ಸಂಸ್ಥೆಗೆ ಬೆವರು ಸುರಿಸಿದರೆ ಇದರ ಅಧ್ಯಕ್ಷನಾದ ಸಿಂಘಿ ಮಾತ್ರ ಈ ಸಂಸ್ಥೆಯನ್ನು ತನ್ನ ವ್ಯಯಕ್ತಿಕ ಬೆಳವಣಿಗೆಗೆ ಬಳಸಿಕೊಂಡ.

ಈ ಸಂಸ್ಥೆಯು ವತಿಯಿಂದ ವರ್ಷಕ್ಕೆ ಎರಡು ಬಾರಿ ನಡೆಸುವ ಉಚಿತ ಜೈಪುರ್ ಕೃತಕ ಕಾಲಿನ ಜೋಡಣಾ ಶಿಬಿರಗಳಿಗೆ ಹುಬ್ಬಳ್ಳಿ-ಧಾರವಾಡದ ಮಾರ್ವಾಡಿಗಳು ಸಾಕಷ್ಟು ಕೊಡುಗೆ ನೀಡತೊಡಗಿದರು. ಆದರೆ ಈ ಸಂಸ್ಥೆಯ ಕೆಲಸಗಳ ಎಲ್ಲಾ ಕೀರ್ತಿ ಸಿಂಘಿ ಮಾತ್ರ ಪಡೆಯುತ್ತಾ ಹೋದ. ಇದರಿಂದ ರೋಸಿಹೋದ ಇತರೆ ಮಾರ್ವಾಡಿ ಯುವಕರು ದೂರ ಸರಿದರು. ಈಗ ಗೌತಮ ಬಾರೂಟ ಹಾಗೂ ಪಾರಸಮಲ್ ಜೈನ್ ನೇತೃತ್ವದಲ್ಲಿ ರಾಜಸ್ಥಾನ್ ಯೂತ್ ಫೆಡರೇಷನ್ ಸ್ಥಾಪನೆಯಾಗಿದ್ದರೆ, ಗೌತಮ ಭಾಪಣಾ ಎಂಬುವವರ ಅಧ್ಯಕ್ಷತೆಯಲ್ಲಿ ಮಹಾವೀರ ಯೂತ್ ಫೆಡರೇಷನ್ ರಚನೆಗೊಂಡಿದೆ.

ಇಷ್ಟಾದರೂ ಸುಮ್ಮನಾಗದ ಮಹೇಂದ್ರ ಸಿಂಘಿ ತನ್ನ ಖಾಸಾ ಮಾವನಾದ ಪಾರಸಮಲ್ ಪಟವಾ ಎಂಬುವವನನ್ನು ಆಲ್ ಇಂಡಿಯಾ ಜೈನ್ ಯೂತ್ ಫೆಡರೇಷನ್‌ನ ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದಾನೆ. ಈ ಬದಲಾವಣೆಯ ಹಿಂದೆಯೂ ಸಿಂಘಿಯ ಮಾರ್ವಾಡಿ ಬುದ್ಧಿ ಕೆಲಸ ಮಾಡಿದೆ. ಅದೇನೆಂದರೆ, ಜೈಪುರ್ ಕೃತಕ ಕಾಲು ಜೋಡಣಾ ಆಸ್ಪತ್ರೆ ಸ್ಥಾಪಿಸಲು ಒಂದು ಟ್ರಸ್ಟ್ ರಚಿಸುವುದು, ಅದಕ್ಕೆ ತಾನೇ ಅಧ್ಯಕ್ಷನಾಗುವುದು, ಆ ಟ್ರಸ್ಟಿನಲ್ಲಿ ತನ್ನ ಸಂಬಂಧಿಗಳನ್ನೇ ಟ್ರಸ್ಟಿಗಳನ್ನಾಗಿಸುವುದು, ಮತ್ತು ಆ ಟ್ರಸ್ಟಿನ ಆಸ್ಪತ್ರೆಗೆಂದು ಎರಡು ಕೋಟಿ ರೂಪಾಯಿ ಮೌಲ್ಯದ ಜಾಗವನ್ನು ಲಪಟಾಯಿಸುವುದು.

ಇಂತಹ ಒಂದು ಸಂಚನ್ನು ರೂಪಿಸಿದ ಸಿಂಘಿ ತನ್ನ ಪ್ರಭಾವ ಬೀರಿ ವಿವಾದಿತ ಜಾಗೆಯನ್ನು ಅಕ್ರಮವಾಗಿ ಪಡೆಯುವುದರಲ್ಲಿ ಯಶಸ್ವಿ ಆದನಲ್ಲದೆ, ಆ ಜಾಗೆಯಲ್ಲಿ ತಾನು ಸ್ಥಾಪಿಸಬೇಕೆಂದಿರುವ ಆಸ್ಪತ್ರೆ ಕಟ್ಟಡಕ್ಕೆ ಕಾರ್ಪೊರೇಷನ್ ಕಮೀಷನರ್ ಮಣಿವಣ್ಣನ್‌ರಿಂದ ಕಟ್ಟಡ ಪರವಾನಗಿಯನ್ನೂ ಪಡೆದೇಬಿಟ್ಟಿದ್ದ.

ಮಹೀಂದ್ರ ಸಿಂಘಿಯ ಈ ನಾಟಕ ಸಫಲವಾಗಿರುತ್ತಿತ್ತು. ಆದರೆ ಅದಕ್ಕೆ ಪೊಲೀಸ್ ಕಮೀಷನರ್ ನಾರಾಯಣ ನಡುಮನಿಯವರು ತಡೆ ಒಡ್ಡಿದರು. "ಈ ಜಾಗವನ್ನು ನಗರಾಭಿವೃದ್ಧಿಯು ಅಕ್ರಮವಾಗಿ ನೀಡಿದೆ. ಅಷ್ಟೇ ಅಲ್ಲದೆ ಈ ಜಾಗ ಪೊಲೀಸ್ ಠಾಣೆ ಸ್ಥಾಪಿಸಲು ಬೇಕಾಗಿದೆ. ಬೇಕಿದ್ದರೆ ನಿಮಗೆ ನವೀನ್ ಪಾರ್ಕಿನಲ್ಲಿರುವ 30 ಗುಂಟೆ ಜಾಗವನ್ನು ನೀಡುತ್ತೇವೆ" ಎಂದು ನಡುಮನಿ ಹೇಳಿದರು. ಆದರೆ ಎರಡು ಕೋಟಿ ಕಿಮ್ಮತ್ತಿನ ಜಾಗವನ್ನು ಬಿಡಲೊಲ್ಲದ ಸಿಂಘಿ ತನಗೆ ಅದೇ ಜಾಗ ಬೇಕೆಂದು ಹಟ ಹಿಡಿದ. ತನ್ನ ರಾಜಕೀಯ ಗುರು ಎಚ್. ಕೆ. ಪಾಟೀಲರಿಗೆ ಚಾಡಿ ಹೇಳಿದ. ಆಗ ಪಾಟೀಲರು ನಡುಮನಿಯವರನ್ನೇ ದಬಾಯಿಸಿದರು. ಅದಕ್ಕೆ ನಡುಮನಿಯವರು ಜಗ್ಗದಿದ್ದಾಗ ತನ್ನ ಜಾತಿ ಬಾಂಧವ ಮತ್ತು ಶಿಕ್ಷಣ ಸಚಿವ ಬಸವರಾಜ್ ಹೊರಟ್ಟಿಯವರ ಮೂಲಕ ಒತ್ತಡ ತಂದರು. ಪಕ್ಷ ಭೇದವನ್ನೂ ಮರೆತ ಹೊರಟ್ಟಿ ಸಾಹೇಬರು ನಡುಮನಿಯವರಿಗೇ ಧಮಕಿ ಹಾಕಿದರು!


ಈಗ ನ್ಯಾಯಾಲಯವು ಈ ಜಾಗವನ್ನು ಅಕ್ರಮವಾಗಿ ನೀಡಿದ್ದಕ್ಕೆ ನಗರಾಭಿವೃದ್ಧಿ ಮಂಡಳಿಗೆ ಛೀಮಾರಿ ಹಾಕಿದೆ. ಅಷ್ಟೇ ಅಲ್ಲ, ಈ ಜಾಗೆಯನ್ನು ಮರಳಿ ಕೇಶ್ವಾಪೂರ ಪೊಲೀಸ್ ಠಾಣೆಗೆ ಕೊಡಬೇಕು ಎಂದು ನಿರ್ದೇಶಿಸಿದೆ. ಈಗಾಗಲೇ ರಾಜ್ಯ ಸರ್ಕಾರದಿಂದ ನಾರಾಯಣ ನಡುಮನಿಯವರು ಪೊಲೀಸ್ ಠಾಣೆ ಕಟ್ಟಲು 48 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿದ್ದಾರೆ.

ಸದ್ಯಕ್ಕೆ ಸಿಂಘಿ ಸ್ಥಿತಿ ಬಾಲ ಸುಟ್ಟ ಬೆಕ್ಕಿನಂತಾಗಿದೆ. ಆದರೆ ಮೊದಲೇ ಹೇಳಿದಂತೆ ಲ್ಯಾಂಡ್ ಮಾಫಿಯಾ, ಮಾರ್ವಾಡಿ ಬುದ್ಧಿ ಮತ್ತು ರಾಜಕೀಯ ಕೈಜೋಡಿಸಿದಾಗ ಸಿಂಘಿಯಂತಹವರು ಮತ್ತೆ ಬಾಲ ಬಿಚ್ಚಲು ಬಹಳ ಸಮಯ ಬೇಕಿಲ್ಲ. ಅದೇ ನಮ್ಮ ದೇಶದ ದುರಂತ!

-ವರದಿಗಾರ

ಠಾಣೆ ಬೇಡ ಅಂದ ಸಂಕೇಶ್ವರ

ಕೇಶ್ವಾಪೂರ ಪೊಲೀಸ್ ಠಾಣೆಗೆಂದು ನೀಡಲಾಗಿದ್ದ, ಮಹೇಂದ್ರ ಸಿಂಘಿ ಎಂಬ ಮಾರ್ವಾಡಿ ಲಪಟಾಯಿಸಲು ...ತ್ನಿಸಿದ್ದ ವಿವಾದಿತ ಜಾಗೆಯು ವಿ.ಆರ್.ಎಲ್ ಮಾಲೀಕ ವಿಜಯ ಸಂಕೇಶ್ವರರ ಮನೆಯ ಹತ್ತಿರವೇ ಇದೆ. ...ರೆ ಮಾಜಿ ಸಂಸದ ಮತ್ತು ಕನ್ನಡ ಪಾರ್ಟಿ ಎಂಬ ತೆಂಗಿನಚಿಪ್ಪಿನ ಗುರುತಿನ ಹೆಸರಿಗಿಲ್ಲದ ರಾಜಕೀಯ ಪಕ್ಷದ ...ಕನೂ ಆದ ಸಂಕೇಶ್ವರ್ ಕೂಡ ಅಲ್ಲಿ ಪೊಲೀಸ್ ಠಾಣೆ ಬರುವುದನ್ನು ವಿರೋಧಿಸುತ್ತಿದ್ದಾರೆ. ಅದಕ್ಕೆ ಅವರು ನೀಡುವ ಕಾರಣಗಳು ಮಜಬೂತಾಗಿವೆ!



"ಇಲ್ಲಿ ಪೊಲೀಸ್ ಸ್ಟೇಷನ್ ಬಂದರೆ ಗಲಾಟೆ ಜಾಸ್ತಿಯಾಗುತ್ತದೆ. ನನ್ನ ಮನೆಯವರಿಗೆ ಕಿರಿಕಿರಿಯಾಗುತ್ತದೆ. ಪೊಲೀಸ್ ಸ್ಟೇಷನ್ ಬೇಕಾದರೆ ನವೀನ ಪಾರ್ಕ್‌ಗೆ ಹೋಗಲಿ" ಎಂಬುದು ಸಂಕೇಶ್ವರರ ವಾದ.

ಇದರರ್ಥ ಏನು? ಸಂಕೇಶ್ವರ್ ಪ್ರಕಾರ ಠಾಣೆ ಇಲ್ಲದೆ ಜನರಿಗೆ ತೊಂದರೆ ಆದರೂ ಪರವಾಗಿಲ್ಲ, ಆದರೆ ತಮಗೂ ತಮ್ಮ ಮನೆಯವರಿಗೂ ಕಿರಿಕಿರಿ ಆಗಬಾರದು! ಇಂಥವರೂ ನಮ್ಮ ದೇಶದಲ್ಲಿ ಸಂಸತ್ತಿಗೆ ಚುನಾಯಿತರಾಗುತ್ತಾರೆ, ತಮ್ಮದೇ ಪಕ್ಷವನ್ನು ಕಟ್ಟುತ್ತಾರೆ! ಇದನ್ನು ಅರಿತೇ ಜನ ಹೋದ ಚುನಾವಣೆಗಳಲ್ಲಿ ಈ ಸಂಕೇಶ್ವರ ಮಹಾತ್ಮರ ಪಕ್ಷಕ್ಕೆ ತಕ್ಕದಾದ ಜಾಗವನ್ನು ತೋರಿಸಿದ್ದು!

ಲಂಕೇಶ್

ವೇಟೆಚೇಗವ ಮತ್ತು ಬ್ರಾಹ್ಮಣ

ವಿಶೇಷ ಲೇಖನ

ಕೆ.ಆರ್.ವಿದ್ಯಾಧರ, ಮಡಿಕೇರಿ



[illegible] ತೆಯ್ಯಂಗಳ ವರ್ಣಮಯ ಲೋಕವೊಂದು ಅನಾವರಣಗೊಳ್ಳತೊಡಗುತ್ತದೆ. ಬದುಕೇಗಳು ಇರುಳಿನಲ್ಲಿ ಅಲೌಕಿಕ ಜಗತ್ತಿನ ಈ ದೈವಗಳ ಆರ್ಭಟ. ಜಾನಪದಗಳು ಅನುರಣಿಸತೊಡಗುತ್ತವೆ. ಮೂಲ ಸ್ವರೂಪದಲ್ಲಿ ಇಲ್ಲಿನ ಜನವರ್ಗಕ್ಕೆ ಸರ್ವಾಂತರ್ಯಾಮಿ ಸರ್ವಶಕ್ತ ಭಗವಂತನ ಪರಿಕಲ್ಪನೆ ಇರಲಿಲ್ಲ. ಎಲ್ಲ ಮಾನವಜೀವಿಗಳಂತೆ ಮಾಂಸಮಜ್ಜೆಗಳೊಂದಿಗೆ ಬದುಕಿದ್ದ ಅವರ ಜೀವಿತಾವಧಿಯಲ್ಲಿ ದಂತಕಥೆಗಳಾಗಿದ್ದು ಕೊನೆಗೆ ಮಾಯಕವಾದ ಜನಪದ ವೀರರು ತೆಯ್ಯಂ, ಭೂತಗಳ ರೂಪದಲ್ಲಿ ಮೈತಳೆದು ವರ್ಷಂಪ್ರತಿ ದರುಶನ ನೀಡುತ್ತಾರೆ. ದೇವರ ಕಲ್ಪನೆಗೆ ಅತೀತವಾದ ಧಾರ್ಮಿಕ ಗ್ರಹಿಕೆಯ ಈ ಪರಂಪರೆ ಅಂತೆಯೇ ಅವೈದಿಕ ಸ್ವರೂಪವನ್ನು ಹೊಂದಿದೆ. ಇನ್ನೊಂದೆಡೆ ಈ ಜನಸಂಸ್ಕೃತಿ ತನ್ನ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಲು ಹವಣಿಸಲಾರಂಭಿಸಿದ ವೈದಿಕ ಸಂಸ್ಕೃತಿಯ ವಿರುದ್ಧ ನಡೆಸಿದ ಜಿದ್ದಾಜಿದ್ದಿನ ಸಂಘರ್ಷಗಳ ಪುನರಾಭಿನಯ ಸಹ ತೆಯ್ಯಂ, ಭೂತಗಳ ಆಚರಣೆಯ ಸಂದರ್ಭದಲ್ಲಿ ನಡೆಯುತ್ತದೆ. ಇಂತಹದೊಂದು ಸ್ವಯಂಸ್ವತಂತ್ರ ಪರಂಪರೆಗೆ ವೈದಿಕ ಚಿಂತನೆಯ ಚಾದರ ಹೊದಿಸುವ ಕೆಲಸ ಶತಮಾನಗಳಿಂದಲೂ ನಡೆಯುತ್ತ ಬಂದಿದೆ. ಕಡುಕಾಠಿಣ್ಯದ ವರ್ಣ ಶ್ರೇಣೀಕರಣ ವ್ಯವಸ್ಥೆಯಿದ್ದ ಕೇರಳದಲ್ಲಿ ತೆಯ್ಯಂಗಳನ್ನು ಸಾಕಷ್ಟು ವ್ಯವಸ್ಥಿತವಾಗಿಯೇ ವೈದಿಕ ಚೌಕಟ್ಟಿನಲ್ಲಿ ಕೂರಿಸಲಾಗಿದೆ. ಈ ರೀತಿಯ ಪ್ರಯತ್ನ ದಕ್ಷಿಣ ಕನ್ನಡದ ಭೂತಾರಾಧನೆಯ ಮೇಲೆ ನಡೆದರೂ ಮೇಲ್ತೋರಿಕೆಗೇ ಅದು ಅಭಾಸಕರವಾಗಿ ಕಾಣಿಸುತ್ತದೆ. ತೆಯ್ಯಂ ಭೂತಗಳ ಹುಟ್ಟು, ಬದುಕು, ಕಾರಣಿಕೆಗಳನ್ನು ಕೊಂಡಾಡುವ ಮಲೆಯಾಳದ ತೋತ್ತಂ ಮತ್ತು ತುಳು ಭಾಷೆಯ ಪಾಡ್ದನಗಳಲ್ಲಿ ಈ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ದುರಂತ ನೋಡಿ; ದಕ್ಷಿಣ ಕನ್ನಡದ ಭೂತಸ್ಥಾನ, ಗರೋಡಿ, ಚಾವಡಿಗಳೆಲ್ಲ ಈಗ ಸಂಘಪರಿವಾರದ ಸಾಂಸ್ಕೃತಿಕ ದುರಾಕ್ರಮಣಕ್ಕೆ ಒಳಗಾಗಿವೆ. ತಮ್ಮ ದೈವಗಳಿಗೆ ತಾವೇ ಅರ್ಚಕರಾಗಿದ್ದು ಎಲ್ಲ ರೀತಿಯ ಧಾರ್ಮಿಕ ಆಚರಣೆಗಳನ್ನು ಯಾರ ಹಂಗಿಲ್ಲದೆಯೇ ತಾವಾಗಿಯೇ ನಡೆಸುತ್ತಿದ್ದ ಇಲ್ಲಿನ ಸಮುದಾಯಗಳು ಈಗ ಪುರೋಹಿತಶಾಹಿ ಬ್ರಾಹ್ಮಣರಿಂದ ಹೋಮ, ಹವನ, ಸ್ಥಳಶುದ್ಧಿ, ಬ್ರಹ್ಮಕಲಶ, ಸತ್ಯನಾರಾಯಣ ಪೂಜೆ, ಶನೈಶ್ಚರ ಪೂಜೆಗಳನ್ನು ನಡೆಸಿ ತಮಗರಿವಿಲ್ಲದಂತೆ ತಾವೇ ಅಸ್ಪೃಶ್ಯತೆಯ ಸಂಕೇತವಾಗಿ ತಮ್ಮ ಸ್ವಂತ ಸ್ಥಳದಲ್ಲೇ ಎರಡನೆ ದರ್ಜೆಯ ಜನರಾಗಿದ್ದಾರೆ. ಈ ಶನಿಕಾಟವನ್ನು ತಮ್ಮ ಧಾರ್ಮಿಕ ಉತ್ಕರ್ಷ ಎಂದು ಭಾವಿಸಿರುವ ಭೂತಾರಾಧನೆ ಪರಂಪರೆಯ ಜನರೀಗ ಮಾನಸಿಕವಾಗಿ ಸಾಂಸ್ಕೃತಿಕ ದಾಸ್ಯಕ್ಕೆ ಒಗ್ಗಿಯಾಗಿದೆ.

ದುರಂತ ನೋಡಿ; ದಕ್ಷಿಣ ಕನ್ನಡದ ಭೂತಸ್ಥಾನ, ಗರೋಡಿ, ಚಾವಡಿಗಳೆಲ್ಲ ಈಗ ಸಂಘಪರಿವಾರದ ಸಾಂಸ್ಕೃತಿಕ ದುರಾಕ್ರಮಣಕ್ಕೆ ಒಳಗಾಗಿವೆ. ತಮ್ಮ ದೈವಗಳಿಗೆ ತಾವೇ ಅರ್ಚಕರಾಗಿದ್ದು ಎಲ್ಲ ರೀತಿಯ ಧಾರ್ಮಿಕ ಆಚರಣೆಗಳನ್ನು ಯಾರ ಹಂಗಿಲ್ಲದೆಯೇ ತಾವಾಗಿಯೇ ನಡೆಸುತ್ತಿದ್ದ ಇಲ್ಲಿನ ಸಮುದಾಯಗಳು ಈಗ ಪುರೋಹಿತಶಾಹಿ ಬ್ರಾಹ್ಮಣರಿಂದ ಹೋಮ, ಹವನ, ಸ್ಥಳಶುದ್ಧಿ, ಬ್ರಹ್ಮಕಲಶ, ಸತ್ಯನಾರಾಯಣ ಪೂಜೆ, ಶನೈಶ್ಚರ ಪೂಜೆಗಳನ್ನು ನಡೆಸಿ ತಮಗರಿವಿಲ್ಲದಂತೆ ತಾವೇ ಅಸ್ಪೃಶ್ಯತೆಯ ಸಂಕೇತವಾಗಿ ತಮ್ಮ ಸ್ವಂತ ಸ್ಥಳದಲ್ಲೇ ಎರಡನೆ ದರ್ಜೆಯ ಜನರಾಗಿದ್ದಾರೆ.

ವೈದಿಕ-ಅವೈದಿಕ ಸಂಘರ್ಷಕ್ಕೆ ನಮ್ಮ ದೇಶದಲ್ಲಿ ಸಾವಿರಾರು ಉದಾಹರಣೆಗಳು ಸಿಕ್ಕುತ್ತವೆ. ಅದಕ್ಕೆ ನಮ್ಮ ಸುತ್ತಲಿನ ಪರಿಸರಗಳೂ ಹೊರತಲ್ಲ. ಈ ಲೇಖನಕ್ಕೆ ಪೂರಕವಾದ ಕೆಲವೊಂದು ಉಲ್ಲೇಖಗಳನ್ನು ಮಾತ್ರ ಮಾಡುತ್ತಿದ್ದೇನೆ.

ಉಡುಪಿ ಜಿಲ್ಲೆಯ ಕೋಟೇಶ್ವರದ 'ಕೊಡಿಹಬ್ಬ' ಎಂಬ ಹೆಸರಿನ ಜಾತ್ರೆ ಬಹಳ ಪ್ರಸಿದ್ಧ. ಕ್ರಿ.ಶ.1551ರಲ್ಲಿ ಕೊಡಿಹಬ್ಬದ ದಿನ ಅಲ್ಲೊಂದು ಭೀಕರ ಹೋರಾಟ ನಡೆಯುತ್ತದೆ. ಕೊನೆಗೆ ದೇವಸ್ಥಾನದ ಪ್ರಾಂಗಣದಲ್ಲಿ ಹಲವಾರು ಬ್ರಾಹ್ಮಣರ, ಬ್ರಾಹ್ಮಣೇತರರ ಮತ್ತು ದನಕರುಗಳ ಶವಗಳು ಚೆಲ್ಲಾಡಿ ಬಿದ್ದಿದ್ದವೆಂದು ಇತಿಹಾಸಕಾರರು ಬರೆಯುತ್ತಾರೆ. ವೈದಿಕ-ಅವೈದಿಕರ ನಡುವೆ ನಡೆದ ರಕ್ತಸಿಕ್ತ ಹೋರಾಟದಲ್ಲಿ ಬ್ರಾಹ್ಮಣರಿಗೆ ಪೂಜಾರ್ಹವಾದ ಗೋವುಗಳನ್ನು ಕೊಲ್ಲುವುದರ ಮೂಲಕ ವೈದಿಕ ಪಾರಮ್ಯವನ್ನು ಧೂಳೀಪಟ ಮಾಡಲಾಗಿದೆ. ಈ ಸಶಸ್ತ್ರ ಕಾಳಗ ನಡೆಯುವ ಹಿಂದುಮುಂದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಂದ್ರಪ್ಪಾಡಿ ಎಂಬಲ್ಲಿ ಸಹ ಅಂತಹದೊಂದು ಸಂಘರ್ಷ ನಡೆದಿತ್ತು. ಇಂದಿಗೂ 'ರಾಜನ್ ದೈವ' ಕಂದ್ರಪ್ಪಾಡಿಯ ಜನಸಮೂಹ ಆರಾಧಿಸುವ ಭೂತ. ಅಂದಿನ ದಿನಗಳಲ್ಲಿ ಆಳುವ ಜೈನ ಬಲ್ಲಾಳರು ಮತ್ತು ಸ್ಥಳೀಯ ವೈದಿಕರು ರಾಜನ್‌ದೈವದ ಜಾತ್ರೋತ್ಸವಕ್ಕೆ ಕೊಡಿಮರ (ಧ್ವಜಸ್ತಂಭ) ನೆಟ್ಟು ಕೊಡಿ ಏರಿಸುವುದರ ಕುರಿತಾಗಿ ತಕರಾರು ಒಡ್ಡಿ ಅಡ್ಡಿಪಡಿಸತೊಡಗಿದರು. ತಮ್ಮ ಧಾರ್ಮಿಕ ನಂಬಿಕೆಯನ್ನು ನಿರಾಕರಿಸಿದ ಜೈನ ಮತ್ತು ಬ್ರಾಹ್ಮಣ ವರ್ಗಗಳ ಮೇಲೆ ಜನ ಸಿಟ್ಟಿಗೆದ್ದು ಆಯುಧಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಒಂದೇ ರಾತ್ರಿಯಲ್ಲಿ ಆಳುವ ಜೈನ ಬಲ್ಲಾಳರನ್ನು ಸೋಲಿಸಿ ಅರಮನೆಯ ಬಸದಿಯನ್ನು ನಿರ್ನಾಮ ಮಾಡಿದುದಲ್ಲದೆ ನಾಗಾರಾಧಕ ಬ್ರಾಹ್ಮಣರಿಗಾಗಿ ಹೊಸದಾಗಿ ಕಟ್ಟಿಸಲಾಗಿದ್ದ ದೇವಸ್ಥಾನವನ್ನು ಕೈವಶ ಮಾಡಿಕೊಂಡು ರಾಜನ್‌ದೈವದ ಆಯುಧಗಳನ್ನು ಗರ್ಭಗುಡಿಯಲ್ಲಿ ಸ್ಥಾಪಿಸುತ್ತಾರೆ. ಆ ಹೊತ್ತಲ್ಲಿ ಕಡವೆಯೊಂದನ್ನು ಕೊಂದು ಅದರ ಕರುಳನ್ನು ದೇಗುಲದ ಸುತ್ತಲೂ 'ಸೂತ್ರದ ಬಳ್ಳಿ'ಯಂತೆ ಸುತ್ತಿ ವೈದಿಕರ ದೃಷ್ಟಿಯಲ್ಲಿ ಮೈಲಿಗೆಗೊಳಿಸಿದ ಇತಿಹಾಸ ಅತ್ಯಂತ ಅನನ್ಯ ಮತ್ತು ರೋಚಕ. ವಿಶೇಷವೆಂದರೆ ಅಂದಿನಿಂದ ಇಂದಿಗೂ ಬ್ರಾಹ್ಮಣರು ಮತ್ತು ಜೈನರು ಈ ಗ್ರಾಮದಲ್ಲಿ ವಾಸ್ತವ್ಯದಲ್ಲಿಲ್ಲ.

ಕಂದ್ರಪ್ಪಾಡಿಯ ಸಂಘರ್ಷದ ಹಿನ್ನೆಲೆಯಲ್ಲಿ ಮಧ್ಯಕಾಲೀನ ತಾಂತ್ರಿಕ ಪಂಗಡಗಳಲ್ಲೊಂದಾದ 'ನಾಥಸಿದ್ಧ' ಪರಂಪರೆಯ ಪ್ರಭಾವ ನಿಚ್ಚಳವಾಗಿ ಗೋಚರಿಸುತ್ತದೆ. (ಜಾನಪದ ವಿದ್ವಾಂಸ ಪ್ರೊ.ಪುರುಷೋತ್ತಮ ಬಿಳಿಮಲೆ ಮತ್ತು ಶ್ರೀ ಎ.ಕೆ.ಹಿಮಕರ ಇವರು ಕಂದ್ರಪ್ಪಾಡಿಯ ಕುರಿತು ಹೆಚ್ಚಿನ ಅಧ್ಯಯನ ನಡೆಸಿದ್ದಾರೆ). ನಾಥಸಿದ್ಧ ಪ್ರಭಾವಳಿಯಲ್ಲಿ ಸಾಗಿಬಂದ ಇಲ್ಲಿನ ಗೌಡ ಸಮುದಾಯ ಈಗಲೂ ಸುಗ್ಗಿ ಹುಣ್ಣಿಮೆ ಸಂದರ್ಭದಲ್ಲಿ 'ಸಿದ್ಧವೇಷ' ಎಂಬ ಆಚರಣೆಯನ್ನು ನಡೆಸುತ್ತಾರೆ. ಈ ಜಾನಪದ ಪ್ರಕಾರದ ಕೇಂದ್ರದಲ್ಲಿ ಒಬ್ಬ ಸಿದ್ಧಪುರುಷನ ವೇಷಧಾರಿ ಇರುತ್ತಾನೆ. ಆತನ ದೇಹವನ್ನು ಸಂಪೂರ್ಣ ಮರೆಮಾಚುವಂತೆ ಒಣ ಬಾಳೆಯೆಲೆಗಳಿಂದ ಸುತ್ತಿ ಬಿಗಿದು, ಸೊಂಟಕ್ಕೆ ನಾಕಾರು ಬೆತ್ತದ ಕೋಲುಗಳನ್ನು ಕಟ್ಟಿ ನಗ್ನ ಸನ್ಯಾಸಿಯನ್ನು ಸಂಕೇತಿಸಲಾಗುತ್ತದೆ. ಜತೆಗೆ ಒಬ್ಬ ವೈದಿಕ ಬ್ರಾಹ್ಮಣನ ಪಾತ್ರಧಾರಿ, ಮತ್ತೊಬ್ಬ ವೈಷ್ಣವ ದಾಸಯ್ಯನ ವೇಷಧಾರಿ ಇರುತ್ತಾರೆ. ಸಿದ್ಧವೇಷದ ಸೊಲ್ಲುಗಳನ್ನು ಹಾಡುತ್ತಾ ವೃತ್ತಾಕಾರದಲ್ಲಿ ಕುಣಿಯುವ ಹತ್ತಾರು 'ಪುರುಷರ ಮಕ್ಕಳು' ಒಟ್ಟಿಗಿರುತ್ತಾರೆ. ಬ್ರಾಹ್ಮಣ ಮತ್ತು ದಾಸಯ್ಯರನ್ನು ಈ ಬೆತ್ತಲೆ ಸನ್ಯಾಸಿ ವಿವಿಧ ರೀತಿಗಳಲ್ಲಿ ಅಣಕಿಸುವುದು, ಅವರಿಗೆ ಶಿಶ್ನವನ್ನು ಮುಟ್ಟಿಸಲು ಅಟ್ಟಾಡಿಸುವುದು ಈ ಜಾನಪದ-ಧಾರ್ಮಿಕ ಆಚರಣೆಯ ಮುಖ್ಯ ಪ್ರದರ್ಶನ ಭಾಗವಾಗಿದೆ. ಮಡಿಕೇರಿ, ಸುಳ್ಯ, ಬೆಳ್ತಂಗಡಿ, ಪುತ್ತೂರು ಮತ್ತು ಬಂಟ್ವಾಳದಲ್ಲಿ ಸಾಂದ್ರವಾಗಿ ವಾಸವಿರುವ ಗೌಡ ಸಮುದಾಯ ತನ್ನ ತೆಕ್ಕೆಯೊಳಗೇ ಇಟ್ಟುಕೊಂಡಿರುವ ಅವೈದಿಕ ಚಿಂತನೆಯ ರಂಗಸ್ವರೂಪವಿದು. ಈ ಸ್ವಾಭಿಮಾನಿ ಜನ ಇಂದು ಡಿ. ವಿ.ಸದಾನಂದ ಗೌಡ ತರಹದ ಅವಕಾಶವಾದಿ ರಾಜಕಾರಣಿಗಳ ಕಾರಣದಿಂದ ವೈದಿಕರನ್ನು ಒಲೈಸುವ ಗುಂಪಾಗಿ ಪರಿವರ್ತನೆಗೊಂಡಿದ್ದು ವೈಚಾರಿಕ ಪ್ರಗತಿಯ ಪಥದಿಂದ ದಶಕಗಳಷ್ಟು ಕಾಲ ಹಿಂದಕ್ಕೆ ಸರಿದು ನಿಂತಿದೆ.

ಕೊಡಗು-ಕಾಸರಗೋಡು-ದಕ್ಷಿಣ ಕನ್ನಡ ಜಿಲ್ಲೆಗಳು ಕೂಡುವ ಸ್ಥಳದಲ್ಲಿ ಆಡಳಿತಾತ್ಮಕವಾಗಿ ಕೇರಳಕ್ಕೆ ಸೇರಿದ ಹೊಸದುರ್ಗ ತಾಲೂಕಿನ ಪನತ್ತಡಿ ಗ್ರಾಮದಲ್ಲಿ ಮಂಞಡ್ಕ ಎಂಬ ಊರಿದೆ. ಇದು 'ಮುನ್ನಾಯರ್' ಎಂಬ ಹೆಸರಿನಲ್ಲಿ ದೈವವಾಗಿ ನೆಲೆ ನಿಂತಿರುವ ನಾಯರ್ ಯೋಧನೊಬ್ಬ ಆರಾಧನೆಗೊಳ್ಳುತ್ತಿರುವ ಧಾರ್ಮಿಕ ಕ್ಷೇತ್ರ. ಶಿವರಾತ್ರಿಯೊಂದಿಗೆ ಆರಂಭವಾಗಿ ಎಂಟು ದಿನಗಳ ಕಾಲ ಹಗಲೂ ರಾತ್ರಿ ನಿರಂತರವಾಗಿ ಇಲ್ಲಿ ನೂರಾರು ತೆಯ್ಯಂಗಳು ಅಬ್ಬರಿಸಿ ಕುಣಿಯುತ್ತವೆ, ಅಭಯದ ನುಡಿಗಟ್ಟು ಗಳನ್ನಾಡುತ್ತವೆ. ಇವುಗಳ ನಡುವಲ್ಲಿ ವೇಟೆಚೇಗವ ದೈವ ಮತ್ತು ಬ್ರಾಹ್ಮಣ ಎಂಬ ಕುತೂಹಲಕಾರಿ ಪ್ರಹಸನವೊಂದು ನಡೆಯುತ್ತದೆ. ತೆಯ್ಯಂ ಭೂತಗಳ ಧಾರ್ಮಿಕ ರಂಗಭೂಮಿಯ ಪರಿಕಲ್ಪನೆಯಲ್ಲಿ ಪ್ರಹಸನದ ಪ್ರಕಾರ ಅತ್ಯಂತ ಅಪರೂಪದ್ದು. ವೇಟೆಚೇಗವ ಮತ್ತು ಬ್ರಾಹ್ಮಣ ಕಥಾನಕ ಇಲ್ಲಿ ತೆಯ್ಯಂನ ಹಲವು ಶಿಸ್ತು ಚೌಕಟ್ಟುಗಳಿಗಿಂತ ಹೊರಗೆ ನಿಂತು ಬಹುತೇಕ ಒಂದು ನಾಟಕದ ಸ್ವರೂಪದಲ್ಲಿ ನಡೆಯುತ್ತದೆ. ಭಾರತದ ಜಾನಪದ ಕಲಾಸಮುದಾಯಗಳಲ್ಲೇ ಅತ್ಯಂತ ವರ್ಣರಂಜಿತ ವಸ್ತ್ರಾಲಂಕಾರಕ್ಕೆ ವಾರಸುದಾರರಾದ, ಆದರೆ ಸಮಾಜದ ನಿಮ್ನ ವರ್ಗಕ್ಕೆ ಸೇರಿದ 'ಬಣ್ಣ' ಜಾತಿಯ ಕಲಾವಿದರೇ ಮಂಞಡ್ಕದ ಎಲ್ಲ ತೆಯ್ಯಂಗಳನ್ನೂ ಕಟ್ಟುವುದು. ಅವರೇ ವೇಟೆಚೇಗವ ಮತ್ತು ಬ್ರಾಹ್ಮಣ ಪ್ರಹಸನವನ್ನು ಸಹ ನಡೆಸುವವರು.

ವೇಟೆಚೇಗವ ದಟ್ಟ ಅರಣ್ಯದ ನಡುವೆ ಇರುವ ಒಬ್ಬ ಬೇಟೆಗಾರ ದೈವ. ದುರ್ಗಮ ಕಾಡಿನೆಡೆ ನೆಲೆನಿಂತ ಕಾರಣ ಈ ದೈವದ ಅರ್ಚನೆಗೆ ಯಾರೂ ಸಿದ್ಧರಿರುವುದಿಲ್ಲ. ಹಲವಾರು ಜನ ಪೂಜೆಗೆಂದು ಹೋದರೂ ಅಲ್ಲಿ ಹೆಚ್ಚು ದಿನ ನಿಲ್ಲುವುದು ಅವರಿಗೆ ಸಾಧ್ಯವಾಗುವುದಿಲ್ಲ. ಕೊನೆಗೆ ಈ ಕೆಲಸಕ್ಕೆ ಬ್ರಾಹ್ಮಣನೊಬ್ಬ ಮುಂದೆ ಬರುತ್ತಾನೆ. ಮಂಞಡ್ಕದ ಪ್ರತಿದೈವವೂ ಬಣ್ಣಬಣ್ಣದ ವೇಷಭೂಷಣಗಳನ್ನು ಹೊಂದಿದ್ದರೆ ಬ್ರಾಹ್ಮಣ ಮಾತ್ರ ಅದಕ್ಕೆ ಅಪವಾದ. ಸೊಂಟದ ಸುತ್ತ ಒಂದು ಚಿಕ್ಕದಾದ ಬಟ್ಟೆ, ಮೇಲುಡುಪು ಇಲ್ಲದ ಬರಿಮೈ. ತೆಂಗಿನ ಗರಿಯ ತೋಳಿನಿಂದ ಎಬ್ಬಿಸಲಾದ ನಾರಿನಿಂದ ಮಾಡಿದ ಜನಿವಾರ, ತಲೆಗೆ ಸುತ್ತಲಾದ ಎಲೆವಸ್ತ್ರ ಕಿವಿಗೆ ತೆಂಗಿನ ಎಳೆಗರಿಯಲ್ಲಿ ಮಾಡಿದ ಕುಂಡಲ, ಒಂದು ಕೈಯಲ್ಲಿ ಪನೆಕೊಡೆ (ತಾಳಿ ಮರದ

ಪೂಜಾರಿಗಳನ್ನು ಸೋಲಿಸಿದ ದಲಿತ ವೀರಾಗ್ರಣಿಗಳು

ಭೂತ ಮತ್ತು ತೆಯ್ಯಂ ಸಂಪ್ರದಾಯದಲ್ಲಿ ಎಲ್ಲ ಜಾತಿಗೂ ಎಲ್ಲ ಮತಕ್ಕೂ ಸೇರಿದ ಜನಪದ ನಾಯಕರು ಆರಾಧನೆಗೊಳ್ಳುತ್ತಾರೆ. ಕುಂಬ್ಳೆ ಸಮೀಪದ ಆರಿಕ್ಕಾಡಿ ಆಲಿಭೂತ ಮುಂಜಾನೆ ಹೊರಟು ನಮಾಜು ಮಾಡಿ ದೇಗುಲದ ಪ್ರಾಂಗಣದಲ್ಲಿ ಮೂರು ಸುತ್ತು ಬರು

ವಷ್ಟರಲ್ಲಿ ಅವನಿಗೆ ಅರ್ಪಿಸಿದ ಮಲ್ಲಿಗೆಹಾರಗಳು ಲೋಡುಗಟ್ಟಲೆ ರಾಶಿ ಬಿದ್ದಿರುತ್ತವೆ. ಲಕ್ಷ ದ್ವೀಪದ ದಿವಿ ದ್ವೀಪದಿಂದ ವ್ಯಾಪಾರಕ್ಕೆಂದು ಬಂದ ಆಲಿ ಎಂಬ ಮುಸ್ಲಿಮ್ ತಂತ್ರಮಂತ್ರಗಳಿಗೂ ಖ್ಯಾತನಾಗಿದ್ದ ಒಬ್ಬ ವ್ಯಾಮೋಹಿ. ಬದುಕಿನಲ್ಲೂ ಸಾವಿನಲ್ಲೂ ಈತನ ರಸಿಕತೆ ವ್ಯಕ್ತವಾಗಿದೆ. ಸ್ವಲ್ಪ ಹೋಲಿಕೆಯ ವ್ಯಕ್ತಿತ್ವ ಕುಕ್ಕೆ ಸುಬ್ರಹ್ಮಣ್ಯ ಸನಿಹದ ಪಿನೆಕಲ್ಲಿನಲ್ಲಿ ನೆಲೆ ನಿಂತಿರುವ ಬಚ್ಚನಾಯಕ ಎಂಬ ಪಕ್ಕಲಿಗರ ಜನಪದ ಧೀರನದ್ದು. ಉತ್ಸವದ ದಿನ ಭಸ್ಮಕ್ಕೆ ಬೆರೆಸಿ ನೀಡುವ ಕಾಮುಕಸ್ತೂರಿಯ ಮಾದಕ ಸುಗಂಧ ಪರಿಸರದುದ್ದಕ್ಕೂ ಹಬ್ಬಿಕೊಂಡು ವಿಶಿಷ್ಟ ಅನುಭವವನ್ನು ನೀಡುತ್ತದೆ.

ತುಳುನಾಡಿನುದ್ದಕ್ಕೂ ಅತಿ ಹೆಚ್ಚು ಮನ್ನಣೆಯನ್ನು ಪಡೆದಿರುವ ಅವಳಿ ಸಹೋದರ ದೈವಗಳಾದ ಕೋಟಿ, ಚೆನ್ನಯರು ಪೂಜಾರಿ ಸಮು ದಾಯಕ್ಕೆ ಸೇರಿದವರು. ಇದೇ ಕೋಟಿ, ಚೆನ್ನಯರನ್ನು ಸೋಲಿಸಿದ ವೃತ್ತಾಂತವಿರುವ ಮುಗೇರ್ಕಳ ದೈವಗಳು ದಲಿತ ಸಮುದಾಯವಾದ ಮುಗೇರ ಜಾತಿಯ ವೀರಾಗ್ರಣಿಗಳು. ಕರಾವಳಿ ಕರ್ನಾಟಕದ ಕಾರಣಿಕೆಯ ದೈವಗಳಾದ ಕಲ್ಕುಡ ಮತ್ತು ಕಲ್ಲುರ್ಟಿಗಳು ಶಿಲ್ಪಿ ಸಮುದಾಯಕ್ಕೆ ಸೇರಿದವರು. ಹೀಗೆ ಬೇರೆ ಬೇರೆ ಹಿನ್ನೆಲೆಯ ವ್ಯಕ್ತಿಗಳು ಭೂತಗಳಾಗಿ ಇಂದು ಜನ ಸಾಮಾನ್ಯರಿಂದ ಆರಾಧಿಸಲ್ಪಡುತ್ತಿದ್ದಾರೆ.

ಹಲವೊಮ್ಮೆ ಜಾತಿಜಾತಿಗಳ ನಡುವಿನ ಹೊಂದಾ

ಣಿಕೆಯ ರೀತಿ ಕುತೂಹಲಕಾರಿಯಾಗಿರುತ್ತದೆ. ಅಪರಿಮಿತ ಅಮಲು ಕೋರ 'ಕನ್ನ್ಯಾಭ್ರಾಂತ' ವಯನಾಟ್ಟು ಕುಲದೈವ ತೊಂಡಚ್ಚಮಾರ್ ಎಂಬ ಪ್ರಸಿದ್ಧ ತೆಯ್ಯಂ ನಡಾವಳಿ ಉತ್ಸವದ ಸಂದರ್ಭ ಪ್ರಥಮ ಗುಟುಕು ಮದ್ಯವನ್ನು ಸ್ವೀಕರಿಸುವುದೇ ಮಲಬಾರ್ ಮಾಪಿಳ್ಳೆಯೊಬ್ಬನಿಂದ. ತೀರಾ ವೃದ್ಧನಾಗಿದ್ದ ತೊಂಡಚ್ಚಮಾರ್‌ಗೆ ಆತ ಬದುಕಿದ್ದಾಗ ಮಾಪಿಳ್ಳೆಯೊಬ್ಬ ಗುಟ್ಟಾಗಿ ಸೆರೆಯನ್ನು ಕೊಡುತ್ತಿದ್ದನಂತೆ. ಅದರ ಪುನರಭಿನಯವಾಗಿ ಈಗ ಗುರುತು ಸಿಕ್ಕದಂತೆ ಮುಸುಕು ಹಾಕಿಕೊಂಡು ಮದ್ಯವನ್ನು ಕೊಡುವ ಆಚರಣೆ ಪ್ರಚಲಿತದಲ್ಲಿದೆ. ಅದು ನಡೆಯದಿದ್ದರೆ ನಡಾವಳಿ ಉತ್ಸವವೇ ಅಪೂರ್ಣ!

ಡಾ. ಪ್ರೋ.ಲಂಕಿ ರಾಮಮೂರ್ತಿಯವರ

11

ಸೀತಾಯಣ

ಗರಿಗಳಲ್ಲಿ ಮಾಡುವ ಸಾಂಪ್ರದಾಯಕ ಕೊಡೆ), ಮತ್ತೊಂದರಲ್ಲಿ ಒಂದು ಊರುಗೋಲು. ಇವಿಷ್ಟು ಮಾತ್ರ ಬ್ರಾಹ್ಮಣನ ಅಲಂಕಾರ. ಕಾಲಘಟ್ಟವೊಂದರಲ್ಲಿ ಬ್ರಾಹ್ಮಣ ರಿಗೆ ಇದ್ದ ನಿತ್ಯದ ಉಡುಗೆಗೆ ಒಂದು ಉತ್ಪ್ರೇಕ್ಷೆಯ. ಅಪ ಹಾಸ್ಯದ ಸ್ಪರ್ಶ ಮಾತ್ರ, ಬೇರೇನಿಲ್ಲ. ಈ ಬ್ರಾಹ್ಮಣ ಒಬ್ಬಂಟಿಯಾಗಿ ತಾನೊಬ್ಬನೇ ಮಾತಾಡಿಕೊಳ್ಳುತ್ತಾ ವೇಟೆ ಚೇಗವನ ಸನ್ನಿಧಾನಕ್ಕೆ ಹೋಗುವ ರೀತಿಯೇ ಅತೀ ರಸಮಯ. ಮಂಗಳಾದ್ವದ ಎಲ್ಲ ದೈವಗಳೂ ಅಬ್ಬರಿಸಿದರೆ, ಹೂಂಕರಿ ಸಿದರೆ, ಆರ್ಭಟಿಸಿದರೆ ಈ ಬ್ರಾಹ್ಮಣ ಮಾತ್ರ ಕ್ಷಣಕ್ಷಣಕ್ಕೂ ತೇಗುತ್ತಾನೆ. ಉದ್ದಕ್ಕೂ ತನ್ನನ್ನು ತಾನೇ ಪ್ರಶಂಸಿಸಿಕೊಳ್ಳುತ್ತಾ ಸಾಗುತ್ತಾನೆ. ವೇಟೆಚೇಗವ ದೈವದ ಮೇಲೆ ಅಪಾರವಾದ ಭಯಭಕ್ತಿಯಿಂದ ಅರ್ಚನೆ ನಡೆಸಲು ಹೋಗುತ್ತಿರುವುದಾಗಿ ಹೇಳುತ್ತಾನೆ. ಜೊತೆ ಜೊತೆಗೇ, "ಜಾನ್ ಪಶುಬ್ರಾಹ್ಮಣನ್ ಇಷ್ಪಾ" ("ನಾನು ಪಶುಬ್ರಾಹ್ಮಣ ಅಣ್ಣಾ") ಎಂದು ಆರ್ತಸ್ವರದಲ್ಲಿ ಹೇಳುತ್ತಿರುತ್ತಾನೆ. ವೈದಿಕ ಪುರಾಣಗಳಲ್ಲಿ ದನ ಮತ್ತು ಬ್ರಾಹ್ಮಣರನ್ನು ಪವಿತ್ರವಾದ ವಿಶಿಷ್ಟ ಗುಂಪಾಗಿ ಒಂದೆಡೆ ಇರಿಸಿ ಅವರಿಗೆ ಕೊಡಲಾದ ಅಪಾರವಾದ ಪ್ರಾಶಸ್ತ್ಯವನ್ನು ಅವಹೇಳನ ಮಾಡಲೋಸುಗ 'ನಾನು ಪಶುಬ್ರಾಹ್ಮಣ ಅಣ್ಣಾ' ಎನ್ನುವುದನ್ನು ಪದೇಪದೇ ಬಳಸಲಾಗುತ್ತದೆ. ಇದರೊಂದಿಗೆ, ವೈದಿಕರು ತಮ್ಮ ಸಾಂಸ್ಕೃತಿಕ ಯಜಮಾನಿಕೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ತಮ್ಮೆದುರು ಇರುವವರ ಎದೆ ಕರಗಿಸುವ ಸ್ವಯಂಕಾರುಣ್ಯ ತಂತ್ರದ ಪುನರಾಭಿನಯ ಸಹ ಇದಾಗಿದೆ. ಬ್ರಾಹ್ಮಣ ಹೀಗೆ ಮುಂದಕ್ಕೆ ಸಾಗಿದಂತೆ ಅಲ್ಲೊಂದು ತೊರೆ ಎದುರಾಗುತ್ತದೆ. ಕಲ್ಲಿಂದ ಕಲ್ಲಿಗೆ ಹಾರಿ ತೊರೆಯನ್ನು ದಾಟಲೆತ್ನಿಸಿದಾಗ ಜಾರಿ ಬಿದ್ದು ಸಂಪೂರ್ಣ ತೊಯ್ದು ಹೋಗುತ್ತಾನೆ. ಅದಾದ ಮೇಲೆ ದಾರಿಯಲ್ಲಿ ಕೋಲೊಂದು ಬಿದ್ದಿರುವುದನ್ನು ನೋಡಿ ಹಾವೆಂದು ಗ್ರಹಿಸುತ್ತಾನೆ. ಕೈಯಲ್ಲಿದ್ದ ಊರುಗೋಲಿಂದ ನೆಲಕ್ಕೆ ಹೊಡೆದು ಸಪ್ಪಳ ಮಾಡಿ ಹಾವನ್ನು ಓಡಿಸಲು ಪ್ರಯತ್ನಿಸುತ್ತಾನೆ. ಆದರೆ ಅದು ಮಿಸುಕಾಡುವುದಿಲ್ಲ. ಕೊನೆಗೆ ತನ್ನ ಕೋಲಿನಿಂದ ಪನೆಕೊಡೆಗೆ ಹೊಡೆದು ಇನ್ನಷ್ಟು ಸದ್ದು ಮಾಡುತ್ತಾನೆ. ಪನೆಕೊಡೆ ಹರಿದು ಹೋದರೂ ಹಾವು ಅಲ್ಲಾಡುವುದಿಲ್ಲ. ನಂತರ ಬ್ರಾಹ್ಮಣನಿಗೆ ಅದು ಕೋಲೆಂದು ಅರಿವಾಗುತ್ತದೆ. ಹೀಗೆ ನಿಸರ್ಗಕ್ಕೆ ಹೆದರಿಕೊಳ್ಳುತ್ತಾ ಭಯಗ್ರಸ್ತನಾಗಿರುವ ಬ್ರಾಹ್ಮಣ ಮಳೆ, ಬಿಸಿಲಿಗೆ ಆಶ್ರಯವಾಗಿದ್ದ ಇದ್ದೊಂದು ಪನೆಕೊಡೆಯನ್ನು ಕಳೆದುಕೊಳ್ಳುತ್ತಾನೆ. ಈ ರೀತಿ ಹಲವು ರಸಮಯ ಸನ್ನಿವೇಶಗಳನ್ನು ಸೃಷ್ಟಿಸುತ್ತಾ ವೇಟೆಚೇಗವನಲ್ಲಿಗೆ ಹೋದ ಬ್ರಾಹ್ಮಣ ಆ ದೈವದ ಪೂಜೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಒಟ್ಟಿಗೇ ಸೂಕ್ತ ಸಮಯಾವಕಾಶವನ್ನು ಉಪಯೋಗಿಸಿ ಕೊಂಡು ವೇಟೆಚೇಗವ ದೈವದ ಅಪಾರವಾದ ಚಿನ್ನಾಭರಣಗಳನ್ನು ಕಳ್ಳತನ ಮಾಡಿ ಅವಿಸಿಡುತ್ತಾನೆ. ಆದರೆ ಈ ಪ್ರಯತ್ನದಲ್ಲಿ ಸಿಕ್ಕಿಬಿದ್ದು ಅವಹೇಳನಕ್ಕೆ ಒಳಗಾಗುತ್ತಾನೆ. ತಾನು ವೇಟೆಚೇಗವ ದೈವದ ಮೇಲಿನ ಭಯಭಕ್ತಿಯಿಂದ ಬಂದುದಲ್ಲ, ಬದಲಿಗೆ ಆ ದೈವದ ಸಂಪತ್ತನ್ನು ಕೊಳ್ಳೆಹೊಡೆಯಲು ಬಂದಿರುವುದು ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಈ ರೀತಿ ವೇಟೆಚೇಗವ ಮತ್ತು ಬ್ರಾಹ್ಮಣ ಪ್ರಹಸನ ನಡೆಯುತ್ತದೆ.

ವೈದಿಕೇತರರ ಧಾರ್ಮಿಕ ಆಚರಣೆಗಳ ಮೇಲೆ ವೈದಿಕ ಬ್ರಾಹ್ಮಣರಿಗೆ ಪ್ರೀತಿಯಾಗಲೀ, ಗೌರವವಾಗಲೀ ಇಲ್ಲವೆಂಬುದು ಸರ್ವವಿದಿತ. ಹಾಗಿದ್ದೂ ಇಂದು ನಮ್ಮ ಜನಪದರ ನಂಬಿಕೆಯ ಕ್ಷೇತ್ರಗಳಲ್ಲಿ ಇವರುಗಳ ಹಸ್ತಕ್ಷೇಪ ಮಿತಿಮೀರಿದೆ. ಶೂದ್ರರ ಮನೆಯಂಗಳದ ಕೋಳಿ ಹೇಲು, ಹಂದಿಹೇಲುಗಳು ಇವರಿಗೆ ಈಗ ಅಸಹ್ಯವನ್ನು ಹುಟ್ಟಿಸುತ್ತಿಲ್ಲ, ಬ್ರಾಹ್ಮಣೇತರರ ಆರಾಧನಾ ಸ್ಥಳಗಳಲ್ಲಿ ಸಂಘಪರಿವಾರದ ತಂತ್ರಗಳು, ಕಾರ್ಯಕ್ರಮಗಳು ಇಂದು ದಟ್ಟವಾಗಿ ಕೆಲಸ ಮಾಡುತ್ತಿವೆ. ರಾಜಕೀಯ ಅಧಿಕಾರ ಮತ್ತು ಅಂತಿಮವಾಗಿ ಶ್ರೇಣೀಕೃತ ವ್ಯವಸ್ಥೆಯನ್ನು ಅಬಾಧಿತವಾಗಿ ಸ್ಥಿರಗೊಳಿಸುವುದೇ ಎಲ್ಲದರ ಮೂಲ ಉದ್ದೇಶ. ಸಾಂಸ್ಕೃತಿಕ ಯಜಮಾನಿಕೆಯನ್ನು ಸ್ಥಾಪಿಸಲು ದೈವ ದೇವರುಗಳ ಹೆಸರಿನ ಬಳಕೆಗಿಂತ ಸುಲಭದ ಸುಸೂತ್ರವಾದ ಶ್ರಮರಹಿತ ದಾರಿ ಇನ್ನೊಂದಿಲ್ಲ, ಈ ತಂತ್ರಕ್ಕೆ ಬಲಿಯಾಗಿ ತಮ್ಮ ಸಂಸ್ಕೃತಿಯ ತಾಯಿ ಬೇರುಗಳನ್ನು ಕಳಚಿಕೊಳ್ಳುತ್ತಿರುವ ದೊಡ್ಡದೊಂದು ಜನ ಸಮುದಾಯ ನಮ್ಮ ಮುಂದಿದೆ. ಈ ಜನರ ಸಮೃದ್ಧ ಜಾನಪದ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವಷ್ಟು ಸಶಕ್ತವಾಗಿದೆ ಎನ್ನುವುದೊಂದು ನೆಮ್ಮದಿಯ ಅಂಶ. ಸಾಂಸ್ಕೃತಿಕ ಶೋಷಣೆಯ ಕಬಂಧಬಾಹುಗಳು ವಿಸ್ತರಿಸಿದಷ್ಟೂ ನಮ್ಮ ಜನ ಸಾಮಾನ್ಯರ ಬದುಕು, ನಂಬಿಕೆ, ಆಚರಣೆಗಳಲ್ಲಿ ಅಂತ ರ್ಗಾಮಿಯಾಗಿ ಪ್ರವಹಿಸುತ್ತಿರುವ ಎಲ್ಲ ಅವೈದಿಕ ಅಲೆಗಳೂ ಒಮ್ಮೆಲೇ ಮೇಲೆದ್ದು ಅನ್ಯಾಯವನ್ನು ಪ್ರತಿಭಟಿಸುವುದರಲ್ಲಿ ಸಂಶಯವಿಲ್ಲ, ಬಹುಶಃ ಅಂ...

ಅನೂಚಾನವಾಗಿ ನಡೆದುಬಂದ ಸಂಪ್ರದಾಯೀ ಪಾರಾಯಣ ರಾಮಾಯಣವನ್ನು ರಾಮನ ಪುರುಷೋತ್ತಮತೆಯನ್ನೂ ಸೀತೆಯ ಪಾತಿವ್ರತ್ಯವನ್ನೂ ಕೀರ್ತಿಸುವ ಕುರುಡು ಪಾಠ, ಪಠನೆಯಾಗಿರುವುದರಿಂದ, ಆ ಅಭ್ಯಾಸದ ಜಾಡು ಆಳವಾಗಿ ಪಾತಾಳಕ್ಕೇ ಇಳಿದಿರುವುದರಿಂದ ರಾಮಾಯಣವನ್ನು ಕಣ್ಣುಜ್ಜಿಕೊಂಡು, ಹೊಸತಿನಲ್ಲಿ, ಹೊಸ ಬೆಳಕಿನಲ್ಲಿ, ಮೊಟ್ಟಮೊದಲಿಗರಾಗಿ ಓದುವ ಇನೋಸೆನ್ಸ್ (innocense) ಅನ್ನು, ಮುಕ್ತತೆಯನ್ನು, ನಾವು ಪಡಕೊಳ್ಳುವುದು ಕಷ್ಟವಾಗಿದೆ. ನಮಗೆ ಏಕೆ ಒಂದು ಕಾವ್ಯದ ಓದು ಪ್ರಾಮಾಣಿಕವಾಗಿ ಕರಗತವಾಗದು ಎನ್ನುವುದಕ್ಕೆ ಒಂದೇ ಒಂದು ಪ್ರಬಲವಾದ ಕಾರಣ-ನಮ್ಮಲ್ಲಿ ನಾವು ಕಳೆದುಕೊಂಡ ಮಗುತನ, ಇನೋಸೆನ್ಸ್, ಮುಗ್ಧತೆ, ಮುಕ್ತತೆಯೆಂದೇ ತೋರುತ್ತದೆ. ಏಕೆಂದರೆ ನಮ್ಮಲ್ಲಿ ಯಾರು ಈ ಮಗುತನದ ಮುಗ್ಧತೆ-ಮುಕ್ತತೆಯನ್ನು ತಮ್ಮ ವಿದ್ಯೆ ಮತ್ತು ಪಾಂಡಿತ್ಯಗಳಲ್ಲಿ ಉಳಿಸಿಕೊಂಡು ಬಂದಿದ್ದಾರೋ ಅಥವಾ ಯಾರು ನಮ್ಮ ಜನಸಾಮಾನ್ಯರಾದ ಅನಕ್ಷರಸ್ಥರಂತೆ, ಜ್ಞಾನದ ಅಹಂಕಾರವಿರದ ಮುಗ್ಧರಾಗಿದ್ದಾರೋ ಅವರು ಇಂತಹ ಓದಿನ ಅಂತರಂಗವನ್ನು ಸಹಜವಾಗಿ, ಇನ್‌ಸ್ಟಿಂಕ್ಟಿವ್ ಆಗಿ ಅರಿಯಬಲ್ಲವರಾಗಿದ್ದಾರೆ. "ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮ ಸೀತೆಗೇನಾಗಬೇಕು" ಎಂದು ಹೇಳುವ ಹಳ್ಳಿಗ, ಮುಗ್ಧ ಅನಕ್ಷರಸ್ಥ ಇನ್‌ಸ್ಟಿಂಕ್ಟಿವ್ ಮಟ್ಟದಲ್ಲಿ ಸೀತೆಯ ಬಗೆಗಿನ ರಾಮನ ವರ್ತನೆಯನ್ನು ಕಂಡು ಕಕ್ಕಾವಿಕ್ಕಿಯಾಗಿ ಇವನು ಸೀತೆಯ ಗಂಡನೇ ಎಂಬ ಗೊಂದಲಕ್ಕೆ ಸಿಕ್ಕ ಪ್ರಾಮಾಣಿಕ ಬಡಪಾಯಿಯಾಗಿದ್ದಾನೆ. ಅವನ ಮಾತನ್ನೇ, ಪ್ರಶ್ನೆಯನ್ನೇ, ಯಾವ ಪ್ರೌಢ ಓದುಗನೂ ಹೇಳಬೇಕಾಗುತ್ತದೆ, ಕೇಳಬೇಕಾಗುತ್ತದೆ. ಆ ಅನಕ್ಷರಸ್ಥ ಸಾಮಾನ್ಯನ ತಿಳಿವಳಿಕೆ. ಎಷ್ಟು ಅಮೂಲ್ಯವಾದುದು ಎನ್ನುವುದಕ್ಕೆ ನಾನು ಜನಪದ ರಾಮಾಯಣದಲ್ಲಿನ ಸೀತೆ, ವಾಲ್ಮೀಕಿ ರಾಮಾಯಣದ ಸೀತೆಗೆ ಹೇಗೆ ಪಡಿಯಚ್ಚಾಗಿದ್ದಾಳೆ ಎನ್ನುವುದನ್ನು ಓದುಗರ ಮುಂದಿಡುತ್ತಿದ್ದೇನೆ. ಇಲ್ಲಿ ನಾನು ಮೇಲೆ ಕಾಣಿಸಿದ ಸೀತಾ ರಾವಣರ ಸನ್ನಿವೇಶ, ಸಂಬಂಧಗಳ ಬಗ್ಗೆ ಜನಪದ ರಾಮಾಯಣ ಏನು ಹೇಳುತ್ತದೆ ಎಂದು ಎಲ್ಲರ ಗಮನಕ್ಕೆ ತರುತ್ತಿದ್ದೇನೆ.

ಇದು "ಪಟದ ರಾಮಾಯಣ"ವೆಂದು ಹೆಸರಾದ ಹೆಳವನಕಟ್ಟೆ ಗಿರಿಯಮ್ಮನ "ಲವಕುಶರ ಕಾಳಗ"ವೆಂಬ ಕಥೆ. ಅದನ್ನು ಡಾ. ಸರೋಜಿನಿ ಮಹಿಷಿಯವರು ಸಂಗ್ರಹವಾಗಿ ಕೊಟ್ಟಿರುವುದನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ:

ಲವಕುಶರ ಕಾಳಗ (ಪಟದ ಸಂಧಿ): ಇದೂ ಗಿರಿಯಮ್ಮನು ರಚಿಸಿದ ಕೃತಿ: ಪಟದ ಸಂಧಿಯ ಕಲ್ಪನೆ ಹೊಸದು! ಅಗಸನು ಶ್ರೀರಾಮನನ್ನು ನಿಂದಿಸಿದ ವಿಚಾರವನ್ನು ಕವಯಿತ್ರಿ ತೆಗೆದುಕೊಂಡಿಲ್ಲ, ಗರ್ಭಿಣಿ ಸೀತೆಯನ್ನು ನೋಡಿ ವಸಿಷ್ಠರು ಆಗಲೇ ಒಳಗಣ್ಣಿನಿಂದ ನೋಡಿದರು

.... ಮುನಿಯು ತಾನು ಜ್ಞಾನದೃಷ್ಟಿ ತಳೆದು ನೋಡಿ I

ಅರಣ್ಯದೊಳೀಕೆ ಹೆರುವೋಳೆಂದೆನುತಲಿ ಆ ಮುನಿ ಮರುಗಿ ಚಿಂತಿಸಿII

ಮುನಿಗಳ ಆಶ್ರಮದಲ್ಲಿ ವನಭೋಜನ ಮಾಡಬೇಕೆಂದು ಬಯಸಿದಳು ಸೀತೆ! ಒಂದು ದಿನ ರಾಮ-ಲಕ್ಷ್ಮಣರು ಬೇಟೆಗೆ ಹೊರಟರು: ಕಾಲಾಳು, ದಳ ಎಲ್ಲ ಹೊರಟಿತು! ಬೇಟೆಯಾಡಿ ದಣಿದು ವಿಶ್ರಾಂತಿ ಪಡೆಯುತ್ತಿದ್ದ ರಾಮನಿಗೆ ದುಃಸ್ವಪ್ನವಾಯ್ತು! ಇತ್ತ ಶೂರ್ಪನಖಿ ಕೊರವಿಯಾಗಿ ಸೀತೆಯ ಬಳಿಗೆ ಬಂದಳು.

'ಆವ ಕುಲವ ನೀನು ಏನು ಕಾರಣ ಬಂದಿ ಈ ನಾಡ ಕೊರವಿ ನೀನಲ್ಲ' ಎಂದು ಸೀತೆ ಕೇಳಿದಳು; ಕೊರವಿ ನಾಗಮಲ್ಲಿಗೆ ಹೂವನ್ನು ತಂದು,

'ಇಂದುವದನೆ ನೀನು ಮುಡಿಯೆಂದು ಕೊಟ್ಟರೆ ಸಂದೇಹಪಟ್ಟಳು ಸೀತೆ!

ಕೊರವಿ ಸಾಮಾನ್ಯಳಲ್ಲ:

ಅನ್ನ ವಸ್ತ್ರವನ್ನೊಲ್ಲೆ ಹೊನ್ನು ಹಣವನೊಲ್ಲೆ ನಿನ್ನ ಭಾಗ್ಯವನು ನಾನೊಲ್ಲೆI

ಮುನ್ನಿನಸುರನ ರೂಪ ಇನ್ನು ನೀ ಬರೆದರೆ ಚೆನ್ನಾಗಿ ಹರಸ ಗೆಲ್ಲುವೆನುII

ಇದು ಕೊರವಿಯ ಬೇಡಿಕೆ: ಸೀತೆ ಒಪ್ಪದಿರಲು ಕೊರವಿ ಮರಳು ತಂದು ಭಸ್ಮ ತೊಳೆದು ಸಿಂಪಡಿಸಿದಳು: ಆಗ ಸೀತೆ ತಾನು ರಾವಣನ ಅಂಗುಷ್ಟವನ್ನು ಮಾತ್ರ ಬಲ್ಲೆನೆಂದಳು:

ಅಂಗುಷ್ಠ ಎಂಬುದಕ ಮುಂದ ಪಾದವ ಬರಿ, ಹಿಂಬಡಕ ಕಾಲು ಛಂದಾದ ನಡ ಧಡ....

ಹತ್ತು ತಲಿಯವನ ಇಪ್ಪತ್ತು ಕರಗಳು ಬೆಟ್ಟದ ಕೆದರಿದಂಥ ಕಾಯಕ ಹತ್ತು ಶಿರಗಳ ಬರೆದಾಳು ಮುಂದೆರಡು ಪಾದ ಬರೆದಳು

ಮುಂದೆರಡು ಪಾದ ಬರೆದಳು ಒಂದರ ಹಿಂದೊಂದು ವರ್ಣಿಸಿ ಬರೆದಳು ತಂದು ನಿಲ್ಲಿಸಿದಳು ರಾವಣನ.....

ಕೊರವಿ ಬೇಡಿದಳು-

'ಚೆಂದವಾದೀತು ಸೀತ ವರದ ಕೊಡೆಂದಳು ಎಂದೆಂದಿಗೂ ಅಳಿಯದಂತೆ' ಸೀತೆ ಅಳಿಯದಿರೆಂದು ಕೊಟ್ಟು ಒಂದು ನಿರ್ಬಂಧವನ್ನು ಮಾತ್ರ ಇಟ್ಟಳು. 'ಕಿರಿಯ ಲಕ್ಷ್ಮಣದೇವ ಹೊಡದರ ಮಡಿಯೆಂದು ವರವ ಕೊಟ್ಟಳು ಶ್ರೀಪಟಕ।

ಆ ಪಟವನ್ನು ಮೇಲೆ ಹಾರಿಬಿಟ್ಟವಳೇ ಕೊರವಿ ನೆಗೆದುಬಿಟ್ಟಳು. ಆ ಪಟ ಕುಣಿಯತೊಡಗಿತು। ಹರದಿ ಜಾನಕಿ ಕೊಟ್ಟ ವರದ ಕಾರಣದಿಂದ ಯಾರಿಗೂ ಅಸುಗೊಳ್ಳದೆ ಕುಣಿಯಿತು.

ಇಂದಿನ ವಿಧಿಯನೆ ಕಳೆಯಲಾರೆನೆಂದು ಬಂದೊರಗಿದಳು ಮಂಚದಲಿ।

ಛಂದಾಗಿ ಸೀರೆಯ ಮುಸುಕಿನಲಿ ಆ ಪಟ ಬಂದೆರಗಿತು ತೋಳ ಎಡೆಗೆ ॥

ಸೀತೆಯ ವರ ಪಡೆದ ಆ ಪಟ ಉರಿಯಲ್ಲಡಗಲಿಲ್ಲ, ಶರಧಿಯಲ್ಲಿ ಮುಣುಗಲಿಲ್ಲ ಸೀತೆ ಕುಣಿಯುತ್ತಿದ್ದ ಪಟವನ್ನು ಹಾಸಿಗೆಯ ಕೆಳಗೆ ಹಿಡಿದಿಟ್ಟು ಮಲಗಿದಳು. ಬೇಟೆಯಿಂದ ಬಂದ ರಾಮನನ್ನು ಸೀತೆ ಎದುರುಗೊಳ್ಳಲಿಲ್ಲ. ಚಿಂತಾತುರನಾಗಿ ರಾಮನು ತಾನಿದ್ದಲ್ಲಿಯೇ ಸೀತೆಯನ್ನು ಕರೆಸಿದಾಗ ವಿಷಣ್ಣವದನೆಯಾಗಿ ಆಕೆ ಕಂಡಳು: ಸೀತೆ ರಾವಣನ ಪಟವನ್ನು ಹಿಡಿದಿಟ್ಟದ್ದ ಮಂಚದ ಮೇಲೆ ಶ್ರೀರಾಮನು ಕುಳಿತೊಡನೆ ಮಂಚ ಮುರಿದು ಬಿತ್ತು!

ತಂದೆಯ ಕಾಲದ ಹಿರಿದೊಡ್ಡ ಸಿಂಹಾರಿ ತುಂಡಾದ ವೆರಡು ಭಾಗದಲಿ।

ಇಂದೇನು ಕಾರಣ ಎನುತ ಲಕ್ಷ್ಮಣ ಬಂದು ಹಾಸಿಗೆಯ ನೋಡಿದನು॥

ಹತ್ತು ತಲೆ ರಾವಣನ ಪಟ ಎದ್ದು ಕುಣಿದಿತು:



'ಪಟದ ರಾಮಾಯಣ'ದ ಒಂದು ದೃಶ್ಯ

ರಾಮ-ಲಕ್ಷ್ಮಣರಿಗೆ ಆಶ್ಚರ್ಯ, ಕೋಪ, ದುಃಖI

ಏಸು ದಿವಸ ಘಾಸಿಯಾಗಿ ಬರೆದಿ ಇವನ ಏಸು ದಿವಸ ಭೋಗಿಸಿದೆI

ಮೋಸ ಮಾಡಿದಿ ದೇವಿ ಎನಕೂಡ ಹೇಳದೆ ಘಾಸಿ ಮಾಡಿದ ಎನ್ನನೆಂದಾII

ಹೆಂಗಸು ಹಡೆತಲಿ ಮೃತ್ಯುವೆಂಬರು ಜನರು ಇಂದ ಕಂಡೆನು ಸಾದೃಶ್ಯI

ಇಂದ ನಾ ಮಲಗುವ ಹಚ್ಚೆ ಮಂಚದ ಮ್ಯಾಲೆ ಬಿಂಬವ ಬರೆದು ಭೋಗಿಸಿದ್ಯಾII

ಸೀತೆ ದುಃಖ ತುಂಬಿ ಹೇಳಿದಳು:

ಇಂದು ರಾಮರೆ ಕೇಳಿ ಬಂದೊಬ್ಬ ಪಾಟಕಿ ಇಂದು ಮೋಸಮಾಡಿ ನನ್ನI

ಇಂದು ಮೋಸವ ಮಾಡಿ ನನ್ನ ಛಂದಾದ ಚಿತ್ರ ಪಟದ ಬರೆದು ತಂದು ಬಿಟ್ಟಳು ನನ್ನ ಮ್ಯಾಲೆII


ರಾಮನು ನೇರವಾಗಿ ಸೀತೆಯ ಮೇಲೆ ಆಕ್ಷೇಪಮಾಡಿ ವಿಚಾರವೂ ಹೊಸದೇ:

ಭೂಮಿದೇವಿ ಮಗಳೆಂದು ನಾ ತಂದೆನು ನಾಡೊಳಗೆ ಪತಿವ್ರತೆಯೆಂದುI

ಪ್ರಾಣದೊಲ್ಲಭೆ ನೀನು ಗತಿಯೆಂದು ನಂಬಿದೆ ರಾವಣಗ ಮರುಳಾಗೋದರಿಯಿII

ಲಕ್ಷ್ಮಣನು ಪಟವನು ಹರಿದು ಹಾಕಿದ್ದಕ್ಕೆ ಶ್ರೀರಾಮ ಕೋಪಿಸಿದ:

'ಪಟ ಬಿದ್ದಲ್ಲಿಗೆ ಸಂದೊಂದು ಮುಗದಾವು ಮುಂದ ವನವಾಸ ಸದುಗಳು.' ಜಾನಕಿಯನ್ನು ಕೊಂದು ಬರಬೇಕೆಂದು ವಿಧಿಸಿ ಲಕ್ಷ್ಮಣನನ್ನು ಜಾನಕಿಯೊಡನೆ ವನಕ್ಕೆ ಕಳಿಸುತ್ತಾನೆ ರಾಮ! ಲಕ್ಷ್ಮಣನಿಗೆ ದಾರಿಯಲ್ಲಿ ಶುಭ ಚಿಹ್ನೆಗಳೇ ಕಂಡವು. ಸೀತೆ ಲಕ್ಷ್ಮಣನಿಗೆ ಹೇಳಿದಳು, 'ಆಳಿದ ಒಡೆಯರು ಹೇಳಿದುದ್ಯೋಗವ ಮಾಡಿದವರಿಗೆ ಪಾಪವಿಲ್ಲ!' ಎಂದು. ತನ್ನ ವಧೆಗೈಯ್ಯಲು ರಾಮನು ಹೇಳಿದ್ದಾನೆಂದು ಸೀತೆಗೆ ಗೊತ್ತು! ಲಕ್ಷ್ಮಣನು ಖಡ್ಗವನ್ನೆತ್ತಲು ದೇವತೆಗಳು ಅಡ್ಡಬಂದರು; ವಧೆಗೈಯ್ಯದೆ ಗುರುತನ್ನು ಮಾತ್ರ ಒಯ್ದನು. ಕೊಲ್ಲದೆ ಬಿಟ್ಟರೆ ತಾನು ಅಪಕೀರ್ತಿಗೆ ಗುರಿಯಾಗುವೆನೆಂಬ ಸೀತೆಯ ಮಾತಿಗೆ ಲಕ್ಷ್ಮಣ ಹೇಳಿದ:



ಕೆಂಡಕ್ಕೆ ಗೊರಲಿ ಮುಟ್ಟುವದೇನೆ ಎಲೆ ತಾಯಿ ಚಂದ್ರಮಗ ರವಿ ಬಿಸಿಲುಂಟೆ?।

ಮುಂದೇಳು ಲೋಕವ ಸಲಹುವ ಜಗನ್ಮಾತೆಗೆ ನಿಂದ್ಯಪಕೀರ್ತಿಂಬೊದುಂಟೆ?॥

ಸೀತೆಯನ್ನು ಕೊಂದು ಬಂದೆನೆಂದು ಲಕ್ಷ್ಮಣನ ನುಡಿ ಕೇಳಿ ರಾಮುನಿಗೆ ವ್ಯಸನವಾಯಿತು. ಸಂತಾಪದ ಭರದಲ್ಲಿ ಹೇಳಿದ ಮಾತನ್ನು ನಡೆಸಿಯೇ ಬಿಡಬೇಕೆ?-ಎಂದು ರಾಮ ಕೇಳಿದ: ಶೋಕ-ಕರುಣೆಗಳ ಮಧ್ಯದಲ್ಲಿಯೂ ಕವಯತ್ರಿಗೆ ಹಾಸ್ಯರಸ ನೆನಪಾಗಿದೆ.

ಸಿಟ್ಟಿನ ವೇಳೆಗೆ ಮೂಗು ಕೊಯ್ದರೆ ಅಣ್ಣಾ ಶಾಂತವೇಳೆಗೆ ಹತ್ತುವದೇ।

ಸೀತೆ ನೆನೆಯುವದ್ಯಾಕ ತಾಪಪಡುವದ್ಯಾಕ ಶೋಕವಿನ್ಯಾತಕೊ ಸ್ವಾಮೀ॥

ವಾಲ್ಮೀಕಿಯ ರಾಮಾಯಣದಲ್ಲಿ ರಾವಣ ಭಿಕ್ಷುಕನಾಗಿ ಬಂದಿದ್ದಾನೆ: ಇಲ್ಲಿ, ಪಟದ ರಾಮಾಯಣದಲ್ಲಿ, ರಾವಣನ ತಂಗಿ ಭಿಕ್ಷಾರ್ಥಿಯಾಗಿ ಬಂದಿದ್ದಾಳೆ. ಅಲ್ಲಿ ರಾವಣ ಸೀತೆಯ ಅಂಗಾಂಗ ವರ್ಣನೆಯನ್ನು ಮಾಡುತ್ತಾನೆ; ಇಲ್ಲಿ ಸೀತೆ ರಾವಣನ ಅಂಗಾಂಗಗಳನ್ನು ಚಿತ್ರಿಸಿದ್ದಾಳೆ. ಅಲ್ಲಿ ಸೀತೆಯ ಅಂಗಾಂಗಗಳನ್ನು ವರ್ಣಿಸುತ್ತಾ ರಾವಣ ಸವಿಯುವಂತೆ ಇಲ್ಲಿ ಸೀತೆ ಅವನ ದೇಹದೊಂದೊಂದು ಭಾಗವನ್ನೂ ಚಿತ್ರಿಸುತ್ತಾ ಸವಿಯುತ್ತಿದ್ದಾಳೆ. ಇಲ್ಲಿ 'ಛಂದಾದ ನಡಧಡ' 'ಬೆಟ್ಟವ ಕೆದರಿದಂಥ ಕಾಯಕ', 'ಮುಂದೆರಡು ಪಾದವ ಬರೆದಳು' 'ಒಂದರ ಹಿಂದೊಂದು ವರ್ಣಿಸಿ ಬರೆದಳು' ಈ ಪದಗಳಲ್ಲಿನ ರಾವಣನ ದೇಹ ಭಾಗಗಳ ಬಗೆಗಿನ ಸೀತೆಯ ಮೆಚ್ಚುಗೆ ನಾವು ಗಮನಿಸಬೇಕಾಗಿದೆ. ಮಹಿಷಿಯವರು 'ನಡಧಡ'ದ ಮುಂದಿನ ದೇಹಭಾಗ ವರ್ಣನೆಗಳನ್ನು ಕೊಟ್ಟಿಲ್ಲ. ಅವು ಅಂಗಾಂಗಗಳ ಲೈಂಗಿಕವಾದ ವರ್ಣನೆಗಳೋ ಅಥವಾ ಬರಿಯ ಅಂಗಾಂಗಗಳ ಪಟ್ಟಿಯೋ ನಮಗೆ ತಿಳಿಯದು. ಆದರೆ ಈ ವರ್ಣನೆಯ ರೀತಿಯನ್ನು ನೋಡಿದರೆ ಅದು ಅಂಗಾಂಗಗಳ ಮೆಚ್ಚುಗೆಯ ಚಿತ್ರಣವಾಗಿ ಕಂಡುಬರುತ್ತದೆ.

ಇಲ್ಲಿ ಬರವಣಿಗೆ ಫ್ಯಾಲಿಕ್ (Phallic) ಸಂಕೇತವಾದ 'ಅಂಗುಷ್ಟ'ದಿಂದ ಆರಂಭವಾಗುತ್ತದೆ. ಬರವಣಿಗೆ, ಚಿತ್ರಣ, ವಸ್ತುವನ್ನು ಆತ್ಮೀಯವಾಗಿ ಗ್ರಹಿಸುವ, ಅನುಭವಿಸುವ, ಸವಿಯುವ ಕ್ರಿಯೆಯಾಗಿದೆ. ಅದನ್ನು ಸೀತೆಯೇ ಮಾಡುತ್ತಾಳೆ-ಅವಳೇ ಅಂಗೋಪಾಂಗಗಳ ಸೌಂದರ್ಯ ಸಂಭ್ರಮಗಳನ್ನು ತನ್ನ ಚಿತ್ರಣದಲ್ಲೇ ವಿಜೃಂಭಿಸುತ್ತಾ ಅನುಭವಿಸುತ್ತಾಳೆ. ಅಲ್ಲಿ ಸೀತೆ ಹೇಗೆ ರಾವಣನು ತನ್ನನ್ನು ಶೃಂಗಾರ ವರ್ಣನೆಗಳಿಂದ ಸವಿಯುತ್ತಿರುವಾಗ ತಾನೂ ಅನುಮೋದಿಸುತ್ತಾ ಉದ್ರಿಕ್ತಳಾಗಿದ್ದಳೋ ಹಾಗೇ ಇಲ್ಲಿ ಸೀತೆ ರಾವಣನ ಶೃಂಗಾರ ವರ್ಣನೆಯನ್ನು ಚಿತ್ರಿಸುತ್ತಾ ಆ ಚಿತ್ರಾನುಭವವನ್ನು ನಿಜಗೊಳಿಸಲೋ ಎಂಬಂತೆ ಸರಾಗವಾಗಿ ಕೊರವಿಯ ಸಲಹೆಯ ಮೇರೆಗೆ ಅದಕ್ಕೆ ಜೀವದಾನ ಮಾಡುತ್ತಾಳೆ. 'ಎಂದೆಂದಿಗೂ ಅಳಿಯದಂತೆ'-ಆದರೆ "ಕಿರಿಯ ಲಕ್ಷ್ಮಣದೇವ ಹೊಡೆದರ ಮಡಿ"ಯುವಂತೆ.

(ಮುಂದುವರೆಯುವುದು)

ಅಂಗೀಕಾರ ಆಗದ ರಾಜೀನಾಮೆಗೆ ಎಲ್ಲರೂ ಸಿದ್ಧ!

ಥೂ ಥೂ ನೋಡೋಕಾಗಲ್ಲ ಅವರ ಪರದಾಟಾನ....

ನಂ ಸಂಸದ ತೇಜಸ್ವಿನಿ ಶ್ರೀ ರಮೇಶ್ ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು ಬರುತ್ತಿದ್ದಂತೆ ಚುರುಕಾದರು. ಅಲ್ಲಿ, ಇಲ್ಲಿ ಹೋದರೆ ಮೂರುಕಾಸಿನ ಉಪಯೋಗಾನೂ ಇಲ್ಲ, ಜನ ಸೇರಿರೋ ಕಡೆ ಹೋಗಿ ತಮ್ಮ ಅದ್ಭುತ ವಾಕ್ಚಾತುರ್ಯದಿಂದ ಜನರನ್ನು ಮರುಳು ಮಾಡಬಹುದು ಅಂತ ರೈತ ಹಿತರಕ್ಷಣಾ ಸಮಿತಿಯ ಮಾದೇಗೌಡರನ್ನು ತಬ್ಬಿಕೊಂಡರು. ಈ ತೀರ್ಪನ್ನು ಕೇಳಿ ಮಂಡ್ಯದ ಜನತೆ ಆಕ್ರೋಶದಿಂದ ಕುದಿಯುತ್ತಿದ್ದಂತೆ ಅದಕ್ಕೆ ಒಂದಿಷ್ಟು ತುಪ್ಪ ಸುರಿದು ರಾಜ್ಯ ಸರ್ಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟಿ ಸೋನಿಯಾ ಮೇಡಂ ಹತ್ತಿರ ಸೈ ಅನ್ನಿಸಿಕೋಬೇಕು ಅನ್ನೋ ಕನಸು ಕಾಣ್ತಾ ಮಂಡ್ಯಕ್ಕೆ ಬಂದರು. ಅಲ್ಲಿ ನೋಡಿದರೆ ಲಕ್ಷಾಂತರ ಜನ ಬೇಡ, ಸಾವಿರಾರು ಜನ ಬೇಡ, ನೂರಾರು ಜನರೂ ಇರಬೇಡವೆ.

ಎಷ್ಟೇ ಆಗಲಿ ಚಾಣಾಕ್ಷ ಸಂಸದೆ ನೋಡಿ. ಇದ್ದ ಜನರ ಮುಂದೇ ತಮಗಾದ ನಿರಾಶೆ ತೋರಿಸದೆ ಭಾಷಣ ಜಡಿದರು. ಮಂಡ್ಯದ ಸಾವಿರಾರು ರೈತರು ಕಾಲುನಡಿಗೆಯಲ್ಲಿ ಬೆಂಗಳೂರಿಗೆ ಬಂದು ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಬೇಕು ಎನ್ನುವ ಅದ್ಭುತ ಸಲಹೆ ನೀಡಿದರು. ಈ ಸಲಹೆ ನೀಡುವ ಮುನ್ನ ಸ್ಥಳೀಯ ನಾಯಕರ ಮನಸ್ಸನ್ನು ಓದಿದ್ದರಾ, ಚರ್ಚೆ ನಡೆಸಿದ್ದರಾ ಅನ್ನುವುದನ್ನು ಸಂಸದೆಗೆ ಕೇಳಬಾರದು ಬಿಡಿ.

ಅಲ್ಲಿಂದ ಮೈಸೂರಿಗೆ ಹಾರಿದರು. ವಿದ್ಯಾರ್ಥಿನಿಯರ ಮುಂದೆ ಅಂತಹದ್ದೇ ಉದ್ರೇಕಕಾರಕ ಭಾಷಣ ಬಿಗಿದರು. ಅವರ ಮೆರವಣಿಗೆಯಲ್ಲೂ ಭಾಗವಹಿಸಿ ಮಿರಿ ಮಿರಿ ಮಿಂಚಬೇಕು ಅಂತಿದ್ದಾಕೆಯನ್ನು ಅಲ್ಲಿ ಉಗಿದು ಹೊರಗಟ್ಟಿದ್ದು ಹಳೆಯ ಸುದ್ದಿ. ಆಮೇಲೆ ಏನು ಮಾಡಿದರು ಅಂತೀರಿ... ಅಲ್ಲಿಂದ ನೇರವಾಗಿ ವಿದೇಶಕ್ಕೆ ಹಾರಿದರು. ಅದ್ಯಾವುದೋ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು! ಕಾವೇರಿ ನೀರಿಗಿಂತ ಅದೇ ಮುಖ್ಯ ನೋಡಿ!

ಆಮೇಲೆ ಏನು ಮಾಡಿದರು ಅಂದರೆ... ಮತ್ತೆ ಮಾದೇಗೌಡರಿಗೆ ಗಂಟುಬಿದ್ದರು. ಮಂಡ್ಯದ ಮಂತ್ರಿಯಾಗಿದ್ದ ಎಸ್.ಡಿ. ಜಯರಾಂ ಅವರನ್ನು ಮಂಕು ಹಿಡಿಸಿದ ಹಾಗೆ ಆ ಮುದುಕನ್ನ ಮರುಳು ಮಾಡಬಹುದು ಅಂದುಕೊಂಡಿರಬೇಕು ಈ ಬಿನ್ನಾಣಗಿತ್ತಿ, ಯಾವಾಗ ಈ ಮುದಿ ಮೀನು ತಾನು ಬೀಸಿದ ಬಲೆಗೆ ಬೀಳಲಿಲ್ಲವೋ ಪತ್ರಕರ್ತರ ಮುಂದೆ "ಪಾದಯಾತ್ರೆ ನಡೆಸಿ ಅನ್ನುವ ನನ್ನ ಸಲಹೇನ ಯಾರೂ ಪರಿಗಣಿಸಲೇ ಇಲ್ಲವಲ್ಲ" ಅಂತ ಗೋಳಾಡಿಕೊಂಡರು.

ಹೀಗೆ ಇಲ್ಲಿನ ಜನ ಮಾಡಿದ್ದರೆ ತಾನು ರಾಜಭವನದ ಬಳಿ ಬಂದು ವಾಖರಿ ಪ್ರದರ್ಶಿಸಿ ಮಿಂಚುವ ಅವಕಾಶ ಹಾಳಾಯಿತಲ್ಲ ಅಂತ ಮರುಗಿದರು ಅಂತ ಕಾಣುತ್ತೆ..... ಅಲ್ಲ ಮಂಡ್ಯದಿಂದ ಪಾದಯಾತ್ರೆ ಮಾಡಿ ಅನ್ನುವ ಈ ಸಂಸದೆ ತನ್ನ ಕ್ಷೇತ್ರದ ಜನರನ್ನೇ- ಬೆಂಗಳೂರಿಗೇ ಸೇರಿದ ಉತ್ತರಹಳ್ಳಿಯಿಂದಲಾದರೂ- ಕರೆದುಕೊಂಡು ಹೋಗಬಹುದಾಗಿತ್ತಲ್ಲವಾ.... ಅಂದರೆ ಅಲ್ಲಿ ಮೂಸಿ ನೋಡೋರು ಯಾರವ್ರೆ ಈ ಸಂಸದೇನ ಅಂತಾರಲ್ರಿ ಹಾಳು ಮಂಡ್ಯಾದ ಜನ....

ಇಷ್ಟಕ್ಕೇ ನಿಲ್ಲಿಸಿಲ್ಲ ಅವರು. ಇಲ್ಲಿ ಕಿಸಿದದ್ದು ಆಯಿತಲ್ಲ ಸಂಸತ್ತಿನಲ್ಲಿ ಏನು ಕಿಸೀತೀಯೋ ಕಿಸಿ ಅಂತಾನು ಅಂದರಂತೆ. ಸಂಸದೆಯ ಸ್ಥಾನಕ್ಕೆ ರಾಜೀನಾಮೇ ನೀಡಿ, ಚಳವಳಿ ವಿಷಯ ಮಾತಾಡ್ರಿ ಅಂತ ಯಾರೋ ಗುಂಪಿನಲ್ಲಿ ಗೋವಿಂದ ಅನ್ನೋವನು ಕೂಗಿದ್ದಕ್ಕೆ ನಮ್ಮ ಗಂಡದೆಯ ಸಂಸದೆ 'ಅವಶ್ಯಕತೆ ಬಿದ್ದರೆ ಅದಕ್ಕೂ ಸಿದ್ಧ' ಅಂತ ಎದೆ ತಟ್ಟಿಕೊಂಡು ವೀರಾವೇಶದಿಂದ ಹೇಳಿದರಂತೆ. ರಾಜೀನಾಮೆ ನೀಡುವ ಅವಶ್ಯಕತೆ ಈ ಸಂಸದೆಗೆ ಬರುವುದೆಲ್ಲಿ ಬಂತು ಬಿಡಿ!

ಅಂಬರೀಸಣ್ಣಾರ ಕಥೆ ನೋಡಿ. ಸಂಸದ ಹಾಗೂ ಕೇಂದ್ರ ಸಚಿವರಾದ ಅವರು.... ಅರೆ ಅವರು ರಾಜೀನಾಮೆ ಕೆರೆದು ಬಿಸಾಕಿದ್ದಾರಲ್ಲ ಅಂದಿರಾ... ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದರೆ ನಿರ್ದಿಷ್ಟ ನಮೂನೆಯಲ್ಲಿ ಸ್ವಹಸ್ತಾಕ್ಷರದಿಂದ ಬರೆದು ಖುದ್ದು ಸ್ಪೀಕರ್‌ಗೆ ನೀಡಬೇಕು. ಎಲ್ಲಿಂದಲೋ ಕೆರೆದು ಎಸೆದರೆ, ಫ್ಯಾಕ್ಸ್ ಮಾಡಿ ರಾಜೀನಾಮೆ ಬಿಸಾಕಿದ್ದೇನೆ ಅಂತ ಟಿವಿ ಎದುರು ಪೋಸ್ ನೀಡಿದರೆ ಅದು ರಾಜೀನಾಮೆ ಪತ್ರ ಆಗಲ್ಲ, ಅದು ಅನುಮೋದನೆನೂ ಆಗಲ್ಲ, ಸಿನಿಮಾಗಳಲ್ಲಿ ಮಾಡುವ ಸ್ಟಂಟ್ ಅನ್ನೇ ಇಲ್ಲೂ ಅಂಬರೀಷಣ್ಣಾರು ಮಾಡವ್ರೆ ಅಷ್ಟೆ.

ಹಿಂದೆ ಸಂಸದಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆ ಪತ್ರವನ್ನು ಯಾರಿಗೆ ಕಳುಹಿಸಿದ್ದರು ಅಂತೀರಿ? ಸೋನಿಯಾ ಗಾಂಧಿಗೆ! ರಾಜೀನಾಮೆ ನೀಡಿದ ಈ ಸಂಸದ, ಸಂಸದರಿಗೆ ಸಲ್ಲುವ ಎಲ್ಲಾ ಸೌಲಭ್ಯಗಳನ್ನೂ ಯಾವ ಎಗ್ಗೂ ಇಲ್ಲದೆ ಪಡೆದಿದ್ದರು. ಈಗಲೂ ರಾಜೀನಾಮೆ ನೀಡಿದ್ದಾರೆ. ಅದು ಊರ್ಜಿತ ಆಗಲ್ಲ, ರಾಜೀನಾಮೆ ನೀಡಿ ಸಂಸದರಾಗಿ, ಮಂತ್ರಿಯಾಗಿ ಮುಂದುವರೆಯುತ್ತಾರೆ!



ಹಿಂದೆ ಮಧ್ಯಂತರ ಆಜ್ಞೆ ಬಂದಾಗ ಜಿ. ಮಾದೇಗೌಡರು ಸಂಸದರಾಗಿದ್ದರು. ಈ ಆಜ್ಞೆಯಿಂದ ಕೆರಳಿದ ಅವರು ಕಾನೂನುರೀತಿ ರಾಜೀನಾಮೆ ನೀಡಿದ್ದರು. ಆಗ ಶಿವರಾಜ್ ಪಾಟೀಲ್‌ರು ಸ್ಪೀಕರ್ ಆಗಿದ್ದರು. ರಾಜೀನಾಮೆ ಒಪ್ಪಿಕೊಳ್ಳಲಿಲ್ಲ, ಕಾಂಗ್ರೆಸ್ ಅಧ್ಯಕ್ಷರು ಇದಕ್ಕೆ ಅನುಮತಿ ಸಬೇಕು ಎಂದರು. 'ಎಲ್ಲಿದೆ ಆ ಕಾನೂನು' ಎಂದು ಕೆರಳಿದ ಗೌಡರು ರಾಜೀನಾಮೆ ಒಪ್ಪಿಕೊಳ್ಳುವವರೆಗೆ ಜಾಗ ಬಿಡಲಿಲ್ಲ, ಈಗ ಮಂಡ್ಯದ ಗಂಡು ಹೀಗೆ ಮಾಡುತ್ತಾ? ಎಷ್ಟು ವರ್ಷಗಳು ಅಂತ ಜನರಿಗೆ ಮೋಸ ಮಾಡುತ್ತಾರೆ?

ರಾಜೀನಾಮೆ ಊರ್ಜಿತ ಆಗುವಂತೆ ಮಾಡಲಿ. ಚಳವಳಿಗೆ ಧುಮುಕಲಿ. ಇಲ್ಲ ರಾಜೀನಾಮೆ ನೀಡುವ ಮಾತನ್ನು ನಿಲ್ಲಿಸಿ ಸಾಧ್ಯವಾದರೆ ಸಂಸತ್ತಿನಲ್ಲಿ ಕರ್ನಾಟಕದ ಪರ ಸಕ್ರಿಯವಾಗಿ ಭಾಗವಹಿಸಲಿ... ಹೀಗೆ ಯಾವುದನ್ನೂ ಮಾಡದಿರುವುದರಿಂದ ಅವರು ಮಂತ್ರಿ ಹಾಗೂ ಸದಸ್ಯರೇ ಕಾನೂನು ದೃಷ್ಟಿಯಲ್ಲಿ. ಅವರಿಗೆ ಈಗ ಅಗದಿ ಕೋಪ ಬಂದಿದೆಯಂತೆ. ಯಾರ ಮೇಲೆ ಅಂತೀರಾ? ಪತ್ರಕರ್ತರ ಮೇಲೆ! ತನ್ನ ರಾಜಕೀಯ ಪ್ರಹಸನಗಳನ್ನು ಎಳೆಎಳೆಯಾಗಿ ಬಿಡಿಸಿ ಜನರೆದುರು ಇಡುತ್ತಿದ್ದಾರಲ್ಲಾ ಅಂತ!

ಇದೊಂದು ಶನಿಗಳ ಕಾಟ ಆದರೆ ಇನ್ನೊಂದು ರೀತಿ ತೊಂದರೆ ನೋಡಿ. ರಾಜೀನಾಮೆ ನೀಡಿದೆ ಅನ್ನೋನೆಪದಲ್ಲಿ ಆರಾಮವಾಗಿ ಹೆಂಡ ಇಸ್ಪೀಟು ರೇಸು ಅಂತ ಕಾಲ ಕಳೆಯಬಹುದಲ್ಲಾ ಅಂದರೆ ಈ ಹಾಳು ಮಂಡ್ಯದ ಪುಡಿ ಕಾಂಗ್ರೆಸ್ ನಾಯಕರ ಕಾಟ. "ನೀವು ಸುಮ್ಮನೆ ಕುಳಿತರೆ ಕಾವೇರಿ ಚಳವಳೀಲಿ ನಮ್ಮ ಪಕ್ಷ ಹೇಳಹೆಸರಿಲ್ಲದಂತೆ ಕೊಚ್ಚಿ ಹೋಗುತ್ತೆ, ನೀವು ಇದರ ನಾಯಕತ್ವ ವಹಿಸಬೇಕು" ಅಂತ ಕಾಲು ಕಾಲಿಗೆ ಬೀಳ್ತವೆ. ಸೋನಿಯಾ ಮೇಡಂಗೆ ಕಾಂಗ್ರೆಸ್ ಬಲಪಡಿಸಲು ರಾಜೀನಾಮೆ ನೀಡುತ್ತಿದ್ದೇನೆ ಎಂದು ಅದ್ಯಾವ ಕುಡಿದ ಅಮಲಿನಲ್ಲಿ ಬರದರೋ ಏನೋ ಪಾಪ. ಮೊದಲೆಲ್ಲ ಪೆದ್ದ ನನಮಕ್ಕಳು ಅಂಬರೀಷು ಹೇಳಿದ್ದೇ ವೇದವಾಕ್ಯ ಅಂತಿದ್ರೊ. ಈಗ ಅದೇನು ಕೇಡುಗಾಲ ಬಂದಿದೆಯೋ ಅವು ಪ್ರಶ್ನೆ ಮಾಡೋಕೆ ಶುರು ಮಾಡಿವೆ.

ನೀವು ರಾಜೀನಾಮೆ ನೀಡಿದ್ದು ನ್ಯಾಯಮಂಡಳಿ ಅನ್ಯಾಯ ಮಾಡಿವೆ ಎಂದೋ ಅಥವಾ ಕಾಂಗ್ರೆಸ್ ಬಲಪಡಿಸಲೋ ಅಂತ ಕೇಳ್ತವೆ. ಅಣ್ಣಾರು ಹಂಗೆ ಹೇಳೇ ಇಲ್ಲ, ಹಂಗೆ ಬರದೇ ಇಲ್ಲ ಅಂತ ಸಮಜಾಯಿಷಿ ಹೇಳೋ ಚಮಚಾಗಳಿಗೇನೂ ಬರ ಇಲ್ಲ, ಆದರೆ ಹಾಳಾದ ಜನ ಪತ್ರಿಕೇನ ಮುಖಕ್ಕೆ ಹಿಡೀತಾವೆ. ಪತ್ರಿಕೇಲಿ ಬರೋದೆಲ್ಲ ನಿಜವಾ ಅಂತ ಉಡಾಫೆ ಹೊಡೆದರೂ ನಂಬ್ತಾ ಇಲ್ಲ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಅಂಬರೀಸು?

ಕಾಂಗ್ರೆಸ್ ಪಕ್ಷವು ಪಕ್ಷಾತೀತವಾಗಿ ನ್ಯಾಯ ಮಂಡಳಿಯ ತೀರ್ಪಿನ ವಿರುದ್ಧ ಚಳವಳಿ ನಡೆಸಲು ತೀರ್ಮಾನಿಸಿ ಮಂಡ್ಯದಲ್ಲಿ ಅದಕ್ಕೆ ಜ್ಯೋತಿ ಬೆಳಗುತ್ತೇನೆ ಎಂದು ಸಾರಿದರು. ಅಲ್ಲೇನು ಮಾಡುತ್ತೀರಿ ಎಂದು ಪ್ರಶ್ನಿಸಿದ್ದಕ್ಕೆ ಈಗಲೇ ಹೇಳಿದರೆ ಸ್ವಾರಸ್ಯ ಕೆಟ್ಟೋಗುತ್ತೆ ಅಲ್ಲಿಯೇ ಹೇಳ್ತಿನಿ ಅಂದರು! ಸಿನಿಮಾ ಶೈಲಿಯ ಈ ಸ್ಫೋಟ ಏನಿರಬಹುದು ಎಂಬುದನ್ನು ಕುರಿತು ಜನಸಾಮಾನ್ಯರಿಗೆ ಯಾವುದೇ ಕುತೂಹಲ ಇಲ್ಲದಿದ್ದರೂ ಅಣ್ಣಾರ ಕಂಡರೆ ಆಗದವರು.... ಸಮಾರಂಭಕ್ಕೆ ಅಂಬರೀಷ್ ನಾಪತ್ತೆ.... ಎಂಬುದು ಇರಬಹುದು ಎಂದು ಕುಹಕ ಆಡುತ್ತಿದ್ದಾರೆ.... ಅವರ ಮಾತು ಬಿಡಿ.

ಎ.ಕೆ. ಸುಬ್ಬಯ್ಯನವರು ಬೆಂಗಳೂರಿನಲ್ಲಿ ಮಾತನಾಡುತ್ತಾ ಕಾವೇರಿ ನ್ಯಾಯಮಂಡಳಿಯಲ್ಲಿ ನಮಗೆ ನ್ಯಾಯ ದೊರಕಬೇಕಾದರೆ ಎಲ್ಲ ಸಂಸದರೂ ಅಂಬರೀಷ್ ಅವರಂತೆ ರಾಜೀನಾಮೆ ನೀಡಲಿ ಎಂದು ಕರೆ ನೀಡಿದ್ದಾರೆ. ಅಂಬರೀಷ್ ರೀತೀಲಿ ಅಂದರೆ ಏನು? ಅಂಗೀಕಾರ ಆಗದಂತೆ ರಾಜೀನಾಮೆ ನೀಡುವುದಾದರೆ ಎಲ್ಲ ಸಂಸದರೂ ಸಿದ್ಧ ಎಂಬುದಾಗಿ ಸಂಸದರು ಸುದ್ದಿ ಮಾಡಿರುವುದು ತಿಳಿದು ಬಂದಿಲ್ಲ!

ಅಂಬರೀಷ್ ಚಳವಳಿಗೆ ಇಳಿದರೆ ಎಲ್ಲಿ ಕಾಂಗ್ರೆಸ್ ಪಕ್ಷ ರಾಜಕೀಯ ಲಾಭ ಹೊಡೆದುಕೊಳ್ಳುತ್ತದೋ ಎಂಬುದು ಜಾತ್ಯತೀತ ಜನತಾದಳದವರ ಕೊರಗು. ಅವರ ನಾಯಕ ದೇವೇಗೌಡರು ಹೊಳೆನರಸೀಪುರದಲ್ಲಿ ಮಾತನಾಡುತ್ತಾ "ನಾನು ಕರ್ನಾಟಕಕ್ಕೆ ಮಾತ್ರ ನಾಯಕ ಅಲ್ಲ, ಇಡೀ ದೇಶಕ್ಕೇ ಬೇಕಾದವನು; ಅಲ್ಲೆಲ್ಲ ಸುತ್ತುತ್ತಿದ್ದುದರಿಂದ ದೇವರಾಣೆಗೂ ಇನ್ನೂ ನ್ಯಾಯಮಂಡಳಿಯ ತೀರ್ಪನ್ನು ಓದಿಲ್ಲ" ಅಂತ ಹೇಳಿದರಂತೆ. ನನ್ನ ಮುಂದೇನೆ ನನ್ನ ಮೇಲೆ ಆಣೆ ಇಟ್ಟು ಈ ಗೌಡ ಇಂತಹ ಹಸಿ ಸುಳ್ಳು ಹೇಳ್ತಿದಾನಲ್ಲ ಅಂತ ಕುಪಿತ ಆದ ಆ ದೇವರು ದೇವೇಗೌಡರ ಕೈಬಾಯಿ ಬಿದ್ದು ಹೋಗುವ ಹಾಗೆ ಮಾಡಿದನಂತೆ. ಹೀಗಾಗಿ ಅವರು ಕಾವೇರಿ ವಿಷಯದಲ್ಲಿ ಏನನ್ನು ಹೇಳಲೂ ಆಗದೆ, ಬರೆದು ತೋರಿಸಲೂ ಆಗದೆ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿ ಇದ್ದಾರಂತೆ. ತಮ್ಮ ತಂದೆಯವರಿಂದ ಆಜ್ಞೆ ಬಾರದೆ ತಾವೇನೂ ಮಾಡುವ ಸ್ಥಿತಿಯಲ್ಲಿಲ್ಲದ ಕುಮಾರಸ್ವಾಮಿ ಕದ್ದು ತಿರುಗುತ್ತಿದ್ದಾರಂತೆ.

ಇದರಿಂದ ಕಾವೇರಿಕೊಳ್ಳದ ಜನತಾದಳ ಪುಢಾರಿಗಳು ಇಂಗು ತಿಂದ ಮಂಗನಂತಾಗಿದ್ದು ಕಾವೇರಿಗಾಗಿ ನಾವೂ ಹೋರಾಡುತ್ತಿದ್ದೇವೆ ಎಂದು ತೋರಿಸಿಕೊಳ್ಳಲು ಹೆಣಗುತ್ತಿದ್ದಾರಂತೆ!

ಮಾತೆತ್ತಿದರೆ ಬೀದಿಗಿಳಿದು ಬೊಬ್ಬೆ ಹಾಕುವ ಸಂಘಪರಿವಾರ ಬೆಂಬಲಿತ ಭಾರತೀಯ ಜನತಾ ಪಕ್ಷಕ್ಕೆ ನೀರಿಗಾಗಿ ಜನ ಬೀದಿಗಿಳಿದಿರುವುದು ಆಶ್ಚರ್ಯಕರ ಸಂಗತಿಯಾಗಿ ತೋರಿದೆಯಂತೆ. ಕಾವೇರಿ ತಾಯಿಯ ವಿಗ್ರಹವನ್ನಾದರೂ ಹೊಡೆದಿದ್ದರೆ ಈ ಹೋರಾಟಕ್ಕೆ ಒಂದು ಅರ್ಥ ಇರುತ್ತಿತ್ತು, ಯಾವ ಸಾಬಿಯೂ ಇನ್ನೂ ಇದನ್ನು ಮಾಡದಿರುವುದರಿಂದ ಸಂಘ ಪರಿವಾರದ ನಿಷ್ಠಾವಂತ ಸೇವಕರೇ ಕಾವೇರಿ ತಾಯಿಯ ವಿಗ್ರಹವನ್ನು ಹೊಡುದು ಹಾಕಿ ಸಾಬರ ಮೇಲೆ ಗೂಬೆ ಕೂರಿಸಿ ಮತೀಯ ಗಲಭೆ ಎಬ್ಬಿಸಿ ರಾಜಕೀಯ ಲಾಭ ಹೇಗೆ ಪಡೆಯಬಹುದು ಎಂಬುದರ ಅಧ್ಯಯನದಲ್ಲಿ ಮಗ್ನರಾಗಿದ್ದಾರಂತೆ!

ಯಾರ ಮಕ್ಕಳು?

ಕಾವೇರಿ ನ್ಯಾಯಮಂಡಳಿಯ ತೀರ್ಪಿನಿಂದ ತಮ್ಮ ಬದುಕನ್ನೇ ಕಳೆದುಕೊಳ್ಳುವೆವು ಎಂಬ ಆತಂಕದಿಂದ ಬಹುಪಾಲು ಜನ ಬೀದಿಗೆ ಇಳಿದಿದ್ದಾರೆ. ಕೆಲವರಿಗೆ ಈ ಚಿಂತೆ ಇಲ್ಲ. ಅವರೂ ಬೀದಿಗೆ ಇಳಿದಿದ್ದಾರೆ.

ಯಾಕೆ ಇಳಿದಿದ್ದಾರೆ?

ಟಿವಿಯಲ್ಲಿ ಬರಲು!

ಇದಕ್ಕಾಗಿ ಅವರ ಹರಸಾಹಸ. ವಿಭಿನ್ನ ರೀತಿಯ ವೈವಿಧ್ಯಮಯ ಚಳವಳಿಗೆ ಅವರ ಆದ್ಯತೆ. ಇಲ್ಲವಾದರೆ ಟಿವಿಯವರ ಕಣ್ಣಿಗೆ ಇವರು ಬೀಳುವುದಾದರೂ ಹೇಗೆ?

ನ್ಯಾಯಮಂಡಳಿಯ ನ್ಯಾಯಾಧೀಶರ ಶವಯಾತ್ರೆ.

ಶವಯಾತ್ರೆಯ ನಂತರ ತಿಥಿಯೂ ಆಗಬೇಕಲ್ಲ?

ಅದ್ದೂರಿ ಅಡುಗೆ ಆಯಿತು.

ನಡೆಯಬೇಡವೆ ಇತರ ಕರ್ಮಗಳು?

ಯಾರೋ ಒಬ್ಬ ತಲೆ ಬೋಳಿಸಿಕೊಳ್ಳಲು ಸಿದ್ಧ!

ಟಿವಿಯಲ್ಲಿ ಬಂದಿತು ಅದರ ಚಿತ್ರ!

ಸಾರ್ಥಕ ಆಯಿತು ಅವರ ಜನ್ಮ!

ಅಲ್ಲ, ಸಾವಾದಾಗ ತಲೆ ಬೋಳಿಸಿಕೊಳ್ಳುವವರು ಯಾರು?

ಅವರ ಮಗ.

ಇವರೇನು ನ್ಯಾಯಾಧೀಶರ ಮಕ್ಕಳೆ?

ಈ ಪ್ರಶ್ನೆ ಅವರನ್ನು ತಾಕಿದ್ದೇ ಇಲ್ಲ!

ಇನ್ನೊಂದು ಘಟನೆ.

ಚಳವಳಿ ತೀವ್ರ ಆಗಿತ್ತು, ಅಭೂತಪೂರ್ವ ಅನ್ನುವ ಮೆರವಣಿಗೆ ನಡೆಯುತ್ತಿತ್ತು, ಅದರ ನೇರ ಪ್ರಸಾರ ಟಿವಿಯಲ್ಲಿ,

ಈ ಅವಕಾಶದ ಸದ್ವಿನಿಯೋಗವಾಗಬೇಡವೆ?

ಒಬ್ಬ ಮನೆಗೆ ಮೊಬೈಲಾಯಿಸಿದ. 'ಟಿವಿ ಆನ್ ಕರೊ, ಟಿವಿ ಆನ್ ಕರೊ'

ಅಲ್ಲಿ ಆನ್ ಆಗಿರಬೇಕು.

'..... ಚಾನೆಲ್ ಡಾಲೊ... ಮೈ ಆರಹೂ ಕ್ಯಾ.....'

ಉತ್ತರ ಕೇಳಿಮುಖ ಅರಳಿತು. ಒಳ್ಳೆಯ ಸುದ್ದಿಯೇ ಇರಬೇಕು!

ಅವನ, ಮನೆಯವರ ಜನ್ಮ ಸಾರ್ಥಕ ಆಯಿತು!

ಕಾವೇರಿ?

ಅದು ಇವರ ಚಿಂತೆ ಅಲ್ಲ!

-ಎಚ್.ಎಲ್. ಕೇಶವಮೂರ್ತಿ

ನೀಲುವಿನ ಅಪ್ಪುಗೆಗಾಗಿ ಕಾತರದಿಂದ....

ಕಾವೇರಿ ತೀರ್ಪಿನಿಂದಾಗಿರುವ ಅನ್ಯಾಯದ ಬಗ್ಗೆ ಇಡೀ ಕರ್ನಾಟಕದ ಜನತೆ ನಾನಾ ವಿಧವಾದ ಚಳವಳಿಗಳನ್ನು ಅವಿರತವಾಗಿ ನಡೆಸುತ್ತಿರುವಾಗ ರಾಜಕೀಯದ ಯಾವನೇ ನಾಯಕ ತಮ್ಮ ನಿಲುವನ್ನು ಸ್ಪಷ್ಟವಾಗಿ ಬಿಂಬಿಸದಿರುವುದು ಮಾತ್ರ ಅತ್ಯಂತ ಖಂಡನೀಯ. ದೇವೇಗೌಡರಿಂದ ಮೊದಲುಗೊಂಡು ಕಾಂಗ್ರೆಸ್‌ನ ಧರಂಸಿಂಗ್, ಖರ್ಗೆ ಮತ್ತು ಎಚ್.ಕೆ. ಪಾಟೀಲ್ ಮುಂತಾದ ನಾಯಕರು ತಮ್ಮೆಲ್ಲಾ ಇಂದ್ರಿಯಗಳನ್ನು ಭದ್ರವಾಗಿ ಮುಚ್ಚಿಕೊಂಡು ತಾವೆಲ್ಲಾ ಅಷ್ಟೂ ನಾಮರ್ದರು ಎಂಬುದನ್ನು ಖಚಿತಪಡಿಸಿದ್ದಾರೆ. ಅನ್ಯಾಯದ ತೀರ್ಪು ಹೊರಬಿದ್ದು ತಿಂಗಳಾಗುತ್ತಾ ಬಂದಿದ್ದರೂ ಆ ಕುರಿತು "ತೀರ್ಪನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ ಎಂದಾಗಲೀ, ಕೇಂದ್ರಕ್ಕೆ ನಿಯೋಗ ಹೋಗಬೇಕೆಂದಾಗಲೀ ಅಥವಾ ಸುಪ್ರೀಂಕೋರ್ಟ್‌ಗೆ ಹೋಗಬೇಕೆಂದಾಗಲಿ" ಯಾವುದೇ ಖಚಿತ ನಿರ್ಧಾರ ಕೈಗೊಳ್ಳಲು ಕುಮಾರಸ್ವಾಮಿಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ, ಈ ಕಾವೇರಿ ಸಮಸ್ಯೆಗೊಂದು ಶಾಶ್ವತ ಸರ್ವಸಮ್ಮತ ಪರಿಹಾರ ಕಂಡುಕೊಳ್ಳಲು ಎಲ್ಲಾ ಪಕ್ಷದ ನಾಯಕರು ತಮ್ಮ ಸ್ವಪ್ರತಿಷ್ಠೆ ಬಿಟ್ಟು, ಕನ್ನಡ ದ್ರೋಹಿಗಳೆಂದು ಹಣೆಪಟ್ಟಿ ಕಟ್ಟಿಕೊಳ್ಳದೆ ಒಂದೇ ವೇದಿಕೆ ಸೇರಿ ಕಾರ್ಯೋನ್ಮುಖರಾಗುವುದೀಗ ಅತ್ಯಂತ ಅವಶ್ಯಕವಾಗಿದೆ.

-ಇಂದಿರಾ ಶ್ರೀಧರ್, ದಾವಣಗೆರೆ

ಫೆ. 21 ರ ಸಂಚಿಕೆಯಲ್ಲಿ ಕೇಂದ್ರ ವಾರ್ತಾ ಸಚಿವ ಅಂಬರೀಷ್ ಅವರ ಬಗೆಗಿನ ವರದಿ ಓದಿ ಅಯ್ಯೋ ಎನ್ನಿಸಿತು. ಮಂಡ್ಯದ ಗಂಡು, ಕೊಡುಗೈ ದೊರೆ ಮುಂತಾದ ವಿಶೇಷಣಗಳಿಗೆ ಪಾತ್ರರಾದ ಚಿತ್ರನಟ ಅಂಬರೀಷ್‌ರವರು ರಾಜಕೀಯಕ್ಕೆ ಬಂದ ಮೇಲಾದರೂ ವ್ಯವಸ್ಥೆ, ಕರ್ತವ್ಯ ಜೊಣೆಗಾರಿಕೆಗಳನ್ನು ತಿಳಿದುಕೊಳ್ಳಬೇಕಿತ್ತು, ಆದರೆ ಹಾಗೆ ಮಾಡದೆ ಹೊಣೆಗೇಡಿಯಂತೆ ವರ್ತಿಸುವುದಾದರೆ ಅವರು ರಾಜೀನಾಮೆ ನೀಡಿ ವೈಯಕ್ತಿಕ ಹಿತಾಸಕ್ತಿಗಳಲ್ಲಿರುವುದೇ ಲೇಸು. ತನಗೆ ಸಿಕ್ಕಿರುವ ಪದವಿಯಿಂದ ರಾಜ್ಯ ಮತ್ತು ರಾಷ್ಟ್ರ ಸೇವೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳುವುದು ಅವರಿಗಿರಬೇಕಾದ ನೈತಿಕ ಹೊಣೆ. ಮುಗ್ಧತೆ, ಪೆದ್ದುತನ, ಉಡಾಫೆಗಳಿಂದ ಯಾವ ಪ್ರಜಾ ಸೇವಕನೂ ಮುಕ್ತನಲ್ಲವಾದರೂ ಅದುವೇ ಗಣ್ಯರ ಬಂಡ (ಭಂಡ)ವಾಳ ಆಗಬಾರದಲ್ಲವೆ?

ಕಾವೇರಿಯ ದುರಂತ ಪ್ರಕರಣಕ್ಕೆ ನಮ್ಮನ್ನಾಳಿದ್ದ ಹಿಂದಿನ ಸರ್ಕಾರಗಳೂ ನೇರ ಹೊಣೆ ಎಂಬಲ್ಲಿ ಎರಡು ಮಾತಿಲ್ಲ, ಇಂತಹ ಹೊಣೆಗೇಡಿ ವ್ಯವಸ್ಥೆಗಳಿಂದ ನಮಗೆಲ್ಲ ನಿರಾಳ ಯಾವಾಗ?

-ಚ.ಬಿ. ಪುತ್ತರ್ಕರ, ಚಿತ್ರದುರ್ಗ

ಫೆಬ್ರವರಿ 28 ರ ಲಂಕೇಶ್ ಸಂಚಿಕೆಯ 'ಕಂಡಹಾಗೆ'ಯಲ್ಲಿ 'ನಿಮಗೆ "ನೀಲು"ವಿನ ಪ್ರಥಮ ಅಪ್ಪುಗೆ' ಬಗ್ಗೆ ಓದಿ ಸಂತೋಷವಾಯಿತು. ಲಂಕೇಶ್ ಹುಟ್ಟುಹಬ್ಬದ ಉಡುಗೊರೆಯಾಗಿ 'ನೀಲು'ಗಳನ್ನು ಪುಸ್ತಕ ರೂಪದಲ್ಲಿ ತರುತ್ತಿರುವುದು ಆನಂದದ ಸಂಗತಿಯಾಗಿದೆ. ಲಂಕೇಶರ ಅನೇಕ ನೀಲು ಹನಿಗವನಗಳನ್ನು ಓದಿ ಸಂಭ್ರಮಿಸಿದ್ದೇನೆ. ಜೊತೆಗೆ ಭಾವನೆಗಳ ಹಂದರವನ್ನೇರ್ಪಡಿಸಿ ಕೊಂಡಿದ್ದೇನೆ. ಇತ್ತೀಚಿನವರೆಗೂ ಪ್ರತಿ ಪುಟದ ಕೊನೆಯ ಸಾಲಿನಲ್ಲಿ ಅನುಭವಿಕರ, ಹಿತನುಡಿ, ಸೂಕ್ತಿಗಳನ್ನು ಪ್ರಕಟಿಸುತ್ತಿದ್ದೀರಿ. ನಿಜಕ್ಕೂ ಅವು ವಾರವಾರವೂ ವಿಭಿನ್ನ ರೀತಿಯ ಮಾಹಿತಿ ನೀಡುತ್ತಿದ್ದವು. ಆದರೆ ಈಗ ಅವನ್ನು ಪ್ರಕಟಿಸುತ್ತಿಲ್ಲ, ನನ್ನ ಸಂಗ್ರಹದಲ್ಲಿ ಇಂತಹ ಸೂಕ್ತಿಗಳಿವೆ ಕಳುಹಿಸಿದರೆ ಪ್ರಕಟಿಸುತ್ತೀರಿ ತಾನೇ?

-ಕೆ.ವಿ. ಶಿವಕುಮಾರ್, ಕಾಳೀಹುಂಡಿ

(ಕಳುಹಿಸಿ ಶಿವಕುಮಾರ್‌ರವರೆ, -ಸಂ)

ನಿರೂಪಣೆ: ಸದಾಶಿವ ಶೆಣೈ

42




ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಅರ್ಥವಾಗದ 'ಮಂದಾರ ಹೂವೇ' ಕತೆ







ಸುನೀಲ್ ಕುಮಾರ್ ದೇಸಾಯಿ 'ನಮ್ಮೂರ ಮಂದಾರ ಹೂವೇ' ಕತೆ ಹೇಳಿದ ನಂತರ "ಅಣ್ಣಾ.... ಸಬ್ಜೆಕ್ಟ್ ಒಂಥರಾ ಇದೆ.... ನಾನು ಹೇಳಿದ್ದು ನಿಮಗೆ ಅರ್ಥವಾಯ್ತೋ ಇಲ್ವೋ ಗೊತ್ತಿಲ್ಲ" ಅಂದರು. ಅದಕ್ಕೆ ಅಪ್ಪಾಜಿ "ನೀವು ಎಷ್ಟು ಚೆನ್ನಾಗಿ ಹೇಳಿದಿರೆಂದರೆ, ನನಗೆ ಸಿನಿಮಾನೇ ನೋಡಿದ ಅನುಭವವಾಯಿತು" ಎಂದು ಅಪ್ಪಾಜಿ ಹೇಳಿದರು. ಆದರೆ ನಿಜ ಹೇಳುತ್ತೇನೆ, ನನಗೆ ಮಾತ್ರ ದೇಸಾಯಿಯವರು ಹೇಳಿದ್ದು ಒಂಚೂರೂ ಅರ್ಥವಾಗಿರಲಿಲ್ಲ!

'ಓಂ' ರಿಲೀಸ್ ಆದ ನಂತರ ಎಲ್ಲರೂ ನನ್ನನ್ನು 'ಸತ್ಯಾ' ಎಂದು ಕರೆಯಲು ಪ್ರಾರಂಭಿಸಿದರು. ಅವತ್ತು ಸಾಯಂಕಾಲ ನನ್ನ ಪತ್ನಿ ಗೀತಾ ಜೊತೆ ಎಂ.ಜಿ. ರೋಡ್‌ನಲ್ಲಿ ಶಾಪಿಂಗ್‌ಗೆಂದು ಹೋದಾಗ ನಡೆದದ್ದೂ ಇದೇ. ಹುಡುಗಿಯೊಬ್ಬಳು ಕೂಲಿಂಗ್ ಗ್ಲಾಸ್ ಹಾಕಿಕೊಂಡು, ಶರವೇಗದಲ್ಲಿ ಬೈಕ್ ಓಡಿಸಿಕೊಂಡು ನನ್ನ ಹತ್ತಿರ ಬಂದು ಬ್ರೇಕ್ ಹಾಕಿ ತನ್ನ ಗಾಡಿಯನ್ನು ನಿಲ್ಲಿಸಿದಳು. ಹಾಗೆ ನಿಲ್ಲಿಸಿದವಳೇ "You are rocking as Sathya I say, you are cool" ಎಂದು ಹೇಳಿದಳು. ಆಕೆ ಬಂದ ಸ್ಟೈಲ್, ಮಾತಾಡಿದ ರೀತಿ ನನ್ನಲ್ಲಿ ಅಚ್ಚರಿ ಮೂಡಿಸಿತು. ಬೈಕ್‌ನಿಂದ ಇಳಿದ ಆಕೆ "ಮೈ ನೇಮ್ ಇಸ್ ಸಬೀನಾ.... ಐ ಆ್ಯಮ್ ಎ ಮೌಂಟ್ ಕಾರ್ಮೆಲ್ ಸ್ಟೂಡೆಂಟ್" ಎಂದು ಪರಿಚಯಿಸಿಕೊಂಡಳು. ಅದನ್ನು ಕೇಳಿ 'ಓಂ' ಚಿತ್ರ ಅಲ್ಲಿಯತನಕ ಕನ್ನಡ ಚಿತ್ರಗಳು ತಲುಪಲಾರದ ಎಂ.ಜಿ. ರೋಡಿಗೂ, ಇಂಗ್ಲಿಷ್ ಮಾತಾಡುವ ಕಾನ್ವೆಂಟ್ ಹುಡುಗಿಯರಿಗೂ ತಲುಪಿದೆ ಎಂದು ಸಮಾಧಾನವಾಯಿತು. ಆಮೇಲೆ ಗೊತ್ತಾಗಿದ್ದೇನೆಂದರೆ, ಆ ಚಿತ್ರವನ್ನು ತಮಿಳು ಮತ್ತು ತೆಲುಗು ಮಾತನಾಡುವ ಜನರೂ ನೋಡಿದ್ದಾರೆ ಎಂಬುದು.

'ಓಂ' ನಂತರ ನನ್ನ ವೃತ್ತಿಜೀವನದಲ್ಲಿ ಮೈಲಿಗಲ್ಲಾದ ಮತ್ತೊಂದು ಚಿತ್ರವೆಂದರೆ ಸುನೀಲ್ ಕುಮಾರ್ ದೇಸಾಯಿ ನಿರ್ದೇಶನದ 'ನಮ್ಮೂರ ಮಂದಾರ ಹೂವೇ'. ಈ ಚಿತ್ರದ ಕತೆ ಹೇಳಲು ದೇಸಾಯಿಯವರು ನಮ್ಮ ಮನೆಗೆ ಬಂದಿದ್ದರು. ಅಪ್ಪಾಜಿ, ಅಪ್ಪಣ್ಣ ಮತ್ತು ನಾನು ಮೂವರೂ ಕುಳಿತೆವು. ದೇಸಾಯಿಯವರು ತುಂಬಾ ಮುಜುಗರದಿಂದ, ಅವರದೇ ಶೈಲಿಯಲ್ಲಿ ಕತೆ ಹೇಳಿದರು. ಕತೆ ಹೇಳಿದ ನಂತರ ಅವರು ಅಪ್ಪಾಜಿಗೆ ಹೇಳಿದ್ದು ನನಗಿನ್ನೂ ನೆನಪಿದೆ. "ಅಣ್ಣಾ.... ಸಬ್ಜೆಕ್ಟ್ ಒಂಥರಾ ಇದೆ.... ನಾನು ಹೇಳಿದ್ದು ನಿಮಗೆ ಅರ್ಥವಾಯ್ತೋ ಇಲ್ವೋ ಗೊತ್ತಿಲ್ಲ" ಅಂದರು. ಅದಕ್ಕೆ ಅಪ್ಪಾಜಿ ಏನಂದರು ಗೊತ್ತಾ? "ನೀವು ಎಷ್ಟು ಚೆನ್ನಾಗಿ ಹೇಳಿದಿರೆಂದರೆ, ನನಗೆ ಸಿನಿಮಾನೇ ನೋಡಿದ ಅನುಭವವಾಯಿತು" ಎಂದು ಅಪ್ಪಾಜಿ ಹೇಳಿದರು. ಆದರೆ ನಿಜ ಹೇಳುತ್ತೇನೆ, ನನಗೆ ಮಾತ್ರ ದೇಸಾಯಿಯವರು ಹೇಳಿದ್ದು ಒಂಚೂರೂ ಅರ್ಥವಾಗಿರಲಿಲ್ಲ!

ಸಾಧಾರಣವಾಗಿ ಯಾರಾದರೂ ಕತೆ ಹೇಳುವಾಗ ಅಪ್ಪಾಜಿ ಎರಡು ಚಾನೆಲ್‌ಗಳಲ್ಲಿ ಥಿಂಕ್ ಮಾಡುತ್ತಿದ್ದರು. ಕೆಲವೊಮ್ಮೆ ಮೂರ್ನಾಲ್ಕು ಚಾನೆಲ್‌ಗಳಲ್ಲೂ ಯೋಚಿಸುತ್ತಿದ್ದರು. ಈ ಕತೆ ನಾನೇ ಮಾಡಿದ್ರೆ ಹೇಗೆ? ಶಿವು ಮಾಡಿದ್ರೆ ಹೇಗೆ? ಅಥವಾ ರಾಘು ಮಾಡಿದ್ರೆ ಹೇಗೆ? ಒಂದು ಕತೆಯನ್ನು ಮೂರ್ನಾಲ್ಕು ಜನರ ವ್ಯಕ್ತಿತ್ವದಲ್ಲಿ ಪರಕಾಯ ಪ್ರವೇಶ ಮಾಡಿ ಆಲೋಚಿಸುವುದು ನನ್ನ ಪ್ರಕಾರ ಕಷ್ಟದ ಕೆಲಸ. ಆದರೆ ಅಪ್ಪಾಜಿ ಮಾತ್ರ ಕತೆ ಕೇಳಿ ಮುಗಿಸುವುದರೊಳಗೆ ಒಂದು ತೀರ್ಮಾನಕ್ಕೆ ಬರುತ್ತಿದ್ದರು. ಅದು ಅವರ ಒಂದು ದೊಡ್ಡ ಗುಣ. ಅಂದು ದೇಸಾಯಿಯವರು ಹೊರಟ ನಂತರ "ಈ ಚಿತ್ರ ನಿನಗೆ ಹೇಳಿ ಮಾಡಿಸಿದಂತಿದೆ. ಒಳ್ಳೆ ಪಿಕ್ನಿಕ್ ಥರಾ ಇದೆ ಸಿನಿಮಾ. ನೀನು ಆರಾಮಾಗಿ ಮಾಡ್ಕೋಬೋದು" ಎಂದು ಅಪ್ಪಾಜಿ ನನಗೆ ಸಲಹೆ ನೀಡಿದರು.

'ನಮ್ಮೂರ ಮಂದಾರ ಹೂವೇ' ಆರಂಭವಾಯಿತು. ತುಂಬ ಸಮಯದ ನಂತರ ನಾನು ಮತ್ತು ಪ್ರೇಮಾ ಪುನಃ ಒಟ್ಟಿಗೇ ನಟಿಸಿದೆವು. ಅದೇ ಮೊದಲ ಬಾರಿಗೆ ರಮೇಶ್ ನನ್ನ ಜೊತೆಗೆ ಅಭಿನಯಿಸಲು ಬಂದರು. **Working with another hero like Ramesh is fantastic experience. He is very intelligent.** ನಾನು ಮತ್ತು ರಮೇಶ್ ಮೊದಲ ಬಾರಿಗೆ ಜೊತೆಯಾಗಿ ನಟಿಸುತ್ತಿದ್ದರೂ ಚಡ್ಡಿ ದೋಸ್ತ್ ತರಹ ಇರುತ್ತಿದ್ದೆವು. ನಾವಿಬ್ಬರೂ ಸೆಟ್ಟಿಗೆ ಒಟ್ಟಿಗೇ ಹೋಗುತ್ತಿದ್ದೆವು, ಅಲ್ಲಿ ಹರಟೆ ಹೊಡೆಯುತ್ತಿದ್ದೆವು, ಅಂದಿನ ಶೂಟಿಂಗ್ ಮುಗಿದ ನಂತರ ಒಟ್ಟಿಗೇ ತಿರುಗಾಡುತ್ತಿದ್ದೆವು.

ಅಪ್ಪಾಜಿ ಹೇಳಿದಂತೆ ಈ ಚಿತ್ರದ ಚಿತ್ರೀಕರಣ ಒಂದು ಪಿಕ್ನಿಕ್ ಥರ ನಡೆದುಹೋಯಿತು. ಆರಂಭದ ಮೊದಲ ಇಪ್ಪತ್ತೈದು ದಿನ ನನ್ನ ಪತ್ನಿ ಗೀತಾ ಕೂಡಾ ಶೂಟಿಂಗ್‌ನಲ್ಲಿದ್ದಳು. ಆಗ ಆಕೆ ಶಿರಸಿಯಲ್ಲಿ ಉಳಿದುಕೊಂಡಿದ್ದಳು. ನಾವು ಉತ್ತರ ಕರ್ನಾಟಕದ ರಮಣೀಯ ಸ್ಥಳಗಳಾದ ಅಂಕೋಲಾ, ಗೋಕರ್ಣ, ಯಾಣ, ಕಾರವಾರದ ಸಮುದ್ರ ಇತ್ಯಾದಿ ಕಡೆಗಳಲ್ಲಿ ಚಿತ್ರೀಕರಣ ನಡೆಸಿದೆವು. ಒಂದೇ ಒಂದು ಹಾಡನ್ನು ಮಾತ್ರ ದೇಸಾಯಿ ಮಡಿಕೇರಿಯ ಕುಶಾಲನಗರದಲ್ಲಿ ಚಿತ್ರೀಕರಿಸಿದರು. ಇಳಯರಾಜಾರವರ ಸಂಗೀತಕ್ಕೆ ನೃತ್ಯ ಮಾಡುವುದೆಂದರೆ ನನಗೂ ರಮೇಶ್‌ಗೂ ಬಹಳ ಸಂತೋಷವಾಗುತ್ತಿತ್ತು.

ಹಾಗೆ ನೋಡಿದರೆ ಈ ಹಿಂದೆ ನನ್ನ 'ಶಿವಸೈನ್ಯ' ಚಿತ್ರಕ್ಕೂ ಇಳಯರಾಜಾ ಸಂಗೀತ ನೀಡಿದ್ದರು. ಅಂತಹ ಪ್ರತಿಭಾನ್ವಿತ ಸಂಗೀತ ನಿರ್ದೇಶಕರ ಸಂಯೋಜನೆಗೆ ನಾನು ನೃತ್ಯ ಮಾಡುತ್ತಿರುವುದು ನನ್ನ ಭಾಗ್ಯವೆಂದೇ ಭಾವಿಸಿದ್ದೆ.

'ಶಿವಸೈನ್ಯ' ಚಿತ್ರ ಕೂಡಾ ನನ್ನ ಜೀವನದಲ್ಲಿ ಅದರದ್ದೇ ಆದ ಕಾರಣಕ್ಕೆ ವಿಶೇಷವೆನಿಸಿದೆ. ಯುವಕನೊಬ್ಬ ಮುಖ್ಯಮಂತ್ರಿಯಾಗುವುದು ಆ ಚಿತ್ರದ ಕಥಾವಸ್ತು, ಆಗ ಅಸ್ಸಾಂನಲ್ಲಿ ಪ್ರಫುಲ್ಲ ಕುಮಾರ್ ಮೊಹಾಂತ ಚಳವಳಿ ಮೂಲಕ ಮುಂದಕ್ಕೆ ಬಂದು ಅತಿ ಚಿಕ್ಕ ವಯಸ್ಸಿನಲ್ಲೇ ಮುಖ್ಯಮಂತ್ರಿ ಆಗಿದ್ದರು. ಅವರನ್ನೇ ಸ್ಫೂರ್ತಿ ಆಗಿಸಿಕೊಂಡು 'ಶಿವಸೈನ್ಯ'ದ ಕತೆಯನ್ನು ಹೆಣೆಯಲಾಗಿತ್ತು.

ಈ ಚಿತ್ರ ಬಿಡುಗಡೆಯಾದ ನಂತರ ಮೈಸೂರು, ತುಮಕೂರು, ದಾವಣಗೆರೆ ಕಡೆಯಿಂದ ಅಭಿಮಾನಿಗಳೆಲ್ಲ ಫೋನ್ ಮಾಡಿ "ಶಿವಣ್ಣಾ ನೀವು ರಾಜಕೀಯಕ್ಕೆ ಇಳಿಯಲೇಬೇಕು" ಎಂದು ಒತ್ತಾಯಿಸಲು ಶುರುಮಾಡಿದರು. ಕೆಲವು ಅಭಿಮಾನಿಗಳು ಮನೆಗೇ ಬಂದು ಪ್ರೀತಿಯಿಂದ ಆಗ್ರಹಿಸಿದರು. ನನ್ನ ಮಾವ ಬಂಗಾರಪ್ಪನವರು ರಾಜಕೀಯದಲ್ಲಿರುವುದರಿಂದ ಮತ್ತು ಅಪ್ಪಾಜಿ ರಾಜಕೀಯಕ್ಕೆ ಇಳಿಯುತ್ತಾರೆ ಎಂಬ ಸುದ್ದಿ ಆಗಾಗ್ಗೆ ಪ್ರಕಟವಾಗುತ್ತಿದ್ದರಿಂದ, ನಾನು ರಾಜಕೀಯಕ್ಕೆ ಬರುವ ಸುದ್ದಿ ಎಲ್ಲೆಡೆ ಹರಡಿತು. ಆದರೆ ನಾನು ಇದಕ್ಕೆಲ್ಲ ಒಪ್ಪಲೇ ಇಲ್ಲ. ಸಿನಿಮಾ ಸುಲಭ, ಆದರೆ ರಾಜಕೀಯ ತುಂಬಾ ಕಷ್ಟಪ್ಪಾ.... ಎಂದು ನಾನು ಅವರಿಗೆ ಸಮಾಧಾನ ಮಾಡಿದೆ.

ಆಗ ಇನ್ನೊಂದು ತಮಾಷೆ ನಡೆಯಿತು. ನಾನು ರಾಜಕೀಯಕ್ಕೆ ಬರುತ್ತೇನೆ ಎಂಬ ಸುದ್ದಿ ಹರಡಿದ್ದರಿಂದ, ಕೆಲವು ರಾಜಕಾರಣಿಗಳು ಕೂಡಾ ಫೋನು ಮಾಡಿ ಸುಖ-ದುಃಖ ವಿಚಾರಿಸಲು ಶುರು ಮಾಡಿದರು. ನಾನು ರಾಜಕೀಯಕ್ಕೆ ಬರಲ್ಲ ಎಂದು ಅವರಿಗೂ ಹೇಳಿದ ನಂತರ ಅವರು ನಿಟ್ಟುಸಿರಿಟ್ಟರು.

ನನ್ನ ಪ್ರಕಾರ ಪಾಲಿಟಿಕ್ಸ್ ಈಸ್ ಎ ಗೇಮ್. ಆದರೆ ಆ ಆಟ ನನಗಿಷ್ಟವಿಲ್ಲ. ಸಿನಿಮಾ ಈಸ್ ಆಲ್ಸೋ ಎ ಗೇಮ್. ಆದರೆ ಸಿನಿಮಾದಲ್ಲಿ ಸತ್ಯಕ್ಕೆ ಸ್ಥಾನವಿದೆ. ಅಷ್ಟೇ ಅಲ್ಲ, ಇಲ್ಲಿ ನಾವೆಲ್ಲ ಒಂದೇ ಕುಟುಂಬದವರು ಎಂಬ ವಾತಾವರಣ ಇದೆ. ಹೀಗಾಗಿ ನಾನು ಸಿನಿಮಾ ನಟನಾಗಿಯೇ ಮುಂದುವರೆಯುತ್ತೇನೆ ವಿನಃ ರಾಜಕೀಯಕ್ಕೆ ಧುಮುಕುವುದಿಲ್ಲ.

'ನಮ್ಮೂರ ಮಂದಾರ ಹೂವೇ' ನಂತರ ನಮ್ಮ ಸ್ವಂತ ಬ್ಯಾನರ್‌ನಲ್ಲಿ 'ಜನುಮದ ಜೋಡಿ' ಚಿತ್ರವನ್ನು ಆರಂಭಿಸುವುದೆಂದು ನಿರ್ಧರಿಸಲಾಯಿತು. ನಿರ್ದೇಶಕ ನಾಗಾಭರಣರವರು ಅಪ್ಪಾಜಿ, ಅಮ್ಮ ಮತ್ತು ಚಿಕ್ಕಪ್ಪನವರಿಗೆ ಅದರ ಕತೆಯನ್ನು ಆಗಲೇ ಹೇಳಿದ್ದರು. ಅವರೆಲ್ಲ ಒಪ್ಪಿಕೊಂಡಿದ್ದರೂ ನಾಗಾಭರಣ ನನ್ನ ಗ್ರೀನ್ ಸಿಗ್ನಲ್‌ಗಾಗಿ ಕಾಯುತ್ತಿದ್ದರು.


"ನೀವು ಕತೆ ಓಕೆ ಮಾಡಿದನಂತರ ನನ್ನದೇನೂ ಅಭ್ಯಂತರವಿಲ್ಲ ಅಪ್ಪಾಜಿ" ಎಂದು ನಾನು ಹೇಳಿದರೂ ಅವರು ಒಪ್ಪಲಿಲ್ಲ. "ನೋಡು ಕಂದಾ... ಸಿನಿಮಾದಲ್ಲಿ ನಟಿಸುವುದು ನೀನು. ನಾವು ಓಕೆ ಮಾಡಿದರೂ ನಿನ್ನನ್ನೂ ಒಮ್ಮೆ ಕೇಳಲೇಬೇಕು" ಎಂದು ಹೇಳಿದರು. ಹಾಗಾದರೆ ನನಗೆ ಒನ್‌ಲೈನ್ ಸ್ಟೋರಿ ಹೇಳಿ ಎಂದು ಭರಣ ಅವರಿಗೆ ಹೇಳಿದೆ. ಆಗ ಅವರು ಕತೆ ಹೇಳಿದರು: "ಒಂದು ಊರಿನಲ್ಲಿ ಜಾತ್ರೆ. ಆ ಜಾತ್ರೆಯಲ್ಲಿ ನೀನೊಂದು ಹುಡುಗಿಯನ್ನು ಭೇಟಿಯಾಗುತ್ತಿ. ಪ್ರೀತಿ ಮೊಳಕೆಯೊಡೆಯುತ್ತದೆ. ಮುಂದಿನ ವರ್ಷ ಅದೇ ಜಾತ್ರೆಯಲ್ಲಿ ಕ್ಲೈಮಾಕ್ಸ್. ಆದರೆ ಈ ಒಂದು ವರ್ಷದಲ್ಲಿ ಆಕೆಗೆ ಮದುವೆ ಆಗಿರುತ್ತೆ."


ನಾನು ಅಷ್ಟಕ್ಕೇ "ಫೆಂಟಾಸ್ಟಿಕ್. ಇನ್ನು ಕತೆ ಹೇಳುವುದು ಬೇಡ. ನಾನು ಇದನ್ನು ಮಾಡ್ತೀನಿ" ಎಂದು ಹೇಳಿದೆ. ಹೀಗೆ ಜನುಮದ ಜೋಡಿ ಚಿತ್ರ ಆರಂಭವಾಯಿತು. 'ನಮ್ಮೂರ ಮಂದಾರ ಹೂವೇ'ಯಲ್ಲಿ ಅಪ್ಪಾಜಿ ಕತೆ ಕೇಳುವಾಗಲೇ ಚಿತ್ರ ನೋಡಿದ್ದರಲ್ಲ..... ಅದೇ ರೀತಿ ನಾಗಾಭರಣ ಒನ್ ಲೈನ್ ಕತೆ ಹೇಳುವಾಗಲೇ ನಾನು ಚಿತ್ರವನ್ನು ವಿಶ್ಯುಯಲೈಸ್ ಮಾಡಿಕೊಂಡಿದ್ದೆ. ಅಪ್ಪಾಜಿ ಥರ ನಾನೂ ಕತೆ ಕೇಳುವಾಗಲೇ ಚಿತ್ರವನ್ನು ನೋಡುವ ಕಲೆಯನ್ನು ಕಲಿತಿರುವೆ ಎಂದು ಸಂತೋಷಪಟ್ಟಿದ್ದೆ. ಆದರೆ ಅದನ್ನು ಅಪ್ಪಾಜಿ ಬಳಿ ಹೇಳುವ ಧೈರ್ಯ ನನಗಿರಲಿಲ್ಲ.

ಈ ಚಿತ್ರಕ್ಕೆ ಶಿಲ್ಪಾಳನ್ನೇ ನಾವು ಆಯ್ಕೆ ಮಾಡಿದ್ದು ಯಾಕೆ ಗೊತ್ತಾ? ಆಕೆಯ ಹೆಸರನ್ನು ಶಿಫಾರಸ್ಸು ಮಾಡಿದ್ದು ಯಾರು ಎಂಬಿತ್ಯಾದಿ ವಿಷಯಗಳನ್ನು ಮುಂದಿನ ವಾರ ಹೇಳುತ್ತೇನೆ.

(ಮುಂದುವರೆಯುತ್ತದೆ...)

ಕ್ರೇಜಿ ಜೊತೆ ಕೇಜಿ





ಜಗ್ಗೇಶ್‌ಗೆ ಈ ವರ್ಷ ಖಂಡಿತಾ ಶುಕ್ರದೆಸೆ.


ಕಳೆದ ಬಾರಿ ವಿಷ್ಣುವರ್ಧನ್ ಜೊತೆ ಜಗ್ಗೇಶ್ ನಟಿಸುತ್ತಿರುವ ಸುದ್ದಿಯನ್ನು ನಾವು ನೀಡಿದ್ದೆವು. ಈಗ ಕ್ರೇಜಿ ಸ್ಟಾರ್ ರವಿಚಂದ್ರನ್ ಜೊತೆ ಜಗ್ಗೇಶ್ ನಟಿಸಲಿರುವ ಸುದ್ದಿ ಬಂದಿದೆ.

ಸುಮಾರು ಒಂಭತ್ತು ವರ್ಷಗಳ ಹಿಂದೆ ಈ ಕ್ರೇಜಿ ಮತ್ತು ಕೇಜಿ ಸ್ಟಾರ್ 'ಗಡಿಬಿಡಿ ಗಂಡ' ಎಂಬ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದರು. ಆ ಚಿತ್ರದಲ್ಲಿ ಜಗ್ಗೇಶ್ ವಿಪ್ಪು ಚೆನ್ನಾಗಿ ನಟಿಸಿದ್ದರೆಂದರೆ ಚಿತ್ರ ನೋಡಿದ ನಂತರ ರವಿಚಂದ್ರನ್ ಬದಲಿಗೆ ಜಗ್ಗೇಶ್ ಪಾತ್ರವೇ ನೆನಪಿನಲ್ಲಿ ಉಳಿಯುವಂತಿತ್ತು, ಎಲ್ಲರೂ ಜಗ್ಗೇಶನನ್ನು ಕೊಂಡಾಡಿದ್ದು ಅವರ ಪಾಲಿಗೆ ವರವಾಗುವ ಬದಲು ಶಾಪವಾಯಿತೋ ಏನೋ? ಯಾಕೆಂದರೆ ಆನಂತರ ಇವರಿಬ್ಬರೂ ಒಟ್ಟಿಗೇ ನಟಿಸಲೇ ಇಲ್ಲ, ಈಗ ಒಂಭತ್ತು ವರ್ಷಗಳ ನಂತರ ಜಗ್ಗೇಶ್‌ಗೆ ಕ್ರೇಜಿ ಸ್ಟಾರ್ ಜೊತೆ ನಟಿಸುವ ಭಾಗ್ಯ ಸಿಕ್ಕಿದೆ.

ತಲುಪದಿರುವ 'ಎಸ್ಸೆಮ್ಮೆಸ್'

ಸಂದೀಪ್ ಮಲಾನಿ ಎಂಬ ಮಾಜಿ ಪತ್ರಕರ್ತನ 'ಎಸ್ಸೆಮ್ಮೆಸ್ 6260' ಎಂಬ ವಿಭಿನ್ನ ಹೆಸರಿನ ಚಿತ್ರ ಬಿಡುಗಡೆಯಾಗಿದೆ.

ಹಲವಾರು ವರ್ಷ ವಿಮರ್ಶೆಗಳನ್ನು ಬರೆದು ನಿರ್ದೇಶಕರ ಓರೆಕೋರೆಗಳನ್ನು ತಿಳಿಸುತ್ತಿದ್ದ ಸಂದೀಪ್‌ನ ಚಿತ್ರದಲ್ಲೂ ಓರೆಕೋರೆಗಳೇ ತುಂಬಿತುಳುಕಿರುವುದು ವಿಪರ್ಯಾಸ. ಹಸಿ ಹಸಿಯಾಗಿರುವ ನಿರೂಪಣೆ, ಸಡಿಲವಾದ ಸಂಕಲನಗಳಿಂದಾಗಿ 'ಎಸ್ಸೆಮ್ಮೆಸ್' ಮನಸ್ಸಿಗೆ ತಾಕುವುದಿಲ್ಲ. ಆದರೂ ಒಂದು ವಿಭಿನ್ನ ಕಥಾವಸ್ತುವನ್ನು ಕೈಗೆತ್ತಿಕೊಂಡು ರಿಯಲಿಸ್ಟಿಕ್ ಶೈಲಿಯಲ್ಲಿ ನಿರೂಪಿಸುತ್ತಾ ಹೋಗುವ ಸಂದೀಪ್ ಒಂದು ರೀತಿಯಲ್ಲಿ ಇಂಗ್ಲಿಷ್-ತೆಲುಗಿನಲ್ಲಿ ಬಂದ 'ಹೈದರಾಬಾದ್ ಬ್ಲೂಸ್' ಚಿತ್ರವನ್ನು ನೆನಪಿಸಿದರೂ ಆ ಚಿತ್ರದ ಗುಣಮಟ್ಟ ಮಾತ್ರ ಇದರಲ್ಲಿಲ್ಲ, ಎಲ್ಲ ಹೊಸಬರನ್ನು ಹಾಕಿಕೊಂಡು ಮಾಡಿರುವ ಈ ಚಿತ್ರ ಸ್ವಪ್ನ ಥಿಯೇಟರಿನಲ್ಲಿ ಬಿಡುಗಡೆಯಾಗಿದೆ ಎಂದರೆ ಅದು ಹೇಗಿದೆ ಎಂಬುದನ್ನು ನಿಮ್ಮ ಊಹೆಗೆ ಬಿಡುತ್ತೇವೆ.



'ಗವಾಯಿ' ಆಗದ 'ದೇವಿ'





ನಿರ್ದೇಶಕ ಚಿಂದೋಡಿ ಬಂಗಾರೇಶ್ ಮತ್ತು ಸಂಗೀತ ನಿರ್ದೇಶಕ ಹಂಸಲೇಖಾ ಜೋಡಿ 'ಗಾನಯೋಗಿ ಪಂಚಾಕ್ಷರ ಗವಾಯಿ' ಚಿತ್ರದ ನಂತರ 'ಶ್ರೀ ದಾನಮ್ಮದೇವಿ' ಚಿತ್ರದಲ್ಲಿ ಮತ್ತೆ ಒಂದಾಗಿದ್ದಾರೆ. ಬಸವಣ್ಣನವರ ಸಮಕಾಲೀನಳಾದ ಶರಣೆ ದಾನಮ್ಮದೇವಿಯ ಮಹಾತ್ಮೆಯನ್ನು ಸಾರುವ ಈ ಚಿತ್ರ ಅವರ ಅನುಯಾಯಿಗಳಿಗೆ ಖಂಡಿತವಾಗಿಯೂ ತುಂಬ ಇಷ್ಟವಾಗಬಹುದು, ಆದರೆ ಉಳಿದವರಿಗೆ ಕಷ್ಟವಾಗಬಹುದು. ಯಾಕೆಂದರೆ ಒಂದು ರೀತಿಯಲ್ಲಿ ಈ ವೈಜ್ಞಾನಿಕ ಯುಗದಲ್ಲಿ ಆಕೆಯನ್ನು ಸಾಧನಾಶೀಲ ಶರಣೆಯನ್ನಾಗಿ ತೋರಿಸುವ ಬದಲು ಕೆಲವೆಡೆ ಪವಾಡ ದೇವತೆಯ ರೀತಿ ಬಿಂಬಿಸಿದ್ದಾರೆ. ಇದರ ಬಗ್ಗೆ ಚಿಂದೋಡಿ ಬಂಗಾರೇಶ್ ಸ್ವಲ್ಪ ಮುತುವರ್ಜಿ ವಹಿಸಿದ್ದರೆ ಈ ಚಿತ್ರವೂ 'ಪಂಚಾಕ್ಷರಿ ಗವಾಯಿ' ತರಹ ಎಲ್ಲರೂ ಮೆಚ್ಚುವಂತಾಗುತ್ತಿತ್ತು. ಆದರೂ ಈ ಚಿತ್ರದ ಮುಖಾಂತರ ಹಂಸಲೇಖಾ ತಾನೊಬ್ಬ ಪ್ರತಿಭಾವಂತ ಸಂಗೀತ ನಿರ್ದೇಶಕ ಎಂಬುದನ್ನು ಮತ್ತೊಮ್ಮೆ ರುಜುವಾತುಪಡಿಸಿದ್ದಾರೆ.

ಚಿತ್ರದ ವಿಶೇಷವೆಂದರೆ ಅನು ಪ್ರಭಾಕರ್ ಎಂಬ ಹೊಸ ತಲೆಮಾರಿನ ಹುಡುಗಿ ದಾನಮ್ಮದೇವಿಯಾಗಿ ಪ್ರಬುದ್ಧ ಪಾತ್ರವನ್ನು ಲೀಲಾಜಾಲವಾಗಿ ನಿರ್ವಹಿಸಿರುವುದು.

R.B.P. LANKESH, Kannada Weekly Price Rs. 10/- 7-3-2007 RNI No. KARKAN2005/14648 Regd.No.KA/BG(S)/2036/2005-07



ಮನೋ ಮೂರ್ತಿ ಎಂಬ 'ಹಾಟ್' ಐಟಮ್!

'ಮುಂಗಾರು ಮಳೆ' ಚಿತ್ರ ಹಿಟ್ ಆದ ನಂತರ ಸಂಗೀತ ನಿರ್ದೇಶಕ ಮನೋ ಮೂರ್ತಿಗೆ ಬೇಡಿಕೆ ಹೆಚ್ಚಾಗಿದೆ. ಇವರು ದೂರದ ಅಮೆರಿಕಾದಲ್ಲಿ ವಾಸಿಸುತ್ತಿದ್ದರೂ ಗಾಂಧಿನಗರದವರು "ನಮ್ಮ ಸಿನಿಮಾಗೆ ಸಂಗೀತ ನೀಡಿ" ಎಂದು ದಂಬಾಲು ಬೀಳುತ್ತಿದ್ದಾರೆ. ನಿರ್ದೇಶಕ ಎಸ್. ನಾರಾಯಣ್ ಈಮೇಲ್ ಮುಖಾಂತರ ತಮ್ಮ ಮುಂದಿನ ಚಿತ್ರಕ್ಕೆ ಮನೋ ಮೂರ್ತಿಯನ್ನು ಸಂಗೀತ ನಿರ್ದೇಶಕರಾಗಿ ಬುಕ್ ಮಾಡಿಕೊಂಡಿದ್ದಾರೆ.

'ಅಮೆರಿಕ ಅಮೆರಿಕ' ಚಿತ್ರದ ಮುಖಾಂತರ ಸಂಗೀತ ನಿರ್ದೇಶಕರಾಗಿ ಪರಿಚಯಿಸಲ್ಪಟ್ಟ ಈ ಮೃದು ಮಾತಿನ ವ್ಯಕ್ತಿ ತನ್ನ ಕೆಲಸದಿಂದಲೇ ಸದ್ದು ಮಾಡಿದವರು. ಅವರ ಸಂಗೀತ ನೀಡಿದ್ದ 'ನನ್ನ ಪ್ರೀತಿಯ ಹುಡುಗಿ', 'ಪ್ರೀತಿ ಪ್ರೇಮ ಪ್ರಣಯ', 'ಅಮೃತಧಾರೆ' ಮತ್ತು ಇದೀಗ 'ಮುಂಗಾರು ಮಳೆ' ಎಲ್ಲವೂ ಬಾಕ್ಸಾಫೀಸಿನಲ್ಲಿ ಹಿಟ್ ಆಗಿದ್ದರಿಂದ ಅವರನ್ನು ಈಗ ಗಾಂಧಿನಗರದ ಚಿತ್ರ ಬ್ರಹ್ಮರು ಲಕ್ಕಿ ಮ್ಯೂಸಿಕ್ ಡೈರೆಕ್ಟರ್ ಎಂದು ಕರೆಯಲು ಶುರು ಮಾಡಿದ್ದಾರೆ. ಆ ಕಾರಣಕ್ಕೆ ಅನ್‌ಲಕ್ಕಿ ನಾರಾಯಣ್ ಈಗ ಲಕ್ಕಿ ಮನೋ ಮೂರ್ತಿ ಕಡೆಗೆ ವಾಲಿದ್ದಾರೆ.

ಇಂಜಿನಿಯರ್ ಆಗಿರುವ ಮನೋ ಮೂರ್ತಿಯವರು ಒಂದು ಖ್ಯಾತ ಕಂಪನಿಯ ಮಾಲೀಕರಾಗಿದ್ದು ತಿಂಗಳಿಗೆ ಹೇರಳವಾಗಿ ಹಣ ಸಂಪಾದಿಸುತ್ತಾರೆ. ಸಂಗೀತ ನಿರ್ದೇಶನ ಅವರ ಪಾಲಿಗೊಂದು ಹಾಬಿ. ಈ ಹಾಬಿಯಿಂದಾಗಿ ಅವರ ಜೀವನ ನಡೆಯಬೇಕಾಗಿಲ್ಲ, ಆದ್ದರಿಂದ ನಿರ್ಮಾಪಕ ಕೊಟ್ಟಷ್ಟು ದುಡ್ಡನ್ನು ಜೇಬಿಗಿಳಿಸುವ ಮನೋ ಮೂರ್ತಿಯವರು ಈ ಕಾರಣಕ್ಕೂ ಗಾಂಧಿನಗರದವರಿಗೆ ಇಷ್ಟವಾಗಿರಬಹುದು.

ಆದರೆ ಸಂಗೀತವನ್ನೇ ಉಸಿರಾಗಿರಿಸಿಕೊಂಡಿರುವ ಗುರುಕಿರಣ್ ಮತ್ತು ಹಂಸಲೇಖಾ ಅವರಿಗಿಂತ ಈಗ ಇವರಿಗೆ ಗಾಂಧಿನಗರದಲ್ಲಿ ಬೇಡಿಕೆ ಹೆಚ್ಚಾಗಿರುವುದು ಆಶ್ಚರ್ಯವೆನಿಸುತ್ತಿದೆ.



'ಸಜ್ಜನಿ' ಶರ್ಮಿಳಾ

'ಸಜನಿ' ಎಂಬ ಚಿತ್ರದ ಮುಖಾಂತರ ಕನ್ನಡಕ್ಕೊಬ್ಬಳು ಶ್ರೀಮಂತ ನಾಯಕಿ ಪರಿಚಿತಳಾಗಿದ್ದಾಳೆ. ಆಕೆಯ ಹೆಸರು ಶರ್ಮಿಳಾ. ಈಕೆ ಕನ್ನಡ ಮತ್ತು ಹಿಂದಿ ಚಿತ್ರರಂಗದಲ್ಲಿ ಹಂಚಿಕೆದಾರರಾಗಿ ದೊಡ್ಡ ಹೆಸರು ಮಾಡಿರುವ ಮಾಂಡ್ರೆ ಅವರ ಮೊಮ್ಮಗಳು.

ಇವರೇ ನಿರ್ಮಿಸಿದ 'ಸಜನಿ' ಚಿತ್ರ ಈಗ ತೆರೆ ಕಂಡಿದೆ. ಈ ಚಿತ್ರದಲ್ಲಿ ಮೊಟ್ಟಮೊದಲಬಾರಿಗೆ ಕ್ಯಾಮೆರಾ ಎದುರಿಸಿದ ಶರ್ಮಿಳಾ ಬಿಂದಾಸ್ ಆಗಿ ನಟಿಸಿದ್ದಾಳೆ. ಗ್ಲಾಮರ್ ಡ್ರೆಸ್‌ಗಳಲ್ಲಂತೂ ಹಿಂದಿಯ ಮಹಿಮಾ ಚೌಧರಿಯ ಥರ ಕಾಣಿಸುತ್ತಾಳೆ. ಆದರೆ ಈಕೆಯನ್ನು ಕ್ಲೋಸಪ್‌ನಲ್ಲಿ ನೋಡುವುದು ಸ್ವಲ್ಪ ಕಷ್ಟವಾಗುತ್ತದೆ. ಭಾವನಾತ್ಮಕ ದೃಶ್ಯ ಮತ್ತು ಕುಣಿತಗಳಲ್ಲಿ ಚೆನ್ನಾಗಿ ನಟಿಸಿದ್ದಾಳೆ. ಹೀಗಾಗಿ ಈ ಹುಡುಗಿ ಒಳ್ಳೆಯ ನಿರ್ದೇಶಕರ ಕೈಕೆಳಗೆ ಕೆಲಸ ಮಾಡಿದರೆ ಶ್ರೀಮಂತ ಕಲಾವಿದೆಯೂ ಆಗಬಹುದು.

'ಸಜನಿ' ತಮಿಳಿನ 'ಜೋಡಿ' ಚಿತ್ರದ ರೀಮೇಕ್. ಹೀಗಾಗಿ 'ಜೋಡಿ' ಚಿತ್ರಕ್ಕೆ ಎ. ಆರ್. ರೆಹಮಾನ್ ನೀಡಿದ್ದ ಸಂಗೀತವನ್ನೇ ಇದರಲ್ಲಿ ಭಟ್ಟಿ ಇಳಿಸಿದ್ದಾರೆ. ಹೀಗಾಗಿ ರೆಹಮಾನ್ ಸಂಗೀತ ನಿರ್ದೇಶನದ ಮೊಟ್ಟ ಮೊದಲ ಕನ್ನಡ ಚಿತ್ರ ಎಂದು ನೀವು ಇದನ್ನು ನೋಡಲು ಹೋದರೆ ನಿಮಗೆ ನಿರಾಶೆ ಕಟ್ಟಿಟ್ಟ ಬುತ್ತಿ.

ಸವಿಸವಿ ನೆನಪು
ಪ್ರೇಂ ಮತ್ತು ಮಲ್ಲಿಕಾ ಕಪೂರ್



ಝೀಯಿಂದ ಮಾಳವಿಕಾ ಔಟ್!



ಮಾಳವಿಕಾ ಯಾವುದೇ ಮಾಯ ಮಾಡಲಾಗದೇ ಬರಿಗೈಯಲ್ಲಿ ಝೀ ಟೀವಿಯನ್ನು ತೊರೆದಿದ್ದಾರೆ. ನಾಲ್ಕು ತಿಂಗಳ ಹಿಂದೆ ಈಕೆಯನ್ನು ಝೀ ಟೀವಿಯ ಕಾರ್ಯಕ್ರಮದ ಮುಖ್ಯಸ್ಥೆಯಾಗಿ ನೇಮಕ ಮಾಡಿದಾಗ ಈಕೆಯಿಂದ ಮ್ಯಾಜಿಕ್ ಮತ್ತು ಜಾದೂವನ್ನು ಆಡಳಿತ ಮಂಡಳಿಯವರು ನಿರೀಕ್ಷಿಸಿದ್ದರು. ಆದರೆ ಮಾಳವಿಕಾ ಝೀ ಟೀವಿಗೆ ಕಾಲಿಟ್ಟನಂತರ ಅಲ್ಲಿಯ ಇತರ ಉದ್ಯೋಗಿಗಳು ಒಬ್ಬೊಬ್ಬರೇ ಕಾಲುಕಿತ್ತರು. ಈಕೆ ತನ್ನ ಸ್ವಂತ ಬಲದಿಂದ ಚಿತ್ರಶ್ರೀ ಮುಂತಾದ ಒಂದಿಬ್ಬರನ್ನು ಚಾನೆಲ್‌ಗೆ ಸೇರಿಸಿದಳು. ಈಕೆಯ ವರ್ಚಸ್ಸು, ಪ್ರತಿಭೆ, ಕಾಂಟ್ಯಾಕ್ಸ್ಟ್ ಮತ್ತು ಅಹಂಕಾರ ಇದ್ಯಾವುದರಿಂದಲೂ ಟಿಆರ್‌ಪಿ ರೇಟನ್ನು ಏರಿಸಲು ಸಾಧ್ಯವಾಗಲಿಲ್ಲ. ಈ ಮಧ್ಯೆ ಆ ಚಾನೆಲ್ಲಿನ ಹಿರಿಯ ಅಧಿಕಾರಿಗಳೆಲ್ಲರೂ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಬಾರದವರಾಗಿದ್ದು ಅಂತವರೊಂದಿಗೆ ಏಗುವುದು ಅಸಾಧ್ಯ ಎಂದು ಮಾಳವಿಕಾ ಹೇಳಿದ್ದಾಳೆ.

ಕೊನೆಗೆ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಮಾಳವಿಕಾ ಝೀಯಿಂದ ಹೊರಬಂದಿದ್ದಾರೆ. ಇನ್ನುಮುಂದೆ ಎಂದಿನಂತೆ ಧಾರಾವಾಹಿಗಳಲ್ಲಿ ಕಾಣಿಸುತ್ತಾರೋ ಅಥವಾ ಇನ್ಯಾವುದೋ ಚಾನೆಲ್‌ನ ಮುಖ್ಯಸ್ಥೆಯಾಗುತ್ತಾಳೋ ಗೊತ್ತಿಲ್ಲ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44